ತುಳುನಾಡಿನ ಗೋಂದೋಳು ಪೂಜೆ

ಮಾಸ್ಟರ್ ಆಫ್ ಫಿಲಾಸಫಿ (ಎಂ.ಫಿಲ್) ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಪ್ರೌಢ ಪ್ರಬಂಧ

ಸಂಶೋಧಕ
ಮೋಹನ್ ಎಸ್.

ಮಾರ್ಗದರ್ಶಕ
ಡಾ. ಸ.ಚಿ.ರಮೇಶ್

ಜಾನಪದ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

೨೦೦೨

33

ತುಳುನಾಡಿನ ಗೋಂದೋಳು ಪೂಜೆ

ಮಾಸ್ಟರ್ ಆಫ್ ಫಿಲಾಸಫಿ (ಎಂ.ಫಿಲ್) ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಪ್ರೌಢ ಪ್ರಬಂಧ

ಸಂಶೋಧಕ
ಮೋಹನ್ ಎಸ್.

ಮಾರ್ಗದರ್ಶಕ
ಡಾ. ಸ.ಚಿ.ರಮೇಶ್

ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

೨೦೦೨

ದೃಢೀಕರಣ ಪತ್ರ

ಶ್ರೀ ಮೋಹನ್ ಎಸ್. ಇವರು 'ತುಳುನಾಡಿನ ಗೋಂದೋಳು ಪೂಜೆ' ಎಂಬ ಶೀರ್ಷಿಕೆಯ ಈ ಪ್ರೌಢ ಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ.

ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪ್ರಸ್ತುತ ಪ್ರಬಂಧವನ್ನು ಅಥವಾ ಪ್ರಬಂಧದ ಯಾವುದೇ ಭಾಗವನ್ನು ಇವರು ಈ ಮೊದಲು ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : ೩೦.೦೪.೨೦೦೨
ಸ್ಥಳ : ವಿದ್ಯಾರಣ್ಯ

(ಡಾ. ಸ.ಚಿ. ರಮೇಶ್)
ಮಾರ್ಗದರ್ಶಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಪ್ರಮಾಣ ಪತ್ರ

'ತುಳುನಾಡಿನ ಗೋಂದೋಳು ಪೂಜೆ' ಎಂಬ ಶೀರ್ಷಿಕೆಯ ಈ ಪ್ರೌಢ ಪ್ರಬಂಧವನ್ನು ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಡಾ. ಸ.ಚಿ.ರಮೇಶ್ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ.

ಪ್ರಸ್ತುತ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲೀ ಅಥವಾ ಇತರ ಉದ್ದೇಶಗಳಿಗಾಗಲೀ ಬಳಸಿಕೊಂಡಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ : ೩೦.೦೪.೨೦೦೨

ಸ್ಥಳ : ವಿದ್ಯಾರಣ್ಯ

(ಮೋಹನ್ ಎಸ್)

ಎಂ.ಫಿಲ್ ವಿದ್ಯಾರ್ಥಿ

ಜಾನಪದ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

ಕೃತಜ್ಞತೆಗಳು

- ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್ ಅಧ್ಯಯನ ಕೈಗೊಳ್ಳಲು ಅವಕಾಶ ಕಲ್ಪಿಸಿಕೊಟ್ಟ ಮಾನ್ಯ ಕುಲಪತಿಗಳಾದ ಡಾ. ಎಚ್.ಜೆ.ಲಕ್ಕಪ್ಪಗೌಡ ಮತ್ತು ಕುಲಸಚಿವರಾದ ಡಾ. ಕೆ.ವಿ.ನಾರಾಯಣ ಅವರಿಗೆ,
- ಮಾರ್ಗದರ್ಶನ ಮಾಡಿದ ಪ್ರೀತಿಯ ಗುರುಗಳಾದ ಡಾ. ಸ.ಚಿ.ರಮೇಶ್ ಅವರಿಗೆ,
- ಕ್ಷೇತ್ರಕಾರ್ಯ ಸಂದರ್ಭದಲ್ಲಿ ಮಾಹಿತಿ ನೀಡಿದ ವಕ್ತೃ ಬಾಂಧವರಿಗೆ,
- ಎಂ.ಫಿಲ್ ಅಧ್ಯಯನದ ಸಂದರ್ಭದಲ್ಲಿ ಸಂಶೋಧನೆಯ ವಿವಿಧ ಮಜಲುಗಳನ್ನು ಬೋಧಿಸಿದ ಜಾನಪದ ವಿಭಾಗದ ಮುಖ್ಯಸ್ಥರಾದ ಡಾ. ಮಂಜುನಾಥ ಬೇವಿನಕಟ್ಟಿ, ಅಧ್ಯಾಪಕರುಗಳಾದ ಡಾ. ಹೆಚ್.ಕೆ.ನಾಗೇಶ್, ಶ್ರೀ ಹರಿಶ್ಚಂದ್ರ ಸಾಯಿಬಣ್ಣ ದಿಂಗ್ಸಂಗೀಕರ್ ಮತ್ತು ಶ್ರೀ ಸಿ.ಟಿ. ಗುರುಪ್ರಸಾದ್ ಅವರಿಗೆ,
- ಅಧ್ಯಯನದ ಎಲ್ಲ ಸಂದರ್ಭಗಳಲ್ಲಿ ಸಹಕರಿಸಿ ವಿಷಯ ಕುರಿತಂತೆ ಚರ್ಚಿಸಿ ಸೂಕ್ತ ಸಲಹೆ ಸೂಚನೆಗಳನ್ನು ನೀಡಿದ ಡಾ. ಸುಬ್ಬಣ್ಣ ರೈ, ಡಾ. ಮಾಧವ ಪೆರಾಜೆ ಮತ್ತು ಡಾ. ಎಸ್.ಎ.ಕೃಷ್ಣಯ್ಯ ಅವರಿಗೆ,
- ಅಧ್ಯಯನಕ್ಕೆ ಸಹಕಾರ, ಪ್ರೋತ್ಸಾಹಗಳನ್ನಿತ್ತು ನನ್ನ ಶ್ರೇಯೋಭಿವೃದ್ಧಿಯನ್ನೇ ಬಯಸುವ ಕುಟುಂಬ ವರ್ಗದವರಿಗೆ,
- ಅಧ್ಯಯನ ಸಂದರ್ಭದಲ್ಲಿ ಸಹಕಾರ ನೀಡಿದ ಮಿತ್ರರಾದ ಪುತ್ತಿ ವಸಂತಕುಮಾರ್, ಜಿ.ಎಚ್. ನಾಗವರ್ಮ, ಲೋಕರಾಜ್ ದೊಡ್ಡಮನಿ ಮತ್ತು ಮುನಿರಾಜು ಇವರಿಗೆ,
- ಸಕಾಲದಲ್ಲಿ ಅಂದವಾಗಿ ಅಕ್ಷರ ಸಂಯೋಜಿಸಿಕೊಟ್ಟ ಸೋಮನಾಥ ಕುಡಿತಿನಿ ಅವರಿಗೆ,

ಹೃತ್ಪೂರ್ವಕ ಕೃತಜ್ಞತೆಗಳು

ದಿನಾಂಕ : ೩೦.೦೪.೨೦೦೨

ಸ್ಥಳ : ವಿದ್ಯಾರಣ್ಯ

ಮೋಹನ್ ಎಸ್.

ಪರಿವಿಡಿ

ಅಧ್ಯಾಯ : ೧

ಅಧ್ಯಯನದ ಉದ್ದೇಶ ವ್ಯಾಪ್ತಿ ಮತ್ತು ವಿಧಾನ

ಅಧ್ಯಾಯ : ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

೧.೧. ಅಧ್ಯಯನದ ಉದ್ದೇಶ

ವರ್ತಮಾನ ಕಾಲದಲ್ಲಿ ಜಾನಪದ ಅಧ್ಯಯನ ಹೆಚ್ಚು ಗಂಭೀರವಾಗಿಯೂ ಜನಪ್ರಿಯವಾಗಿಯೂ ಕಂಡು ಬರುತ್ತದೆ. ಜಾನಪದದ ಪ್ರತಿಯೊಂದು ಪ್ರಕಾರಗಳ ಸೂಕ್ಷ್ಮಾತಿಸೂಕ್ಷ್ಮ ಅಂಶಗಳು ಸಂಶೋಧನೆಗೆ ಒಳಪಡುತ್ತಿವೆ. ಆ ಮೂಲಕ ಸಹಜವಾಗಿಯೇ ಜಾನಪದ ಪ್ರಕಾರಗಳಲ್ಲಿನ ವ್ಯತ್ಯಾಸಗಳ ಮೇಲೆ ಅನೇಕ ತಾರ್ಕಿಕ ಪ್ರಶ್ನೆಗಳು ಏಳುತ್ತಿವೆ. ಇತ್ತೀಚಿನ ದಿನಗಳಲ್ಲಿ ಜಾನಪದವನ್ನು ಅದರ ಸಾಹಿತ್ಯದ ದೃಷ್ಟಿಯಿಂದ ನೋಡುವುದಿಲ್ಲ. ಆ ಸಂಪ್ರದಾಯ ಬಿಟ್ಟು ಒಂದು ನಿರ್ದಿಷ್ಟ ಸಮುದಾಯ ಅಥವಾ ಸಮಾಜವೊಂದನ್ನು ಸಮಗ್ರ ಚೌಕಟ್ಟಿನಲ್ಲಿರಿಸಿ ಅಧ್ಯಯನ ಮಾಡಲಾಗುತ್ತದೆ. ಅದು ಜಾನಪದದ ಎಲ್ಲಾ ಅಂಗ ಉಪಾಂಗಗಳು ಅದರ ಸಂಕೀರ್ಣತೆಯೊಂದಿಗೆ ಅಧ್ಯಯನಕ್ಕೆ ಎಡೆಮಾಡಿಕೊಡುತ್ತದೆ.

ಜಾನಪದ ನಮ್ಮ ಜನಪದರಿಂದ ಬಳುವಳಿಯಾಗಿ ಬಂದ ಒಂದು ಅತ್ಯಮೂಲ್ಯ ಆಸ್ತಿ. ನಮ್ಮ ಮುಂದಿರುವ ಶಾಸ್ತ್ರ, ಪುರಾಣ, ಧರ್ಮ, ಕಾನೂನು ನಂಬಿಕೆಗಳು ಹೀಗೆ ಅಸಂಖ್ಯಾತ ರೀತಿ, ನೀತಿ, ನಿಯಮ, ಸಂಪ್ರದಾಯಗಳು ಜನಪದರ ಕೊಡುಗೆಗಳು. ಮಾನವನ ಜೀವನವನ್ನು 'ಜಾನಪದ' ರೂಪಿಸಿದೆ. ಆತನ ಬದುಕಿಗೆ ಹೊಸ ಆಯಾಮವನ್ನು ನೀಡಿದೆ. ಒಂದು ಸಮಾಜವನ್ನು ರೂಪಿಸುವಲ್ಲಿ 'ಸಂಸ್ಕೃತಿ'ಯ ಪಾತ್ರ ಅತೀ ಮಹತ್ವದ್ದು. ಜನಪದ ಸಂಸ್ಕೃತಿ ಸಾಗುತ್ತಾ ಬದಲಾದ ಶಿಷ್ಟಸಂಸ್ಕೃತಿಗೆ ಸಹಕಾರಿಯಾಗಿ, ಬೆನ್ನೆಲುಬಾಗಿ ಮುಂದುವರಿಯುತ್ತಿದೆ. ಅಂತೆಯೇ ಜಾನಪದವನ್ನು ನಿತ್ಯ ಹರಿಯುವ ಹೊಳೆಗೆ ಹೋಲಿಸಬಹುದು. ಆ ಹೊಳೆಯಲ್ಲಿ ನಮ್ಮ ಸಾಮರ್ಥ್ಯಕ್ಕೆ ತಕ್ಕ ಬೊಗಸೆ ನೀರನ್ನು ಪಡೆಯಬಹುದು. ಚಲನಶೀಲ ಜಾನಪದ ಮತ್ತೂ ಮುಂದುವರಿಯುತ್ತಲೇ ಇರುತ್ತದೆ.

ಈ ನಿಟ್ಟಿನಲ್ಲಿ 'ತುಳುನಾಡಿನ ಗೋಂದೋಳು ಪೂಜೆ'ಯ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಕೃಷಿಯಾಧಾರಿತ ನಮ್ಮ ದೇಶದಲ್ಲಿ ಕೃಷಿ ಬದುಕು ಅಸಂಖ್ಯಾತ ಆಚರಣೆಗಳ ಗೂಡಾಗಿದೆ. ಜನಪದರು ಮೂಲ ಪ್ರಕೃತಿಯಿಂದ ಹಿಡಿದು ಪ್ರತಿಯೊಂದು ಜೀವಸಂಕುಲವನ್ನು ಪೂಜಿಸುತ್ತಾ ಗೌರವಿಸುತ್ತಾ ಕೃತಜ್ಞರಾಗುತ್ತಾ ಬಂದಿದ್ದಾರೆ. ಈಗಲೂ ನಮ್ಮ ಹಳ್ಳಿಗಳಲ್ಲಿ ವರ್ಷದ ಹನ್ನೆರಡು ತಿಂಗಳೂ ನಾನಾ ರೀತಿಯ ಆಚರಣೆಗಳು ನಡೆಯುತ್ತಲೇ ಇರುತ್ತವೆ. ಅಂಥ ಆಚರಣೆಗಳಲ್ಲಿ ಇದೂ ಒಂದು.

ಭಾರತೀಯ ಆರಾಧನಾ ಪರಂಪರೆಯಲ್ಲಿ 'ಸ್ತ್ರೀ' ಗೆ ಪ್ರಥಮ ಸ್ಥಾನ. 'ತಾಯಿ' ಸತ್ಯದ ಸೃಷ್ಟಿಯ ಒಂದು ರೂಪ ಎಂದು ಹೇಳುತ್ತಾರೆ. ಅತೀ ವಿಶಿಷ್ಟವಾಗಿ ಆಚರಿಸಲ್ಪಡುವ ಈ ಗೋಂದೋಳು ಪೂಜೆಯು ತುಳುನಾಡಿನಲ್ಲಿ 'ಅಮ್ಮನ ಸೇವೆ', 'ಶ್ರೀದೇವಿಯ ಪೂಜೆ' ಎಂಬುದಾಗಿ ಪ್ರಚಲಿತದಲ್ಲಿದೆ. ಅಧ್ಯಯನದಲ್ಲಿ ಆಚರಣೆಯ ಪೂರ್ಣ ವಿವರಗಳನ್ನು ಸೂಕ್ಷ್ಮವಾಗಿ ದಾಖಲಿಸಲಾಗಿದೆ. ಹಾಗೆಯೇ ಚಾರಿತ್ರಿಕ ಹಿನ್ನೆಲೆಯನ್ನೂ ಪರಿಶೀಲಿಸಲಾಗಿದೆ. ಈ ಆರಾಧನಾ ಕ್ರಮಗಳ ವಿಭಿನ್ನ ಬಗೆಗಳನ್ನು ಪರಿಶೀಲಿಸುವುದರ ಜತೆಗೆ ಇದು ಮೂಢನಂಬಿಕೆಗಳ ಗೂಡಾಗಿದೆಯೇ? ಆರೋಗ್ಯವಂತ ಸಮಾಜದ ಬೆಳವಣಿಗೆಯಲ್ಲಿ ಯಾವ ರೀತಿ ಸಹಾಯಕವಾಗಿದೆ? ಎಂಬುದರ ಬಗ್ಗೆ ಅಧ್ಯಯನ ಬೆಳಕು ಚೆಲ್ಲುವುದು. ಒಟ್ಟಾರೆಯಾಗಿ ಅಧ್ಯಯನದ ಮೂಲಕ ಹೊರಜಗತ್ತಿಗೆ ಒಂದು ವಿಶಿಷ್ಟ ಆಚರಣೆಯನ್ನು ಪ್ರಚಾರಪಡಿಸುವುದು. ಇಲ್ಲಿ ಕಂಡು ಬರುವ ಜಾನಪದೀಯ ಅಂಶಗಳನ್ನು ಗುರುತಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

೧.೨. ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನದ ವ್ಯಾಪ್ತಿ 'ತುಳುನಾಡು' ಎಂದು ಕರೆಯಲ್ಪಡುವ ಉಡುಪಿ, ದಕ್ಷಿಣ ಕನ್ನಡ ಮತ್ತು ಕಾಸರಗೋಡು ಜಿಲ್ಲೆಗಳನ್ನು ಒಳಗೊಂಡಿದೆ. ಉಡುಪಿ ಜಿಲ್ಲೆಯು ಉಡುಪಿ, ಕಾರ್ಕಳ ಮತ್ತು ಕುಂದಾಪುರ ತಾಲೂಕುಗಳನ್ನು ಹೊಂದಿದ್ದು ಉಡುಪಿ ಮುಖ್ಯ ಪಟ್ಟಣವಾಗಿದೆ. ಈ ಮೂರು ತಾಲೂಕುಗಳಲ್ಲಿ ಗೋಂದೋಳು ಪೂಜಾ ಆಚರಣೆಯನ್ನು ನೋಡಬಹುದು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಳ್ಯ, ಪುತ್ತೂರು ಬಂಟ್ವಾಳ, ಬೆಳ್ತಂಗಡಿ ಮತ್ತು ಮಂಗಳೂರು ತಾಲೂಕುಗಳಿವೆ. ಮಂಗಳೂರು ಜಿಲ್ಲೆಯ ಕೇಂದ್ರ ಸ್ಥಳವಾಗಿದೆ. ಸುಳ್ಯ, ಪುತ್ತೂರು, ಬಂಟ್ವಾಳ ತಾಲೂಕುಗಳಲ್ಲಿ ಅತೀ ಹೆಚ್ಚು ಗೋಂದೋಳು ಪೂಜೆಗಳು ನಡೆಯುತ್ತವೆ. ಬೆಳ್ತಂಗಡಿ ಮತ್ತು ಮಂಗಳೂರು ತಾಲೂಕುಗಳಲ್ಲಿಯೂ ಈ ಆಚರಣೆ ಪ್ರಚಲಿತದಲ್ಲಿದೆ. ಕೇರಳ ರಾಜ್ಯದ ಆಡಳಿತಕ್ಕೆ ಒಳಪಟ್ಟಿರುವ ಕಾಸರಗೋಡು ಜಿಲ್ಲೆಯು ಕಾಸರಗೋಡು ಮತ್ತು ಹೊಸದುರ್ಗ ಎಂಬ ಎರಡು

ತಾಲೂಕುಗಳನ್ನು ಹೊಂದಿದೆ. ಕಾಸರಗೋಡು ಕೇಂದ್ರ ಸ್ಥಳವಾಗಿದೆ. ಹೊಸದುರ್ಗಕ್ಕಿಂತ ಕಾಸರಗೋಡು ತಾಲೂಕಿನಲ್ಲಿ ಅತೀ ಹೆಚ್ಚು ಮರಾಠಿ ನಾಯ್ಕರು ವಾಸವಾಗಿದ್ದು ಈ ಆರಾಧನಾ ಕ್ರಮವನ್ನು ಕಾಣಬಹುದು.

೧.೩. ಅಧ್ಯಯನದ ವಿಧಾನ ಮತ್ತು ಆಕರ ಸಾಮಾಗ್ರಿಗಳು

ಕ್ಷೇತ್ರಕಾರ್ಯ ಅಧ್ಯಯನದ ಪ್ರಮುಖ ವಿಧಾನವಾಗಿದೆ. ಮೂರು ಜಿಲ್ಲೆಗಳನ್ನು ಹೊಂದಿರುವ ತುಳುನಾಡಿನ ಅನೇಕ ತಾಲೂಕುಗಳಲ್ಲಿ ನಡೆದ ಗೋಂದೋಳು ಪೂಜೆಗಳನ್ನು ವೀಕ್ಷಿಸಲಾಗಿದೆ. ಒಂದು ಆಚರಣೆಯ ಅಸ್ತಿತ್ವಕ್ಕೆ ಸಂಪ್ರದಾಯ, ನಿರೂಪಕ ಮತ್ತು ಪ್ರದರ್ಶನಕಾರ ಬಹುಮುಖ್ಯ ಅಂಶಗಳೆನಿಸುತ್ತವೆ. ಏಕಕಾಲಕ್ಕೆ ನಡೆಯುವ ಈ ಮೂಲಭೂತ ಅಂಶಗಳು ಪರಸ್ಪರ ಆಂತರಿಕ ಕ್ರಿಯೆಗಳು ಉಂಟಾಗಿ ರಚನೆಯ ರೂಪ ಪಡೆಯುತ್ತದೆ. ರೂಪ ಒಬ್ಬನಿಂದ ಪಡೆದರೂ ಸಂಪ್ರದಾಯ ಮತ್ತು ಸಮುದಾಯಗಳಿಂದ ಹೊರತಾಗಿ ಸ್ವತಂತ್ರವಾಗಿ ಒಬ್ಬ ಏನನ್ನೂ ಸೃಷ್ಟಿಸಲಾರ. ಈ ಅಧ್ಯಯನದ ಕ್ಷೇತ್ರಕಾರ್ಯ ಪ್ರದರ್ಶನಾತ್ಮಕವಾಗಿ ಕಂಡುಬರುವ ಆಚರಣೆಯನ್ನು ಬಹು ಆಯಾಮಗಳ ಮೂಲಕ ವಿಶ್ಲೇಷಿಸುವ ಕ್ರಿಯೆಯಾಗಿರುತ್ತದೆ.

ಕ್ಷೇತ್ರ ಕಾರ್ಯದಿಂದ ಸಂಗ್ರಹಿಸಿದ ಮಾಹಿತಿಗಳು ಅಧ್ಯಯನದ ಪ್ರಮುಖ ಆಕರ ಸಾಮಗ್ರಿಯಾಗಿದೆ. ಗೋಂದೋಳು ಪೂಜೆಯ ಕುರಿತು ಇದುವರೆಗೂ ಬಂದ ಗ್ರಂಥಗಳ ಪರಿವೀಕ್ಷಣೆಯಿಂದ ಹಾಗೂ ಇತರ ಲೇಖನಗಳಿಂದ ಸಾಮಾಗ್ರಿಗಳನ್ನು ಪಡೆದುಕೊಳ್ಳಲಾಗಿದೆ. ಗೋಂದೋಳು ಪೂಜೆಯನ್ನು ನೆರವೇರಿಸುವ ಪೂಜಾರಿಗಳ ಸಂದರ್ಶನ ಮತ್ತು ಸಂಶೋಧನಾ ವಿದ್ವಾಂಸರು ಸಂದರ್ಶನಗಳ ಸಹಾಯವನ್ನು ಪಡೆದುಕೊಳ್ಳಲಾಗಿದೆ.

೧.೪. ಈ ಕ್ಷೇತ್ರದಲ್ಲಿ ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

ತುಳುನಾಡಿನಲ್ಲಿ ಮರಾಠಿ (ನಾಯ್ಕ) ಸಮುದಾಯದವರು ಪ್ರಮುಖ ಪಾತ್ರ ವಹಿಸುವ ಈ ಗೋಂದೋಳು ಪೂಜೆಯ ಬಗ್ಗೆಯಾಗಲೀ ಮರಾಠಿಗರ ಕುರಿತಾಗಲೀ ಇದುವರೆಗೆ ಯಾವುದೇ ರೀತಿಯ ಸಂಶೋಧನೆ ನಡೆದಿಲ್ಲ. ಗೋಂದೋಳು ಪೂಜೆಯ ಬಗ್ಗೆ ಕೆಲವು ಬೆರಳೆಣಿಕೆಯ ಗ್ರಂಥಗಳಲ್ಲಿ ಲೇಖನಗಳು (ಪರಿಚಯಾತ್ಮಕ) ಪ್ರಕಟಗೊಂಡಿವೆ. ಕೈತಂಜೆ ನರಸಿಂಹ ಭಟ್ಟ 'ಸುದರ್ಶನ' ಗ್ರಂಥದಲ್ಲಿ ಕಿರುಲೇಖನ ಬರೆದಿದ್ದಾರೆ. ಪೂವಪ್ಪ ಕಣಿಯೂರು 'ಸಿರಿ' ಗ್ರಂಥದಲ್ಲಿ "ಶಕ್ತಿಯಾರಾಧನೆಯಾಗಿ ತುಳುನಾಡಿನ ಗೋಂದೋಳು ಪೂಜೆ" ಎಂಬ ಲೇಖನ ಪ್ರಕಟವಾಗಿದೆ. ಅಶೋಕ ಆಳ್ವರ 'ಒಳಸರಿ' ಗ್ರಂಥದಲ್ಲಿ ಗೋಂದೋಳು ಪೂಜೆ

ಒಂದು ಸಾಂಸ್ಕೃತಿಕ ಅಧ್ಯಯನ" ಮೂಡಿಬಂದಿದೆ. ಇದನ್ನು ತಿರುಮಲೇಶ್ವರ ಭಟ್ಟ ಇಂಗ್ಲೀಷ್‌ಗೆ ಅನುವಾದಿಸಿದ್ದಾರೆ.

ಉತ್ತರ ಕರ್ನಾಟಕದಲ್ಲಿ ಕಂಡುಬರುವ ಗೊಂದಲಿಗರ ಕುರಿತು ಸಂಶೋಧನೆ ಮಾಡಿದವರು ಗೊಂದಲಿಗರು ಮತ್ತು ತುಳುನಾಡಿನ ಮರಾಠಿಗರು ಒಂದೇ ಮೂಲದವರು ಎಂದು ಅಭಿಪ್ರಾಯ ಪಡುತ್ತಾರೆ. ಜೊತೆಗೆ ತುಳುನಾಡಿನಲ್ಲಿ ಕಂಡು ಬರುವ ಗೋಂದೋಳು ಪೂಜೆಯ ಹೆಸರು ನೀಡುತ್ತಾರೆ. ಆದರೆ ಸಂಶೋಧಕರಾಗಲೀ ತುಳುನಾಡಿನ ಗೋಂದೋಳು ಪೂಜೆಯನ್ನು ಅಧ್ಯಯನಕ್ಕೆ ಒಳಪಡಿಸಿಲ್ಲ. ಗೊಂದಲಿಗರ 'ಗೊಂದಲ ಹಾಕಿಸುವುದ'ಕ್ಕೂ ಈ 'ಗೋಂದೋಳು ಪೂಜೆ'ಗೂ ಯಾವುದೇ ಸಾಮ್ಯತೆ ಕಂಡುಬರುವುದಿಲ್ಲ.

◆

ಅಧ್ಯಾಯ : ೨

ಪ್ರಸ್ತಾವನೆ

೨.೧. ತುಳುನಾಡಿನ ಭೌಗೋಳಿಕ ಪರಿಚಯ

೨.೨. ಮರಾಠಿ (ನ್ಯಾಕ, ನಾಯ್ಕ) ಗರ ಮೂಲ

೨.೩. ಮರಾಠಿಗರ ವರ್ತಮಾನದ ಸ್ಥಿತಿಗತಿಗಳು

ಅಧ್ಯಾಯ : ೨

ಪ್ರಸ್ತಾವನೆ

೨.೧. ತುಳುನಾಡಿನ ಭೌಗೋಳಿಕ ಪರಿಚಯ.

ತುಳುನಾಡು ಪ್ರಾಚೀನ ಕಾಲದಲ್ಲಿ ಪರುಶುರಾಮ ಕ್ಷೇತ್ರ, ಪರುಶುರಾಮ ಸೃಷ್ಟಿ ಎಂದು ಕರೆಯಲ್ಪಡುತ್ತಿತ್ತು. ವರ್ತಮಾನ ಕಾಲದಲ್ಲಿ ಭೌಗೋಳಿಕವಾಗಿ ಮೂರು ಜಿಲ್ಲೆಗಳನ್ನು ಹೊಂದಿದೆ. ಕರಾವಳಿ ಪ್ರದೇಶಗಳಾದ ದಕ್ಷಿಣ ಕನ್ನಡ, ಉಡುಪಿ ಮತ್ತು ಕಾಸರಗೋಡು ಜಿಲ್ಲೆಗಳನ್ನು ಒಳಗೊಂಡಿದೆ. ಕಾಸರಗೋಡು ಆಡಳಿತಾತ್ಮಕವಾಗಿ ಕೇರಳ ರಾಜ್ಯಕ್ಕೆ ಒಳಪಟ್ಟರೂ ಸಾಂಸ್ಕೃತಿಕವಾಗಿ ಕರ್ನಾಟಕದ ಜೊತೆಯಲ್ಲಿದೆ. ತುಳುನಾಡಿನ ಪಶ್ಚಿಮ ಭಾಗದಲ್ಲಿ ವಿಶಾಲ ಅರಬ್ಬೀ ಸಮುದ್ರ ಪ್ರಶಾಂತವಾಗಿದ್ದರೆ ಪೂರ್ವ ಭಾಗದಲ್ಲಿ ಪಶ್ಚಿಮ ಘಟ್ಟಗಳು ಸಮೃದ್ಧ ಕಾಡುಗಳ ಹಸಿರು ತೋರಣ ಕಟ್ಟಿವೆ.

ಪ್ರಾಚೀನ ಕರ್ನಾಟಕ ರಾಜ್ಯದ ದಕ್ಷಿಣದ ಗಡಿ ಕಾಸರಗೋಡಿನ ಚಂದ್ರಗಿರಿ - ಪಯಸ್ವಿನಿ ಹೊಳೆಯಾಗಿದೆ. ವಸಾಹತುಶಾಹಿ ವಿದೇಶಿಯರು ಈ ಕರಾವಳಿ ಪ್ರದೇಶವನ್ನು 'ಕೆನರಾ' ಎಂದು ಕರೆದರೂ ಪುರಾತನ ಮೂಲ ಹೆಸರು 'ತುಳುನಾಡು'. ಉತ್ತರದ ಗೋಕರ್ಣದಿಂದ ದಕ್ಷಿಣದ ಚಂದ್ರಗಿರಿ ಹೊಳೆಯವರೆಗೆ ತುಳುನಾಡು ಎಂಬ ಹೇಳಿಕೆಯಿದೆ. ನಾವು ತುಳು ಭಾಷೆಯನ್ನಾಡುವ ಜನರು ಇರುವ ಪ್ರದೇಶವನ್ನು ಗಮನಿಸಿದರೆ ಉಡುಪಿಯ ಕಲ್ಯಾಣಪುರ ನದಿಯಿಂದ ಕಾಸರಗೋಡಿನ ಚಂದ್ರಗಿರಿ - ಪಯಸ್ವಿನಿ ನದಿಯವರೆಗೆ ತುಳುನಾಡು ಎಂಬುದಾಗಿ ಹೇಳಬಹುದು.

ನೆಲದ ಶ್ರೇಷ್ಠ ಗುಣದಿಂದ, ಜಲ, ಫಲ, ಸಮೃದ್ಧಿಯಿಂದ ಸಾಹಿತ್ಯ ಸಂಸ್ಕೃತಿ ಕಲೆಗಳಿಂದ ಸರಳ ಸಜ್ಜನಿಕೆಯಿಂದ ತುಳುನಾಡು ಪ್ರಖ್ಯಾತವಾಗಿದೆ. ಪ್ರತಿವರ್ಷವೂ ಸುಮಾರು ೩೦೦ಸೆ.ಮೀ. ಮಳೆಯಾಗುವ

ಈ ಪ್ರದೇಶ ಬೇಸಿಗೆಯಲ್ಲಿ ಬೆವರಿಳಿಸುತ್ತದೆ. ಬೆಟ್ಟ, ಗುಡ್ಡ ಬಯಲು, ಕಣಿವೆಗಳು, ಅಡಿಕೆ, ತೆಂಗು, ಭತ್ತ, ಕಬ್ಬು, ಗೋಡಂಬಿ ಮುಂತಾದ ಅತೀ ಪ್ರಧಾನವಾದ ಬೆಳೆಗಳಿಂದ ತುಳುನಾಡು ಶ್ರೀಮಂತವಾಗಿ ಕಂಗೊಳಿಸುತ್ತಿದೆ. ಹಾಗೆಯೇ ಈ ಕರಾವಳಿ ಪ್ರದೇಶ ಜಗತ್ತಿನ ಸೂಕ್ಷ್ಮ ಭೌಗೋಳಿಕ ಪ್ರದೇಶಗಳ ಸಾಲಿನಲ್ಲಿ ಒಂದೆಂದು ಗುರುತಿಸಲ್ಪಟ್ಟಿದೆ.

ತುಳುನಾಡಿನಲ್ಲಿ ತುಳು ಆಡುಭಾಷೆಯಾದರೆ ಕನ್ನಡ ಸಾಹಿತ್ಯ ಭಾಷೆಯಾಗಿದೆ. ಇವೆರಡರೊಂದಿಗೆ ಕೊಂಕಣಿ, ಮರಾಠಿ, ಮಲೆಯಾಳಂ ಮತ್ತು ತಮಿಳು ಭಾಷೆಗಳೂ ಸ್ಥಾನ ಪಡೆದಿವೆ. ಅಸಂಖ್ಯಾತ ಪ್ರಸಿದ್ಧಿ ದೈವ ದೇವಾಲಯಗಳಿಗೆ ಹೆಸರುವಾಸಿಯಾಗಿದೆ. ಅಕ್ಟೋಬರ್ (ನಿರ್ನಾಲ್) ತಿಂಗಳಿಂದ ಮೇ, ಜೂನ್ (ಬೇಷ) ತಿಂಗಳವರೆಗೆ ತುಳುನಾಡಿನ ಪ್ರತಿಯೊಂದು ಊರಲ್ಲಿಯೂ ಅನೇಕ ರೀತಿಯ ಜಾನಪದೀಯ ಪ್ರಕಾರಗಳನ್ನು ಕಾಣುತ್ತೇವೆ. ಭೂತ ಕೋಲು, ನಾಗಮಂಡಲ, ಡಕ್ಕೆಬಲಿ, ಯಕ್ಷಗಾನ, ತಾಳಮದ್ದಳೆ ಮತ್ತು ಕಂಬಳ, ಕೋಳಿ ಅಂಕಗಳಂಥ ಜಾನಪದ ಕ್ರೀಡೆಗಳು ನಡೆಯುತ್ತಲೇ ಇರುತ್ತವೆ. ಇವುಗಳಿಗೆಲ್ಲಾ ಇಲ್ಲಿನ ಪರಿಸರ ಒಂದು ಪ್ರೇರಕ ಶಕ್ತಿಯಾಗಿ ಕೆಲಸ ಮಾಡಿದೆ ಎಂದು ಹೇಳಬಹುದು.

ವಿಶಿಷ್ಟ ಭೌಗೋಳಿಕತೆಯನ್ನು ಹೊಂದಿರುವ ಈ ಭೂಪ್ರದೇಶ ಅನೇಕ ಜಾತಿ ಬುಡಕಟ್ಟುಗಳ ತವರೂರು. ಅವರಲ್ಲಿನ ಜನಪದ ಪಾಡ್ದನಗಳು, ಕುಣಿತಗಳು, ನಂಬಿಕೆಗಳು ಮತ್ತು ಕುಲಕಸುಬುಗಳು ಇನ್ನೂ ಜೀವಂತವಾಗಿವೆ. ಪೂಜೆ, ಪುರಸ್ಕಾರ, ಭೂತಾರಾಧನೆ ಕುಣಿತಗಳು ಜೀವಂತವಿರುವುದರಿಂದ ತುಳು ಜನಪದ ಸಾಹಿತ್ಯ ಸಮೃದ್ಧಿಯಾಗಿದೆ. ಇಲ್ಲಿಗೆ ವಲಸಿಗರಾಗಿ ಬಂದಿರುವ ಇತರ ಸಮುದಾಯವೂ ತಮ್ಮ ತಮ್ಮ ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಪೋಷಿಸುತ್ತಾ ಉಳಿಸಿಕೊಂಡು ತುಳುವ ಜನರಲ್ಲಿ ಒಂದಾಗಿದ್ದಾರೆ. ಶ್ರೀಮಂತವಾಗಿರುವ ಜನಪದ ಸಾಹಿತ್ಯದ ಅಭ್ಯಾಸದಿಂದ ತುಳುನಾಡಿನ ಸಂಸ್ಕೃತಿಯ ಶ್ರೇಷ್ಠ ಪರಂಪರೆ ಸಹಜವಾಗಿ ವ್ಯಕ್ತವಾಗುತ್ತದೆ.

ಒಟ್ಟಾರೆಯಾಗಿ ತುಳುನಾಡಿಗೆ ಧಾರ್ಮಿಕವಾಗಿ ಐತಿಹಾಸಿಕವಾಗಿ ಒಂದು ವಿಶೇಷತೆ ಇದೆ. ಸಾಂಸ್ಕೃತಿಕವಾಗಿ ಒಂದು ಅನನ್ಯತೆ ಇದೆ. ಸಾಹಿತ್ಯಕವಾಗಿ ಈ ನಾಡಿಗೆ ವಿಶೇಷ ಘಟ್ಟವಿದೆ. ವಿಶಿಷ್ಟವಾದ ವನ್ಯಸಂಪತ್ತು, ಪ್ರಾಣಿವರ್ಗ, ಮತ್ತು ಅನೇಕ ಬುಡಕಟ್ಟು ವೈವಿಧ್ಯತೆಗಳನ್ನು ಹೊಂದಿ ಅದರೊಳಗೆ ಹುದುಗಿಕೊಂಡಿರುವ ವಿಪುಲ ಜಾನಪದ ತುಳುನಾಡನ್ನು ನಂದನವನವನ್ನಾಗಿಸಿದೆ.

೨.೨. ತುಳುನಾಡಿನ ಮರಾಠಿ ನ್ಯಾಕ (ನಾಯ್ಕ) ರ ಮೂಲ

ಮರಾಠಿ ಪಂಗಡದವರು ತುಳುನಾಡಿಗೆ ಸುಮಾರು ೧೫ನೇ ಶತಮಾನದಲ್ಲಿ ವಲಸೆ ಬಂದವರೆಂದು ಇತಿಹಾಸ ತಿಳಿಸುತ್ತದೆ. ಮರಾಠಿ ಭಾಷೆಯನ್ನು ಮಾತನಾಡುವುದರಿಂದ ಅವರನ್ನು 'ಮರಾಠಿಯವರು', 'ಮರಾಠಿ ನ್ಯಾಕ (ನಾಯ್ಕ)ರು' ಕರೆಯಲ್ಪಡುತ್ತಾರೆ. ಮರಾಠಿಯವರು ತಾವು ಕ್ಷತ್ರಿಯ ಕುಲದವರು ಎಂದು ಹೇಳಿಕೊಳ್ಳುತ್ತಾರೆ. ಹಿಂದಿನ ಕಾಲದಲ್ಲಿ ಜನಿವಾರ ಹಾಕಿಕೊಳ್ಳುತ್ತಿದ್ದರು. ಗುಡ್ಡಗಳ ಬುಡಲು ತಪ್ಪಲಲ್ಲಿ 'ಕುಮೇರಿ' ಎಂದು ಕರೆಯುವ ಭಾಗಗಳಲ್ಲಿ ಕೃಷಿ ಮಾಡಿ ಜೀವನ ನಡೆಸುತ್ತಿದ್ದರು. ತುಳುನಾಡಿನಲ್ಲಿ ಹೆಚ್ಚಾಗಿ ಸ್ವಂತ ದರ್ಖಾಸ್ತು ಮಾಡಿಕೊಂಡು ಕೃಷಿಯಲ್ಲಿ ಮುಂದುವರೆಯುತ್ತಿದ್ದಾರೆ. ಸರಕಾರದ ಹಲವಾರು ಅಭಿವೃದ್ಧಿ ಯೋಜನೆಗಳ ಪ್ರಯೋಜನ ಪಡೆದು ಪ್ರಗತಿಯ ಪಥದಲ್ಲಿದ್ದಾರೆ. ಪ್ರಸ್ತುತ ತುಳುನಾಡಿನಲ್ಲಿ ಇವರು ಪರಿಶಿಷ್ಟ ಪಂಗಡ (Seheduled Tribes) ಕ್ಕೆ ಸೇರಿದ್ದು ಗಿರಿಜನರು ಎಂದು ಕರೆಯಲ್ಪಡುತ್ತಾರೆ.

ಮರಾಠಿಯವರ ಮೂಲದ ಬಗ್ಗೆ ಅನೇಕ ವಿದ್ವಾಂಸರು, ಇತಿಹಾಸಕಾರರು ಮುಖ್ಯವಾಗಿ ಎರಡು ಮೂಲಗಳನ್ನು ಹೆಸರಿಸುತ್ತಾರೆ. ಕರಾವಳಿ ಪ್ರದೇಶದ ಮರಾಠಿ ನ್ಯಾಕರು ಮತ್ತು ಕರ್ನಾಟಕದ ಇತರ ಪ್ರದೇಶಗಳಲ್ಲಿರುವ ಗೊಂದಲಿಗರು ಮೂಲತ: ಒಂದೇ ಮೂಲದವರು. ಪ್ರಾದೇಶಿಕವಾಗಿ ವ್ಯತ್ಯಾಸಗಳು ಕಂಡು ಬರುತ್ತವೆ ಎಂದು ಹಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಕ್ಯಾತನಹಳ್ಳಿ ರಾಮಣ್ಣ ಅವರು ಮರಾಠಿಗರು ಮಹಾರಾಷ್ಟ್ರದ ಮೂಲದವರೆಂದು ತಮ್ಮ ನಿಲುವನ್ನು ವ್ಯಕ್ತಪಡಿಸುತ್ತಾರೆ. (೧೯೭೨, ೧೯೬೨; ೯, ೧೫)

ಗೊ.ರು. ಚನ್ನಬಸವಪ್ಪನವರು "ಮಹಾರಾಷ್ಟ್ರದಿಂದ ವಲಸೆ ಬಂದ ಮರಾಠಿ ಭಾಷೆ ಮಾತನಾಡುವ ಮರಾಠಿ ನ್ಯಾಕರು ಗೋಂದೋಳು ಪೂಜೆಯನ್ನು ಮಾಡುತ್ತಾರೆ. ಇವರು ಸುಮಾರು ಮುನ್ನೂರು ವರ್ಷಗಳ ಹಿಂದೆ ಶಿವಾಜಿಯ ಕಾಲದಲ್ಲಿ ಆಗ ಮುಸಲ್ಮಾನರ ರಾಜ್ಯವಾಗಿದ್ದ ಬಿಜಾಪುರಕ್ಕೆ ಗೂಢಚರ್ಯೆಯ ಕಾರ್ಯನಿಮಿತ್ತ ಬಂದವರು" ಎಂದು ತಮ್ಮ ಅಭಿಪ್ರಾಯ ಮಂಡಿಸುತ್ತಾರೆ. (೧೯೭೭; ೬೩)

ಕೈತಂಜೆ ನರಸಿಂಹ ಭಟ್ಟರು "ಮಹಾರಾಷ್ಟ್ರ ರಾಜ್ಯದಲ್ಲಿ ದೇವಿಯ ಗೊಂದಲ ಪೂಜೆ, ಉತ್ಸವ ಇದೆ. ಅಲ್ಲಿಂದ ಹಲವಾರು ವರ್ಷಗಳ ಹಿಂದೆ ದಕ್ಷಿಣದ ಈ ನಾಡಿಗೆ ವಲಸೆ ಬಂದು ನೆಲೆಸಿದ ಜನಾಂಗವನ್ನೇ

‘ಮರಾಟಿ’, ‘ನಾಯ್ಕ’ ಎಂದು ಕರೆಯುತ್ತೇವೆ” ಎಂದು ಗೋಂದೋಳು ಪೂಜೆಯ ಸಹಿತ ತಮ್ಮ ಅಭಿಪ್ರಾಯ ಸ್ಪಷ್ಟಪಡಿಸುತ್ತಾರೆ. (೧೯೭೭; ೧೬೮)

ಬ್ಯಾತನಾಳ ಎಸ್. ಎಸ್. ತಮ್ಮ ಅನುವಾದಿತ ಕೃತಿಯಲ್ಲಿ ಮಹಾರಾಷ್ಟ್ರ ಕರ್ನಾಟಕಗಳಲ್ಲಿ ದೇವಿಯ ಹೆಸರಿನಲ್ಲಿ ನಡೆಯುವ ಗೊಂದಲ ಹಾಕಿಸುವ ಪದ್ಧತಿ ಒಂದೇ ಬಗೆಯಾಗಿದೆ. ವಿಧಾನ ವಿವರಗಳಲ್ಲಿ ಅಲ್ಪ ಸ್ವಲ್ಪ ಪ್ರಾದೇಶಿಕ ಭಿನ್ನತೆಗಳಿರಬಹುದು ಎಂದು ಹೇಳುತ್ತಾರೆ. (೧೯೮೧; ೧-೪)

ಚಂದ್ರಶೇಖರ ಕಂಬಾರರು ತುಳುನಾಡಿನ ಗೋಂದೋಳು ಪೂಜೆಯನ್ನು ವಿವರಿಸುತ್ತಾರೆ. ಅಂತೆಯೇ ಗೊಂದಲಿಗರ ಬಗ್ಗೆ ತಿಳಿಸುತ್ತಾ ಇವರು ಮಹಾರಾಷ್ಟ್ರದ ಜಮದಗ್ನಿ - ರೇಣುಕೆಯರ ಪಂಗಡದವರು. ಗೊಂದಲಿಗರು ಶಿವಾಜಿಯ ಗೂಡಾಚಾರರಾಗಿ ಕರ್ನಾಟಕಕ್ಕೆ ಬಂದವರು ಎಂಬ ನಿಲುವನ್ನು ವ್ಯಕ್ತಪಡಿಸುತ್ತಾರೆ. (೧೯೮೫; ೬೮೧ - ೬೮೮)

ಎಡ್ಗರ್ ಥರ್ಸ್ಟನ್ ಮತ್ತು ರಂಗಾಚಾರಿಯವರು ದಕ್ಷಿಣ ಭಾರತದ ಜಾತಿ ಮತ್ತು ಬುಡಕಟ್ಟುಗಳ ವಿವರ ನೀಡುತ್ತಾ ಗೊಂದಲಿಗರ ಬುಡಬುಡಿಕೆಯವರ ಹಾಗೆ ಮರಾಠ ಮೂಲದವರು. ದುರ್ಗೆಯನ್ನು ಪೂಜಿಸುತ್ತಾ ಅಂಬಾಭವಾನಿಯ ಗೊಂದಲ ಪೂಜೆ ಮಾಡುತ್ತಾರೆ ಎಂದು ಹೇಳುತ್ತಾರೆ. (೧೯೮೭; Vol II)

ನಿಂಗಣ್ಣ ಸಣ್ಣಕ್ಕಿಯವರು ಗೊಂದಲಿಗ ಜನಾಂಗವು ಕನ್ನಡದ ನೆಲದಲ್ಲಿ ಅತೀ ಪ್ರಾಚೀನ ಕಾಲದಿಂದಲೂ ನೆಲೆಸಿದ ಒಂದು ಬುಡಕಟ್ಟು ಜನಾಂಗವಾಗಿದೆ ಎಂದು ಪ್ರತಿಪಾದಿಸುತ್ತಾರೆ. (೧೯೯೩; ೧ - ೬)

ಮುದೇನೂರು ಸಂಗಣ್ಣನವರು ‘ಗೊಂದಲಿಗರು’ ಮತ್ತು ‘ಗೊಂದಲ’ ಎಂಬ ಶಬ್ದವು ಕನ್ನಡದಲ್ಲಿ ಹುಟ್ಟಿದವು. ‘ಗೌಂಡಲೀ’ ಅಥವಾ ‘ಗೊಂದಲೀ’ ನೃತ್ಯ ಕರ್ನಾಟಕದಲ್ಲಿ ಹುಟ್ಟಿತೆಂಬ ಯಾದವರ ಕಾಲದ ಶಾಂಙ್ಞದೇವನ ಅಭಿಮತವನ್ನು ಉಲ್ಲೇಖಿಸುತ್ತಾರೆ. ನಾಗಚಂದ್ರ ಕವಿಯ ‘ಮಲ್ಲಿನಾಥ ಪುರಾಣ’ ದಲ್ಲಿ ‘ಕುಣಿವ ಗೊಂದಣ’ ಎಂಬ ಪದವಿದೆ ಎಂದು ತಿಳಿಸುತ್ತಾರೆ. ಕನ್ನಡದ ಆದಿಕವಿ ಪಂಪ, ರುದ್ರಭಟ್ಟ, ಅಭಿನವ ಪಂಪ, ಮತ್ತು ಶರಣರು ಸಮೂದಾರ್ಥದಲ್ಲಿ ಗೊಂದಲ ಶಬ್ದವಿರುವುದನ್ನು ದಾಖಲಿಸುತ್ತಾರೆ. ಪಾಲ್ಕುರಿಕೆ ಸೋಮನಾಥ ಕ್ರಿ.ಶ. ೧೨ - ೧೩ನೇ ಶತಮಾನದ ಪ್ರಸಿದ್ಧ ತೆಲುಗು ಕವಿ. ಆತನು ತನ್ನ ‘ಬಸವ ಪುರಾಣಮು’ ಕೃತಿಯಲ್ಲಿ ಬಸವಣ್ಣನ ಮದುವೆಯ ವೈಭವವನ್ನು ವರ್ಣಿಸುತ್ತಾನೆ. ಅಲ್ಲಿ ಅನೇಕ ಜನಪದ ಕಲಾ ಪ್ರಕಾರಗಳ

ಕಲಾವಿದರೊಂದಿಗೆ 'ಗೊಂಡ್ಲಿ' ಅರ್ಥಾತ್ ಗೊಂದಲಿಗರು ಭಾಗವಹಿಸಿದ್ದನ್ನು ಕವಿ ಕಥಿಸಿದ್ದಾನೆಂದು ಲೇಖಕರು ನಿಖರ ದಾಖಲೆಗಳನ್ನು ನೀಡುತ್ತಾರೆ. (೧೯೯೩; ೨೩ - ೨೪)

ಉಪ್ಪಂಗಳ ರಾಮಭಟ್ಟರು ಮರಾಠಿಗರ ಮೂಲದ ಕುರಿತು ಕ್ಯಾತನಹಳ್ಳಿ ರಾಮಣ್ಣ ಮತ್ತು ಗೊ.ರು. ಚನ್ನಬಸಪ್ಪರ ಅಭಿಪ್ರಾಯಗಳನ್ನು ಬೆಂಬಲಿಸುತ್ತಾರೆ. ಇಲ್ಲಿ ಕಾಸರಗೋಡು ಭಾಗದಲ್ಲಿ ನಡೆಯುವ ಗೋಂದೋಳು ಪೂಜೆಯನ್ನು ವಿವರಿಸುತ್ತಾರೆ. (೧೯೯೪; ೧೨೪)

ಕಮಲಾಕ್ಷ. ಪಿ. ಅವರು ಮರಾಠಿ ನ್ಯಾಕರ ಮೂಲದ ಕುರಿತು ವಿಭಿನ್ನ ಅಭಿಪ್ರಾಯ ಮಂಡಿಸುತ್ತಾರೆ. ಇವರು ಮೂಲತ: ಗೋವಾ ಪ್ರಾಂತ್ಯದವರು. ಪೋರ್ಚುಗೀಸರು ಗೋವೆಯನ್ನು ವಶಪಡಿಸಿಕೊಂಡಾಗ ಇವರು ಕರ್ನಾಟಕಕ್ಕೆ ಬಂದು ಅಲ್ಲಲ್ಲಿ ನೆಲೆ ನಿಂತರು ಎಂದು ಹೇಳುತ್ತಾರೆ. (೧೯೯೪; ೪೦)

ಪೂವಪ್ಪ ಕಣಿಯೂರು ತಮ್ಮ ಲೇಖನದಲ್ಲಿ ತುಳುನಾಡಿನಲ್ಲಿ ಗಿರಿಜನರೆನಿಸಿಕೊಂಡ ಮರಾಠಿ ನ್ಯಾಕರು ಹೊರನಾಡಿನಿಂದ (ಹೊರರಾಜ್ಯದಿಂದ) ವಲಸೆ ಬಂದವರು ಎಂದು ನಿಲುವನ್ನು ಸ್ಪಷ್ಟಪಡಿಸುತ್ತಾರೆ. (೧೯೯೫; ೩೭೭)

ವೀರೇಶ್ .ಶೇ. ಬಡಿಗೇರರು ಗೊಂದಲಿಗರು ಮೂಲತ: ಕರ್ನಾಟಕದವರು. ಕವಿರಾಜಮಾರ್ಗಕಾರ ಹೇಳಿದ ಕರ್ನಾಟಕದ ವಿಸ್ತೀರ್ಣ ಕಾವೇರಿಯಿಂದ ಗೋದಾವರಿ ನಡುವಿನ ಪ್ರದೇಶವೆಂದು ದಾಖಲೆ ನೀಡುತ್ತಾರೆ. (೧೯೯೯; ೧೨೩)

ಅಶೋಕ ಆಳ್ವರು ಗೋಂದೋಳು ಪೂಜೆ ಮಾಡುವ ಮರಾಠಿ ನ್ಯಾಕರು ಶತಮಾನದ ಹಿಂದೆ ಮಹಾರಾಷ್ಟ್ರದಿಂದ ಬಂದ ವಲಸಿಗರು ಎಂದು ಅಭಿಪ್ರಾಯ ಪಡುತ್ತಾರೆ.

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ದೊರೆತ ಮಾಹಿತಿಗಳು ಮರಾಠಿಗರ ಮೂಲ ಮಹಾರಾಷ್ಟ್ರ ಎಂದು ತಿಳಿಸುತ್ತವೆ. ಮಹಾರಾಷ್ಟ್ರ ಮೂಲಕ್ಕೆ ಮರಾಠಿ ಭಾಷೆಯನ್ನು ಅಂಬಾ ಭವಾನಿಯನ್ನು ಮತ್ತು ಶಿವಾಜಿ ಮಹಾರಾಜನನ್ನು ಹೆಸರಿಸುತ್ತಾರೆ. ಇವರ ಮೂಲ ಕುರಿತಂತೆ ಸ್ಥಳೀಯವಾದ ಜನಪದದ ಒಂದೆರೆಡು ಕತೆಗಳು ದೊರಕುತ್ತವೆ. ಅವುಗಳ ವಿವರ ಇಂತಿದೆ :

ಕಥೆ - ೧

ಮಹಾರಾಷ್ಟ್ರದಲ್ಲಿ ಛತ್ರಪತಿ ಶಿವಾಜಿ ಮಹಾರಾಜನ ಆಳ್ವಿಕೆಯ ಸಮಯ. ಉತ್ತರದಿಂದ ಮುಸ್ಲಿಂ ರಾಜ ದಂಡೆತ್ತಿ ಮರಾಠ ರಾಜ್ಯಕ್ಕೆ ಬರುತ್ತಾನೆ. ೨೪ ತಾಸುಗಳೊಳಗೆ ಕಪ್ಪ ಕಾಣಿಕೆ ಒಪ್ಪಿಸಿ ಶರಣಾಗಬೇಕು ಇಲ್ಲವೆ ರಣರಂಗದಲ್ಲಿ ಯುದ್ಧಕ್ಕೆ ತಯಾರಿರಬೇಕು ಎಂದು ಕರೆ ಬರುತ್ತದೆ. ಶಿವಾಜಿ ಮಹಾರಾಜನಿಗೆ ಈ ಅನಿರೀಕ್ಷಿತ ಬೆಳವಣಿಗೆಯಿಂದ ಏನೂ ತೋಚದೆ ತಾಯಿ ಜೀಜಾಬಾಯಿಯ ಸಲಹೆ ಕೇಳುತ್ತಾನೆ. ಜೀಜಾಬಾಯಿ ಅನೇಕ ಪುರಾಣಗಳನ್ನು ಬಲ್ಲವಳಾಗಿದ್ದು ಶ್ರೀದೇವಿ (ಅಂಬಾಭವಾನಿ)ಯ ಪರಮಭಕ್ತೆಯಾಗಿರುತ್ತಾಳೆ. ಏನೂ ಹೆದರದೆ ಆತಂಕ ಪಡದೇ ತಾನು ಹೇಳಿದಂತೆ ಅಮ್ಮ ದೇವಿಯ ಸೇವೆ ಮಾಡು. ಅವಳು ನಮ್ಮನ್ನು ರಕ್ಷಿಸುತ್ತಾಳೆ ಎಂದು ವಿವರಿಸುತ್ತಾಳೆ. ತಾಯಿಯ ಸಲಹೆಯಂತೆ ಶಿವಾಜಿಯು ಮುಸ್ಲಿಂ ರಾಜನಿಗೆ ಕಪ್ಪಕಾಣಿಕೆ ಒಪ್ಪಿಸಲಿಲ್ಲ. ವೈರಿ ಪಡೆ ರಾತ್ರಿ ಸಮಯದಲ್ಲಿ ರಣರಂಗಕ್ಕೆ ಬರುವ ಮೊದಲೇ ಶಿವಾಜಿ ಮತ್ತು ಆತನ ಸೈನಿಕರು ಬಂದು ಸೇರುತ್ತಾರೆ. ರಣರಂಗದ ಸುತ್ತಲೂ ಮರದ ಗೂಟಗಳನ್ನು ನೆಟ್ಟು ಅದರ ತುತ್ತ ತುದಿಗೆ ವಸ್ತ್ರಗಳನ್ನು ಸುತ್ತಿ ಎಣ್ಣೆ ಹಾಕಿ ಬೆಂಕಿ ಕೊಡುತ್ತಾರೆ. ರಣರಂಗದ ಸುತ್ತಲೂ ಬೆಂಕಿ ಉರಿಯುತ್ತಿದೆ. ಅಂತೆಯೇ ಎಲ್ಲಾ ಸೈನಿಕರು ಒಂದೊಂದು ದೀವಟಿಗಳನ್ನು ಹಿಡಿದು ಶ್ರೀದೇವಿಯ ಸ್ತೋಕಗಳನ್ನು ಹಾಡುತ್ತಾ ರಣರಂಗಕ್ಕೆ ಮಂಡಲಾಕಾರವಾಗಿ ಸುತ್ತು ಬರತೊಡಗಿದರು. ತನ್ನ ಭಕ್ತರ ಭಕ್ತಿಗೆ ಮೆಚ್ಚಿ ಶ್ರೀದೇವಿಯು ರಣರಂಗದ ಮಧ್ಯೆ ಪ್ರತ್ಯಕ್ಷಳಾಗಿ ನಿಂತಳು. ಅದೇ ಸಮಯದಲ್ಲಿ ಯುದ್ಧಕ್ಕಾಗಿ ಮುಸ್ಲಿಂ ಸೈನಿಕರ ತಂಡ ರಣರಂಗಕ್ಕೆ ಧಾವಿಸಿತು. ರಣರಂಗದ ಭಯಂಕರ ದೃಶ್ಯವನ್ನು ನೋಡಿ ಹೆದರಿ ಬಂದ ದಾರಿಯಲ್ಲಿಯೇ ಪಲಾಯನ ಮಾಡಿತು. ತದನಂತರ ಮರಾಠಿಗರು ಶ್ರೀಮಹಾಮಾಯೆಗೆ ಮಂಡಲಾಕಾರದ ಕುಣಿತಗಳಿಂದ ಕೂಡಿದ ಗೋಂದೋಳು ಪೂಜೆ ಅರ್ಪಿಸಲಾರಂಭಿಸಿದರು. ಶಿವಾಜಿಯ ವಂಶಸ್ಥರು ನಾವು ಎಂಬುದಾಗಿ ತುಳುನಾಡಿನ ಮರಾಠಿ ನ್ಯಾಕರು ಹೇಳಿಕೊಳ್ಳುತ್ತಾರೆ.

ಕಥೆ - ೨

ಮಹಾರಾಷ್ಟ್ರದ ಶಿವಾಜಿ ಮಹಾರಾಜನ ರಾಜ್ಯದ ಮೇಲೆ ತುರ್ಕರು ದಂಡೆತ್ತಿ ಬಂದಾಗ ರಾಜನು ಒಂದು ವಿಶೇಷವಾದ ಗುಹೆಯೊಳಗೆ ಅಡಗಿಕೊಳ್ಳುತ್ತಾನೆ. ಆತನ ಸೈನಿಕರು ಹೆದರಿ ರಾಜ್ಯವನ್ನು ಬಿಟ್ಟು ಹೊರರಾಜ್ಯಕ್ಕೆ ಓಡಿಹೋದರು. ೪೦ ಜನರ ಸೈನಿಕ ತಂಡವೊಂದು ತುಳುನಾಡಿನ ಒಂದು ಭಾಗವಾಗಿದ್ದ ಕಾಸರಗೋಡಿನ ಅರಣ್ಯ ಪ್ರದೇಶಕ್ಕೂ ಬಂದರು. ಮರಾಠಿಗರು ತಮ್ಮ ಜನಿವಾರವನ್ನು ತೆಗೆದು ಮರಾಠಿ

ಭಾಷೆಯನ್ನು ಮಾತನಾಡದೇ ತುಳು ಭಾಷೆಯಲ್ಲಿ ವ್ಯವಹರಿಸುತ್ತಿದ್ದರು. ತುರ್ಕರು ಬಂದು ವಿಚಾರಿಸಿದಾಗ ಇಲ್ಲಿ ಜನಿವಾರದವರೂ, ಮರಾಠಿ ಭಾಷೆ ಮಾತನಾಡುವವರು ಯಾರು ಇಲ್ಲ ಎಂದು ತಿರುಗಿ ಹೋದರು. ಕ್ಷತ್ರಿಯ ಕುಲದ ಮರಾಠಿ ನಾಯ್ಕರು ಈ ರೀತಿಯಾಗಿ ಜನಿವಾರ ತ್ಯಜಿಸಿದರು.

೨.೩. ಮರಾಠಿಗರ ವರ್ತಮಾನದ ಸ್ಥಿತಿ - ಗತಿಗಳು

ಇವರು ಆದಿಭಾಗದಲ್ಲಿ ಗುಡ್ಡಗಳ ಬಯಲು ತಪ್ಪಲಲ್ಲಿ 'ಕುಮೇರಿ'ಎಂದು ಕರೆಯಲ್ಪಡುವ ಭಾಗಗಳಲ್ಲಿ ಕೃಷಿ ಮಾಡಿಕೊಂಡು ಜೀವನ ನಡೆಸುತ್ತಿದ್ದರು. ನಂತರ ಇತರ ಮುಂದುವರೆದ ಸಮುದಾಯದ ಒಡೆತನದ ಜಮೀನುಗಳನ್ನು ಚಾಲಗೇಣಿಗೆ ಪಡೆದುಕೊಂಡು ಕೃಷಿ ಮಾಡುತ್ತಿದ್ದರು. ಕ್ರಮೇಣ ಬದಲಾಗುತ್ತಾ ಹೆಚ್ಚಾಗಿ ಸ್ವಂತ ದರ್ಖಾಸ್ತು ಮಾಡಿಕೊಂಡು ಕೃಷಿಯಲ್ಲಿ ಅಲ್ಪ ಸ್ವಲ್ಪ ಪ್ರಗತಿ ಹೊಂದುತ್ತಿದ್ದಾರೆ. ಇತ್ತೀಚೆಗೆ ಕೃಷಿಯಲ್ಲಿಯೇ ಬಹಳ ಮುಂದುವರಿದ ಮರಾಠಿಗರೂ ಇದ್ದಾರೆ. ಕೃಷಿ ಕಾರ್ಮಿಕರಾಗಿಯೂ ಕಂಡು ಬರುತ್ತಾರೆ. ಒಟ್ಟಿನಲ್ಲಿ ಕೃಷಿಯೇ ಇವರ ಮೂಲ ಕಸುಬಾಗಿದೆ.

ಸರಕಾರದ ಹಲವಾರು ಅಭಿವೃದ್ಧಿ ಯೋಜನೆಗಳ ಅಲ್ಪ ಸ್ವಲ್ಪ ಪ್ರಯೋಜನೆ ಪಡೆದು ಪ್ರಗತಿ ಹೊಂದುತ್ತಿದ್ದಾರೆ. ಶೈಕ್ಷಣಿಕ ಕ್ಷೇತ್ರದಲ್ಲಿ ಮುಂದೆ ಬರುತ್ತಿದ್ದಾರೆ. ಯುವ ಪೀಳಿಗೆಯ ಯುವಕ ಯುವತಿಯರು ಪಧವೀಧರರಾಗಿದ್ದಾರೆ. ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರಾಗಿ, ಅಂಚೆ ಕಚೇರಿ, ದೂರವಾಣಿ ಇಲಾಖೆ, ಬ್ಯಾಂಕ್, ರೈಲ್ವೆ ಹೀಗೆ ಅನೇಕ ಸರಕಾರಿ ಇಲಾಖೆಗಳಲ್ಲಿ ಉದ್ಯೋಗ ಪಡೆದಿದ್ದಾರೆ. ಉನ್ನತ ಉದ್ಯೋಗಗಳಾದ ಇಂಜಿನಿಯರ್ , ವೈದ್ಯ ಮತ್ತು ನ್ಯಾಯವಾದಿ ಹುದ್ದೆಗಳಲ್ಲಿ ಇರುವವರ ಸಂಖ್ಯೆ ಬೆರಳೆಣಿಕೆಯದು.

ಕೇಂದ್ರ ಸರಕಾರವು ೧೯೩೫ರಲ್ಲಿ ಮತ್ತು ೧೯೫೦ರಲ್ಲಿ ವಿಸ್ತೃತ ಜಾತಿವಾರು ಪಟ್ಟಿಯ ಪ್ರಕಾರ ಗುಡ್ಡಗಾಡು ಜನರನ್ನು ಪರಿಶಿಷ್ಟ ಪಂಗಡ (Scheduled Tribes) ಎಂದು ಕರೆದು ಮೀಸಲಾತಿಗೆ ಒಳಪಡಿಸಿತು. ತುಳುನಾಡಿನ ಮರಾಠಿಗರನ್ನು ಗಿರಿಜನರೆಂದು ಕರೆದು ಪರಿಶಿಷ್ಟ ಪಂಗಡಕ್ಕೆ ಸೇರಿಸಲಾದುದರಿಂದ ಮೀಸಲಾತಿಯ ಸಹಾಯ ಪಡೆಯಿತು. ಆದರೂ ಆರ್ಥಿಕವಾಗಿ, ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಸರಕಾರ ನಿರೀಕ್ಷಿಸಿದಷ್ಟು ಪ್ರಗತಿಯಾಗಿಲ್ಲ. ಸ್ಥಾನ ಕಾದಿರುಸುವಿಕೆ, ರಿಯಾಯಿತಿ ಮುಂತಾದ ಸವಲತ್ತುಗಳು ಸರಕಾರದ ಆಜ್ಞೆಯಾಗಿದ್ದು ಕಾನೂನಿದ್ದರೂ ಸರಿಯಾಗಿ ಪಾಲನೆಯಾಗುತ್ತಿಲ್ಲ. ಈಗಿನ ಪರಿಸ್ಥಿತಿಯಲ್ಲಿ ಮರಾಠಿಗರ ವಿದ್ಯಾವಂತರಿಗೆ ಸರಕಾರಿಯಾಗಲೀ, ಖಾಸಗೀ ಸಂಸ್ಥೆಯಲ್ಲಾಗಲೀ ಉದ್ಯೋಗ ಸಿಗುವುದು ಬಹಳ ಕಷ್ಟಕರವಾಗಿದೆ.

ಸರಕಾರದ ಯಾವುದೇ ಯೋಜನೆಯಿರಲಿ ಅದು ಗಿರಿಜನರಿಗೆ ಸರಿಯಾಗಿ ತಲುಪುವುದಿಲ್ಲ. ಅದು ಅರ್ಧದಲ್ಲಿ ಅಧಿಕಾರ ಶಾಹಿಗಳ, ಇತರ ಮುಂದುವರೆದ ಸಮುದಾಯದವರ ಪಾಲಾಗುತ್ತಿರುವುದು ವಿಷಾದನೀಯ. ಪಂಚಾಯತ್ ರಾಜ್ ವ್ಯವಸ್ಥೆ ಬಂದಿದ್ದರೂ ಸರಕಾರದ ಧನಸಹಾಯ (Subsidy) ದ ಮೂಲಕ ಬಡವರಿಗೆ ಬರುವ ಯಾವುದೇ ಯೋಜನೆಗಳು ಅವರಿಗೆ ತಲುಪುತ್ತಿಲ್ಲ. ತುಳುನಾಡಿನ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಗಿರಿಜನರ ದೊಡ್ಡ ಪ್ರಮಾಣದ ವಿವಿದೋದ್ದೇಶ ಸಹಕಾರಿ ಸಂಘಗಳು ಪ್ರತಿ ತಾಲೂಕುಗಳಲ್ಲಿ ಕಾರ್ಯಚರಿಸುತ್ತಿವೆ. ಇದು ಗಿರಿಜನರಿಗೆ ಅಲ್ಪ ಸ್ವಲ್ಪ ಅಭಿವೃದ್ಧಿಗೆ ಸಹಕಾರಿಯಾಗಿದೆ. ತುಳುನಾಡಿನಾದ್ಯಂತ ಅನೇಕ ಮರಾಠಿ ಸಂಘಗಳು ಕಾರ್ಯನಿರ್ವಹಿಸುತ್ತಿವೆ. ಈ ಸಂಘಗಳೂ ಕೂಡ ಮರಾಠಿಗರ ಏಳಿಗೆಗೆ ಶ್ರಮಿಸುತ್ತಿವೆ.

ತುಳುನಾಡಿನಲ್ಲಿ ಪ್ರಸ್ತುತ ಕಾರ್ಯಾಚರಿಸುತ್ತಿರುವ ಮರಾಟಿ ಸಂಘಗಳು

೧. ಮರಾಟಿ ಸಮಾಜ ಸೇವಾ ಸಂಘ ರಿ.,
ಕುಂಜಿಬೆಟ್ಟು, ಉಡುಪಿ, ಉಡುಪಿ ಜಿಲ್ಲೆ

೨. ಮರಾಟಿ ಸಮಾಜ ಸೇವಾ ಸಂಘ ರಿ.,
ಕೊಂಬೆಟ್ಟು, ಪುತ್ತೂರು, ದ.ಕ ಜಿಲ್ಲೆ

೩. ಮರಾಟಿ ಸಮಾಜ ಸೇವಾ ಸಂಘ ರಿ.,
ತನ್ನೀರು ಪಂತ, ವಯಾ ಗುರುವಾಯನಕೆರೆ, ಬೆಳ್ತಂಗಡಿ

೪. ಮರಾಟಿ ಸಮಾಜ ಸೇವಾ ಸಂಘ ರಿ.,
ಕಾರ್ಕಳ, ಉಡುಪಿ ಜಿಲ್ಲೆ

೫. ಮರಾಟಿ ಸಮಾಜ ಸೇವಾ ಸಂಘ ರಿ.,
ಸುಳ್ಯ, ದ.ಕ. ಜಿಲ್ಲೆ

೬. ಜೈ ಭಾರತಿ ಮರಾಟಿ ಸಮಾಜ ಸೇವಾ ಸಂಘ ರಿ.,
ದೇವಿನಗರ ಪುಣಚ, ಬಂಟ್ವಾಳ ತಾ.

೭. ಶ್ರೀ ದುರ್ಗಾ ಮರಾಟಿ ಸಂಘ
ಕನ್ಯಾನ, ಬಂಟ್ವಾಳ ತಾ.

೮. ಮರಾಟಿ ವಿದ್ಯಾರ್ಥಿ ಸಂಘ
ಪುತ್ತೂರು, ದ.ಕ. ಜಿಲ್ಲೆ

೯. ಮರಾಟಿ ಉದ್ಯೋಗಸ್ಥರ ಸಂಘ ರಿ.,
ಮಂಗಳೂರು, ದ.ಕ.

೧೦. ಮರಾಟಿ ಸಮಾಜ ಸೇವಾ ಸಂಘ ರಿ.,

ಕೂಡ್ಲಿಬಾರಕೂರು, ಉಡುಪಿ ಜಿಲ್ಲೆ

೧೧. ಶಂಕರ ನಾರಾಯಣ ಮರಾಠಿ ಸಂಘರಿ.,

ಕೊಲ್ಲಂಜೆ ಗ್ರಾಮ, ಕುಂದಾಪುರ, ಉಡುಪಿ ಜಿಲ್ಲೆ

೧೨. ಮರಾಟಿ ವಿದ್ಯಾರ್ಥಿ ಸಂಘ

ಬಂಟ್ವಾಳ, ದ.ಕ.

೧೩. ಮರಾಟಿ ಸಮಾಜ ಸೇವಾ ಸಂಘ

ನೆಟ್ಟಣಿಗೆ

೧೪. ಶಾರದಾ ಮರಾಟಿ ಸಮಾಜ ಸೇವಾ ಸಂಘ

ಪೆರ್ಲ, ಕಾಸರಗೋಡು ತಾ. ಮತ್ತು ಜಿಲ್ಲೆ

೧೫. ಮಹಮ್ಮಾಯಿ ಮರಾಟಿ ಸಂಘ

ಪೆರುವಾಯಿ, ದ.ಕ.

೧೬. ಶ್ರೀ ಮಹಮ್ಮಾಯಿ ಮರಾಟಿ ಸಂಘ

ಅಶ್ವನಡ್ಕ, ಮಾಣಿಲ

೧೭. ಬಂಟ್ವಾಳ ತಾಲೂಕು ಮರಾಟಿ ಸಮಾಜ ಸೇವಾ ಸಂಘ

ಬಿ.ಸಿ.ರೋಡು, ಬಂಟ್ವಾಳ

◆

ಅಧ್ಯಾಯ : ೩

ಸಾಂಸ್ಕೃತಿಕ ಅನನ್ಯತೆಯ ಸಂಕೇತವಾಗಿ ಗೋಂದೋಳು ಪೂಜೆ

ಅಧ್ಯಾಯ : ೩

ಸಾಂಸ್ಕೃತಿಕ ಅನನ್ಯತೆಯ ಸಂಕೇತವಾಗಿ ಗೋಂದೋಳು ಪೂಜೆ

೩.೧. 'ಗೋಂದೋಳು' ಶಬ್ದದ ನಿಷ್ಪತ್ತಿ

'ಗೋದೋಳು' ಎಂಬ ಪದವನ್ನು ಭಿನ್ನ ಭಿನ್ನ ರೀತಿಯಲ್ಲಿ ಉಚ್ಚರಿಸಲಾಗುತ್ತದೆ. ತುಳುನಾಡಿನಲ್ಲಿ 'ಗೋಂದೋಳು ಪೂಜೆ', 'ಗೊಂದಲ ಪೂಜೆ', 'ಗೋಂದೋಳು ಪೂಜೆ' ಮತ್ತು 'ಪಂಜಿದ ಪೂಜೆ' (ತುಳು ಭಾಷೆಯಲ್ಲಿ) ಎಂಬ ಹೆಸರುಗಳಿಂದ ಕರೆಯುತ್ತಾರೆ. ಉತ್ತರ ಕರ್ನಾಟಕದಲ್ಲಿ 'ಗೊಂದಲಿಗ' ಜಾತಿ ಸೂಚಕ ಪದವಾಗಿದೆ. ಅವರು ದೇವಿಯ ಆರಾಧನೆಯನ್ನು 'ಗೊಂದಲ ಹಾಕುವುದು' ಎಂದು ಹೇಳುತ್ತಾರೆ. ಪ್ರಾಚೀನ ಗ್ರಂಥಗಳಾದ 'ಸಂಗೀತ ರತ್ನಾಕರ', 'ನೃತ್ಯ ರತ್ನಾಕರ' ಮೊದಲಾದವುಗಳಲ್ಲಿ 'ಗೋಂದಲೀ ನೃತ್ಯ', 'ಗೌಂಡಲೇ', 'ಗುಂಡಲೀ', 'ಗೋಂಡಲೀ' ಮತ್ತು 'ಕುಂಡಲೀ' ಇತ್ಯಾದಿ ಪದಗಳು ಕಂಡುಬರುತ್ತವೆ.[೧]

ಗೊಂದಲ - ಗೌಜು; ಗದ್ದಲ:

ಎಲ್ಲರೂ ಸೇರಿ ಗೌಜು ಗದ್ದಲದಿಂದ ಕೂಡಿರುವುದು. ಉತ್ತರ ಕರ್ನಾಟಕದ ಗೊಂದಲಿಗರು ಹೆಣ್ಣು ಗಂಡೆಂಬ ಭೇದವಿಲ್ಲದೆ ಗೊಂದಲ ಹಾಕುವುದರಲ್ಲಿ ಭಾಗಿಯಾಗುತ್ತಾರೆ.

ಗೊಂದಲಿಗ - ಗೊಂದಲ:

ಗೊಂದಲಿಗ ಎಂಬುದು ಉತ್ತರ ಕರ್ನಾಟಕದಲ್ಲಿ ಒಂದು ಜಾತಿ ಸೂಚಕ ಪದವಾಗಿದೆ. 'ಗೊಂದಲಿಗ'ರು ಮಾಡುವ ಅಂಬಾಭವಾನಿಯ ಕಾರ್ಯಸೇವೆಯೇ ಇಲ್ಲಿ 'ಗೊಂದಲ'ವಾಗಿದೆ.

ಗೋಂಧಳ - ಗೊಂದಲ:

ಮಹಾರಾಷ್ಟ್ರ ರಾಜ್ಯದ ಮರಾಠಿ ಕಾವ್ಯ ಸ್ವರೂಪ ಮೂರು ಭಾಗಗಳಿಂದ ಕೂಡಿದೆ. ಅವುಗಳಲ್ಲಿ ಶಾಹಿರೀ ಕಾವ್ಯ ಒಂದು. (ಕಾಲ ಕ್ರಿ.ಶ. ಸುಮಾರು ೧೬೫೦ - ೧೮೧೮). ಈ ಸಮಯದಲ್ಲಿ 'ಗೋಂಧಳ ಹಾಕಿಸುವುದು' ಎಂಬ ಒಂದು ಪ್ರಕಾರವಿತ್ತು. ಕಾಲ ಕ್ರಮೇಣ ಅದು 'ಗೊಂದಲ' ಎಂದಾಗಿರಬಹುದು.[೧]

ಗೋಂದಾಲ್ - ಗೊಂದಲ;

ಮಹಾರಾಷ್ಟ್ರ ಕೊಲ್ಹಾಪುರದ ಕರ್ಹಾಡ ಬ್ರಾಹ್ಮಣರು "ಗೋಂದಾಲ್" ಎಂಬ ಪೂಜೆ ಮಾಡುತ್ತಾರೆ. ಕೊಲ್ಹಾಪುರದಿಂದ ವಲಸೆ ಬಂದು ತುಳುನಾಡಿನ ಕಾಸರಗೋಡು ಪ್ರದೇಶಗಳಲ್ಲಿ ಅನೇಕ ಕುಟುಂಬಗಳು ನೆಲೆಸಿವೆ. ಅವರು 'ಗೋಂದಾಲ್' ಎಂಬ ಮೂರ್ತಿಯ ಸುತ್ತ ಹಾಡುತ್ತ ಕುಣಿಯುತ್ತ ಪೂಜೆ ಮಾಡುವುದಕ್ಕೆ ಪ್ರಾಮುಖ್ಯತೆ ಕೊಡುತ್ತಿದ್ದರು.[೨]

ಗಣ್ + ದಲ್ - ಗೋಂದೊಳ್, ಗೋಂದೋಳು:

ಗಣೆಗಳಿಂದ ಕೂಡಿದ ದಳವೇ (ಪಡೆಯೇ) ಗೋಂದೊಳ್ . ಇಲ್ಲಿ ಮಹಾಮಾಯೆಯ ಜತೆಗಿರುವ ಗಣಗಳ ಸಮೂಹಕ್ಕೆ ರಕ್ತತರ್ಪಣ ನೀಡಿ ಮಹಾಮಾಯೆಯ ಸೇವೆ ಮಾಡುವುದೇ ಗೋಂದೊಳ್ , ಅಥವಾ ಗೋಂದೋಳು ಪೂಜೆ. ಜನರ ಬಾಯಿಯಲ್ಲಿ ಸುಲಭ ಉಚ್ಚಾರಕ್ಕಾಗಿ 'ಗೋಂದೋಳು' ಶಬ್ದವು 'ಗೊಂದಲ' ಎಂಬುದಾಗಿ ಮಾರ್ಪಟ್ಟಿರಬೇಕು.

ಹೀಗೆ ಎಲ್ಲಾ ರೀತಿಯಲ್ಲಿ ಪರಿಶೀಲಿಸಿದಾಗ 'ಗಣ್ + ದಲ್ - ಗೋಂದೊಳ್ , ಗೋಂದೋಳು' ಎಂಬ ಪದ ನಿಷ್ಪತ್ತಿಯು ತುಂಬಾ ನಿಕಟವಾಗಿರುವುದು ಕಂಡು ಬರುತ್ತದೆ. ತುಳುನಾಡಿನ ಗೋಂದೋಳು ಪೂಜೆಯನ್ನು ನಾವು ನೋಡಿದಾಗ 'ಅಸುರಕ್ರಿಯೆ' ಮತ್ತು 'ದೇವಕ್ರಿಯೆ' ಎಂಬ ವಿಭಾಗಗಳು ಕಂಡುಬರುತ್ತವೆ. ದೇವಿಯ ಜತೆಗಿರುವ ಗಣಗಳಿಗೆ ನೀಡುವ ರಕ್ತತರ್ಪಣವೇ ಅಸುರಕ್ರಿಯೆ. ಅಂತೆಯೇ ರಕ್ತತರ್ಪಣವಿಲ್ಲದೆ ಶ್ರೀದೇವಿಗೆ ಮಾಡುವ ಸೇವೆಯೇ ದೇವಕ್ರಿಯೆಯಾಗಿದೆ.

೩.೨. ಆಚರಣೆಯ ಉದ್ದೇಶ ಮತ್ತು ಆಶಯ

ತುಳುನಾಡಿನ ಪ್ರಕೃತಿ ಪರಿಸರ ಈ ಮೊದಲೇ ತಿಳಿಸಿರುವಂತೆ ವಿಶಿಷ್ಟವೂ ವೈವಿಧ್ಯವೂ ಆಗಿದೆ. ಅದಕ್ಕೆ ಪೂರಕವೆಂಬಂತೆ ಅನೇಕ ದೈವ ದೇವರುಗಳು ಜನಪದರ ಜೀವನದಲ್ಲಿ ಸೇವೆ ಪಡೆದುಕೊಂಡು ರಕ್ಷಕದಂತಿವೆ. ಒಂದು ಭೌಗೋಳಿಕ ವ್ಯತ್ಯಾಸ ಕಂಡುಬಂದರೆ ಅಲ್ಲಿನ ಜನಜೀವನ ರೀತಿನೀತಿ ಧಾರ್ಮಿಕತೆ ಎಲ್ಲವೂ ಬದಲಾವಣೆ ಹೊಂದುವುದು ಸರ್ವೆಸಾಮಾನ್ಯ. ಅದಕ್ಕೆ ತುಳುನಾಡಿನ ಮರಾಠಿ ಸಮುದಾಯವೂ ಹೊರತಾಗಿಲ್ಲ. ಸಹಕಾರ ಮನೋಭಾವ ಎಲ್ಲಾ ಸಮುದಾಯಗಳಲ್ಲೂ ಕಂಡುಬಂದಂತೆ ಮರಾಠಿ ಸಮುದಾಯ ತೌಳವರೊಡನೆ ಬೆರೆತು ಒಂದಾಗಿ ಜೀವನ ನಡೆಸುವರು.

ತುಳುನಾಡಿನಲ್ಲಿ ಈ ಗೋಂದೋಳು ಪೂಜೆ ಅನೇಕ ಆಶಯ ಉದ್ದೇಶಗಳನ್ನು ಹೊಂದಿದೆ ಎಂದು ಹೇಳಬೇಕು. ಗೋಂದೋಳು ಪೂಜೆಯನ್ನು ಶ್ರೀದೇವಿಯ ಪೂಜೆ, ಮಹಮ್ಮಾಯಿ ಪೂಜೆ, ಅಮ್ಮೊರು ಪೂಜೆ (ಅಮ್ಮನವರು) ಪೂಜೆ ಎಂಬೆಲ್ಲಾ ಹೆಸರುಗಳಿಂದ ಕರೆಯುತ್ತಾರೆ. ಉಡುಪಿ ಜಿಲ್ಲೆಯಲ್ಲಿ ಊರಿನ ಜನರು ಸೇರಿ 'ಮಾರಿ ಗೋಂದೋಳು' ಎಂಬ ಗೋಂದೋಳು ಪೂಜೆಯನ್ನೂ ಆಚರಿಸುತ್ತಾರೆ. ಮರಾಠಿ ಸಮುದಾಯದವರು ಶ್ರಮಜೀವಿಗಳು. ಅಂತಹ ಜೀವನದಲ್ಲಿ ಕಷ್ಟಗಳು ಎದುರಾದಾಗ ಶ್ರೀದೇವಿಯೇ ತಮ್ಮನ್ನು ಕಾಪಾಡಬೇಕೆಂದು ಪ್ರಾರ್ಥಿಸುತ್ತಾರೆ. ಹಾಗೆಯೇ ಕೃತಜ್ಞತಾಪೂರ್ವಕವಾಗಿ ಸೇವಾರಾಧನೆಯನ್ನು ಮಾಡುತ್ತಾರೆ. ತಮ್ಮ ತಮ್ಮ ಜಾನುವಾರುಗಳಿಗೆ ಏನಾದರೂ ತೊಂದರೆ ಬಂದಾಗ ಪರಿಹಾರಕ್ಕಾಗಿ ಮಹಮ್ಮಾಯೆಯ ಭಂಟನಾದ ಭೈರವನನ್ನು ಪ್ರಾರ್ಥಿಸುತ್ತಾರೆ. ಇಲ್ಲಿ ಭೈರವನು ಜಾನುವಾರುಗಳ ಮುಖ್ಯ ರಕ್ಷಕನಾಗಿ ಕಾಣುತ್ತಾನೆ. ಮರಾಠಿ ನಾಯ್ಕರು ತಮ್ಮ ಜೀವನದ ಅನೇಕ ಸಂದರ್ಭಗಳಲ್ಲಿ ಶ್ರೀದೇವಿಯ ಸೇವೆ (ಗೋಂದೋಳು ಪೂಜೆ) ಮಾಡುವುದಾಗಿ ಹರಕೆ ಮಾಡುತ್ತಾರೆ. ತಮ್ಮ ಆಸ್ತಿಯ ತಕರಾರಿನಲ್ಲಿ ವಿಜಯಕ್ಕಾಗಿ, ವೃಥಾ ಅನ್ಯರಿಂದ ಆಘಾತಕಾರಿ ತೊಂದರೆಗಳಿಗೆ ಒಳಗಾದಾಗ, ವಿದ್ಯಾವಂತರು ಸರಕಾರಿ ಉದ್ಯೋಗಕ್ಕಾಗಿ, ಮದುವೆ ಮುಂತಾದ ಮಂಗಲ ಕಾರ್ಯಕ್ರಮಗಳ ನಂತರ, ಹೀಗೆ ಉದ್ದೇಶಗಳ ಆಶಯಗಳ ಪಟ್ಟಿ ಬೆಳೆಯುತ್ತದೆ. ಒಟ್ಟಾರೆಯಾಗಿ ಸಮಾಜದಲ್ಲಿ ಶ್ರೀದೇವಿಯಿಂದ ದುಷ್ಟರ ಶಿಕ್ಷೆ ಶಿಷ್ಟರ ರಕ್ಷೆ ಆಗಬೇಕೆಂದು ಆಶಿಸುತ್ತಾರೆ.

ಶ್ರೀಮಂತ ಕುಟುಂಬದವರು ವರ್ಷಂಪ್ರತಿ ಗೋಂದೋಳು ಪೂಜೆ ನಡೆಸುತ್ತಾರೆ. ಮಧ್ಯಮ ವರ್ಗದಲ್ಲಿರುವವರು ಈ ವರ್ಷ "ಮಂಗಳವಾರ ಪೂಜೆ"ಯನ್ನು ನೆರವೇರಿಸಿದರೆ ಮುಂದಿನ ವರ್ಷ

ಗೋಂದೋಳು ಪೂಜೆಯನ್ನು ನಡೆಸುತ್ತಾರೆ. ಬಡತನದಲ್ಲಿರುವವರು ಎರಡು ವರ್ಷಕ್ಕೆ ಒಮ್ಮೆ ಅಥವಾ ಹರಕೆ ಪೂಜೆಯಾಗಿ ಅಮ್ಮನನ್ನು ಸಂತೃಪ್ತ ಪಡಿಸುತ್ತಾರೆ. ಉದ್ದೇಶ ಯಾವುದೇ ಇರಲಿ, ಪ್ರತಿಯೊಬ್ಬನೂ ಅತೀ ಭಯಭಕ್ತಿ ಗೌರವದಿಂದ ವಿನಯಪೂರ್ವಕವಾಗಿ ಪೂಜೆಯನ್ನು ಮಾಡುತ್ತಾನೆ. ಒಂದು ಪೂಜೆಯನ್ನು ನೆರವೇರಿಸಿದರೆ ಕುಟುಂಬದ ಯಜಮಾನನಿಗೆ ಹಾಗೂ ಇಡೀ ಕುಟುಂಬಕ್ಕೆ ಬಹಳ ಸಂತೋಷ, ಕೃತಜ್ಞತಾಭಾವನೆ. ತುಳುನಾಡಿನ ಪ್ರತಿಯೊಬ್ಬ ಮರಾಠಿ ಮನೆಯವರೂ (ಅವರು ಶ್ರೀಮಂತರಾಗಿರಲಿ, ಮಧ್ಯಮವರ್ಗ ಅಥವಾ ಬಡವರಾಗಿರಲಿ) ಒಂದಲ್ಲ ಒಂದು ದಿನ ತಮ್ಮ ಮನೆಯಲ್ಲಿ ಅಮ್ಮನ ಸೇವೆ ಮಾಡಲೇಬೇಕೆಂಬ ಉದ್ದೇಶ ಇಟ್ಟುಕೊಂಡಿರುತ್ತಾರೆ. ಅಂತೆಯೇ ನೆರವೇರಿಸಿದಾಗ ಅವರಿಗೆ ಒಂದು ರೀತಿಯ ಮಾನಸಿಕ ನೆಮ್ಮದಿಗೆ ಅದು ಕಾರಣವೂ ಆಗಿದೆ. ಸದಾ ಶ್ರೀದೇವಿಯನ್ನು ಭೈರವನನ್ನು ಸ್ಮರಿಸುತ್ತಾ "ನಿಮ್ಮ ಕೃಪೆ ನಮ್ಮ ಮೇಲಿರಲಿ" ಎಂದು ಬೇಡುತ್ತಾರೆ. ಮರಾಠಿ ಸಮುದಾಯದವರು ಎಲ್ಲಿಯೇ ದೂರ ದೂರದ ಊರಿಗೆ ಉದ್ಯೋಗ ಯಾ ಇತರ ಕಾರ್ಯಕ್ಕೆ ಹೋದರೂ ತಮ್ಮ ಮೂಲ ಮನೆಯಲ್ಲಿನ ಗೋಂದೋಳು ಪೂಜೆಗೆ ಯಾವ ಅಡ್ಡಿಆತಂಕಗಳಿದ್ದರೂ ಪರಿಹರಿಸಿಕೊಂಡು ಮನೆಯಲ್ಲಿ ಹಾಜರಿರುತ್ತಾರೆ. ಒಟ್ಟಾರೆಯಾಗಿ ಶ್ರೀದೇವಿಯ ಸೇವೆ ಮಾಡಿ ಊರಿನ ಹತ್ತು ಸಮಸ್ತರನ್ನು ಆಧರದಿಂದ ಆಮಂತ್ರಿಸಿ ಪ್ರಸಾದ ಕೊಟ್ಟು ಅನ್ನದಾನ ಮಾಡಿ ತಾವೂ ಸಂತೋಷಪಡುವುದು ತುಳುನಾಡಿನ ಮರಾಠಿಗರ ಆಶಯವಾಗಿದೆ.

೩.೩. ಪೂಜೆಯ ಹಿನ್ನಲೆ

ಪ್ರಸ್ತುತ ಅಧ್ಯಯನ ಒಂದು ಆಚರಣೆಯನ್ನು ಕುರಿತು ಜಾನಪದ ಅಧ್ಯಯನವಾಗಿದೆ. ಜನಪದ ಸಾಹಿತ್ಯ. ಆಚರಣೆ ಕಲೆ ಸಂಪ್ರದಾಯಗಳು ಪುರಾತನ ಕಾಲದಿಂದಲೂ ಮಾನವ ನಡೆದು ಬಂದ ದಾರಿಯನ್ನು ನಮಗೆ ನೀಡುತ್ತದೆ. ಇಂತಹ ಆಚರಣೆಗಳು ಮಾನವನ ಸಾಂಸ್ಕೃತಿಕ ಧಾರ್ಮಿಕ ಇತಿಹಾಸವನ್ನು ಅರಿಯುವಲ್ಲಿ ಮುಖ್ಯ ಸಾಧನಗಳಾಗಿ ಕಂಡುಬರುತ್ತದೆ. ಹೆಚ್ಚಿನ ಎಲ್ಲಾ ಆಚರಣೆಗಳಿಗೆ ದೈವ ಪರಿಕಲ್ಪನೆ, ನಂಬಿಕೆಗಳಂತೆಯೇ ಪ್ರಕೃತಿಯೂ ಮೂಲವಾಗಿದೆ.

ಗೋಂದೋಳು ಪೂಜೆಯ ಹಿನ್ನಲೆ ಕುರಿತು ಕೆಲವೊಂದು ಐತಿಹ್ಯಗಳು ಜನಪದ ಕತೆಗಳು ಜನಪದರಿಂದ ದೊರಕುತ್ತವೆ. ಒಂದು ಜನಪದ ಕತೆಯ ಸಾರಾಂಶ ಹೀಗಿದೆ :

ಬಹಳ ಹಿಂದಿನ ಕಾಲದಲ್ಲಿ ಒಂದು ಪ್ರದೇಶದಲ್ಲಿ ಬಿರುಗಾಳಿ ಬಂದು ಎಲ್ಲಾ ಸರ್ವನಾಶವಾಯಿತು. ಎಲ್ಲಾ ಕುಟುಂಬಗಳು ಮನೆ ಮಠಗಳು ನುಚ್ಚುನೂರಾದ ಮಧ್ಯದಲ್ಲಿ ಓರ್ವ ಮರಾಠಿಗನು ಮಾತ್ರ ಬದುಕುಳಿದಿದ್ದನು. ಬಂಧು ಬಳಗ ಭೂಮಿ ಕಳೆದುಕೊಂಡ ಆತನು ಊರು ಬಿಟ್ಟು ದೂರ ಹೋಗುತ್ತಾನೆ. ನಡೆಯುತ್ತಾ ನಡೆಯುತ್ತಾ ಮುಂದೆ ಸಾಗಿದಾಗ ಎದುರಾಗಿ ಓರ್ವ ಶೇಂದಿ (ಕಳ್ಳು) ಸಂಗ್ರಹಗಾರನು (ಪೂಜಾರಿ) ಸಿಗುತ್ತಾನೆ. ತನಗೆ ತುಂಬಾ ಬಾಯಾರಿಕೆಯೂ ಹಸಿವೂ ಆಗಿದೆ ಏನಾದರೂ ಇದ್ದರೆ ಕೊಡು ಎಂದು ಕೇಳುತ್ತಾನೆ. ಮಡಕೆ (ಮುಗಾಯಿ, ಕುದುಪೆ, ಕುಜಿಲಿ ತುಳುಭಾಷೆಯಲ್ಲಿ)ಯಲ್ಲಿದ್ದ ಶೇಂದಿಯನ್ನು ಕೊಡುತ್ತಾನೆ. ನಂತರ ಆ ಮಡಕೆಯನ್ನೇ ಈತನಿಗೆ ಕೊಟ್ಟು ಅವನು ಮುಂದೆ ಹೋಗುತ್ತಾನೆ. ನಿರ್ಗತಿಕ ಬಾಯಾರಿಕೆಯಾದಾಗ ಸ್ವಲ್ಪ ಸ್ವಲ್ಪವೇ ಕುಡಿಯುತ್ತಾ ನಡೆಯುತ್ತಾನೆ. ಹೀಗೆ ನಡೆಯುತ್ತಿರಲು ಅವನ ಬಲಗಾಲಿನ ದೊಡ್ಡ ಬೆರಳಿಗೆ ಕಲ್ಲು ಬಡಿದು ಮುಗ್ಗರಿಸಿ ನಿಲ್ಲುತ್ತಾನೆ. ತಕ್ಷಣ ಏನಾಗುತ್ತಿದೆ ಎನ್ನುವಷ್ಟರಲ್ಲಿ ಆತನ ಎದುರು ಓರ್ವ ನಗ್ನ ಸ್ತ್ರೀ ಯ ರೂಪ ಕಂಡುಬರುತ್ತದೆ. ನಿರ್ಗತಿಕ ಹೆದರಿಕೆಯಿಂದ ನಿಂತಿರಲು ಆ ಸ್ತ್ರೀಯು "ನೀನು ನನ್ನನ್ನು ಪೂಜಿಸಬೇಕು" ಎಂದು ಹೇಳುತ್ತಾಳೆ. ಈತನು "ನಾನು ಏನೂ ಇಲ್ಲದ ನಿರ್ಗತಿಕ. ಯಾವುದೇ ಪರಿಕರಗಳಿಲ್ಲದೆ ನಾನು ಯಾವ ರೀತಿಯಿಂದ ಪೂಜಿಸಲಿ ಎಂದು ಪ್ರಾರ್ಥಿಸುತ್ತಾನೆ. "ನಿನ್ನ ಕೈಯಲ್ಲಿರುವ ಮಡಕೆಯಲ್ಲಿರುವ ಶೇಂದಿಯನ್ನು ನನ್ನ ಪೂಜೆಗೆ ಬಳಸು. ಇಲ್ಲಿಯೇ ಹತ್ತಿರದಲ್ಲಿರುವ ನೆಲ್ಲಿಕಾಯಿ ಮರದ ಕೆಳಗೆ ನನಗೆ ನೈವೇದ್ಯ ಬಡಿಸಬೇಕು. ಅದಕ್ಕೆ ಬೇಕಾದ ಸಲಕರಣೆಗಳು ಸ್ವಲ್ಪ ಮುಂದೆ ಸಾಗಿದರೆ ನಿನಗೆ ಕೆಲವು ಮನೆಯವರಿಂದ ದೊರೆಯುತ್ತವೆ. ಅಂತೆಯೇ ಹತ್ತು ಕಾಲಿನ ಜೀವಿಯ ನೈವೇದ್ಯ ಕೊಡಬೇಕು" ಎಂದು ಹೇಳಿದಾಗ "ನನಗೆ ಹತ್ತು ಕೈಕಾಲಿನ ಜೀವಿ ಯಾವುದೆಂದು ತಿಳಿದಿಲ್ಲ" ಎಂದು ಹೇಳುತ್ತಾನೆ. ಹತ್ತಿರದ ತೋಡುಗಳ ಹತ್ತಿರ ಕಲ್ಲುಗಳನ್ನು ತೆಗೆದರೆ ಸಿಗುತ್ತದೆ. ಹಾಗೆಯೇ ನನಗೆ ಹಿಂಬದಿಯಿಂದ ಪೂಜೆ ಮಾಡಬೇಕು. ಇದರಿಂದ ನಿನ್ನ ಸರ್ವತೋಮುಖ ಉದ್ಧಾರವಾಗುತ್ತದೆ." ಎಂದು ಹೇಳಿ ಅದೃಶ್ಯವಾಯಿತು. ಹೇಳಿದಂತೆಯೇ ಮಾಡಿದಾಗ ಕಲ್ಲುಗಳ ಕೆಳಗೆ ಏಡಿ ದೊರೆಯಿತು. ಪಾತ್ರೆ ಸಲಕರಣೆಗಳೊಂದಿಗೆ ನೆಲ್ಲಿಕಾಯಿ ಮರದ ಬುಡದಲ್ಲಿ ನೈವೇದ್ಯ ಅರ್ಪಿಸುತ್ತಾನೆ. ಮರದ ಎಲೆಗಳು ಕಸಗಳು ಬೀಳದ ಹಾಗೆ ಒಂದು ವಸ್ತ್ರವನ್ನು ಕಟ್ಟುತ್ತಾನೆ. ತದನಂತರ ತುಂಬಾ ಅಭಿವೃದ್ಧಿ ಹೊಂದುತ್ತಾನೆ. ಇಂದಿಗೂ ಗೋಂದೋಳು ಪೂಜೆಯಲ್ಲಿ ಪೂಜಾಸ್ಥಳದ ಮೇಲೆ ಬಟ್ಟೆ ಕಟ್ಟಲಾಗುತ್ತದೆ. ಏಡಿಯನ್ನು ಪದಾರ್ಥ ಮಾಡಿ ಬಡಿಸಲಾಗುತ್ತದೆ. ಪೂಜೆಯ ಆದಿಯಿಂದ ಅಂತ್ಯದವರೆಗೆ ಒಂದು ಮಡಕೆಯಲ್ಲಿ ಶೇಂದಿ ಇಟ್ಟಿರುತ್ತಾರೆ. 'ಗದ್ದಿಗೆ'ಯ ಹಿಂದುಗಡೆಯಿಂದ ಪೂಜೆ ಸಲ್ಲಿಸಲಾಗುತ್ತದೆ. ಇಂತಹ ಸಂಪ್ರದಾಯವು ಬಳ್ಳಾರಿ ಜಿಲ್ಲೆಯಲ್ಲೂ ಕಂಡುಬರುತ್ತದೆ. ಬಳ್ಳಾರಿ ದುರುಗಮ್ಮನ ಆರಾಧನೆಯ ಬಗ್ಗೆ ಸ.ಚಿ.ರಮೇಶ್ ಅವರು ಹೀಗೆ ತಿಳಿಸುತ್ತಾರೆ. "ಬಳ್ಳಾರಿಯ ಸುಪ್ರಸಿದ್ಧ ದೇವತೆಯೆಂದರೆ ದುರುಗಮ್ಮ.

ಈ ದೇವಾಲಯದ ರಚನೆಯೇ ಅದು ಪ್ರಾಚೀನ ಕಾಲದ್ದೆಂದು ಸ್ಪಷ್ಟಪಡಿಸುತ್ತದೆ. ಬಳ್ಳಾರಿಯ ಬಗೆಗೂ ಬಳ್ಳಾರಿ ದುರ್ಗಿಯ ಬಗೆಗೂ ಸಂಬಂಧ ಕಲ್ಪಿಸುವ ಪ್ರಯತ್ನಗಳು ನಡೆದಿವೆ. ಗರ್ಭಗುಡಿಯಲ್ಲಿ ತಾನಾಗಿಯೇ ಬೆಳೆದ ಹುತ್ತವೇ ದುರ್ಗಿ ಎಂದೂ ಅದು ಅವಳ ಬೆನ್ನು ಎಂಬ ನಂಬಿಕೆಯಿದೆ. ಅದನ್ನೇ ಅಲಂಕಾರ ಮಾಡಿ ಪೂಜಿಸುತ್ತಾರೆ."(ಸ.ಚಿ.ರಮೇಶ್, ೧೯೯೪; ೧೨೦)

ಪೂಜೆಯ ಹಿನ್ನೆಲೆಯಾಗಿ ಇನ್ನೊಂದು ಜನಪದ ಕಥೆ ತುಳುನಾಡಿನಲ್ಲಿ ಪ್ರಚಲಿತದಲ್ಲಿದೆ. ಮರಾಠಿ - ನಾಯ್ಕನು ಘಟ್ಟದ (ಬಯಲು ಸೀಮೆ) ಕಡೆಯಿಂದ ಇಳಿದು ಬರುವಾಗ ದಾರಿಯಲ್ಲಿ ಒಂದು ಹಂದಿ ಕಾಣಿಸಿತು. ಅದನ್ನು ಗಮನಕ್ಕೆ ತಂದುಕೊಳ್ಳದೆ ಅವನು ಬರುತ್ತಿರಲು ಹಂದಿ ತನ್ನ ಹಿಂದೆ ಬರುತ್ತಿರುವುದನ್ನು ಆಶ್ಚರ್ಯದಿಂದ ನೋಡಿದನು. ತನ್ನ ಮನೆಗೆ ಬರುವಾಗಲೂ ಹಂದಿ ಬರುತ್ತಿರುವುದು ಕಂಡಿತು. ಹಾಗೆಯೇ ಅದನ್ನು ಸಾಕುವ ಜವಾಬ್ದಾರಿಯನ್ನು ವಹಿಸಿಕೊಂಡನು. ತನ್ನ ಮನೆಯಲ್ಲಿ ನಡೆಯುವ ಗೋಂದೋಳು ಪೂಜಾ ಸಂದರ್ಭದಲ್ಲಿ ತಾನು ನಂಬಿದ ದೈವಗಳಿಗೆ ಬಲಿಕೊಡುತ್ತಾನೆ. ಅಂದಿನಿಂದ ಅದು ಒಂದು ಸಂಪ್ರದಾಯ ರೂಢಿಯಾಯಿತು ಎಂದು ಹಿರಿಯರ ಅಂಬೋಣ. ಪೂಜೆಯ ಹಿನ್ನೆಲೆಯ ಬಗ್ಗೆ ವೆಂಕಪ್ಪ ನಾಯ್ಕ, ಬಂಟ್ವಾಳ ಇವರು ಈ ರೀತಿಯ ಒಂದು ಲೇಖನ ನೀಡುತ್ತಾರೆ.

ಶ್ರೀ ಶ್ರೀ ಮಹಾಮ್ಮಾಯಿ

"ಶ್ರೀ ದೇವಿ ಮಹಮ್ಮಾಯಿ ಹೇಗೆ ಉದ್ಭವಿಸಿದಳು ಎಂದು ಎಲ್ಲರ ಮನಸ್ಸಿನಲ್ಲೂ ಮೂಡಿ ಬಂತು. ಧರ್ಮ ನಾಶವಾಗಿ ಅಧರ್ಮ ಮೆರೆಯುವ ಸಮಯ, ಆಚಾರ ವಿಚಾರಗಳಿಲ್ಲ. ಎಲ್ಲಿ ನೋಡಿದರೆ ಕೊಲೆ ದರೋಡೆಗಳು, ಅತ್ಯಾಚಾರ ಅನಾಚಾರಗಳು ನಡೆಯುತ್ತಿದ್ದವು. ಮಳೆ ಇಲ್ಲ ಬೆಳೆ ಇಲ್ಲ, ಅಲ್ಲಲ್ಲಿ ಅಲ್ಪಸ್ವಲ್ಪ ಬೆಳೆಸಿದರೂ ಕಾಡು ಮೃಗಗಳ ಹಾವಳಿಯಿಂದ ನಾಶವಾಗುತ್ತಿತ್ತು. ಸರಿಯಾಗಿ ಮೈ ಅಡಗಿಸುವ ಸಾಧನಗಳಿರಲಿಲ್ಲ. ಸ್ವತಃ ನಿಯಮಗಳಿರಲಿಲ್ಲ, ಆಚಾರ ವಿಚಾರಗಳಿರಲಿಲ್ಲ.

ಈ ಸಂದರ್ಭದಲ್ಲಿ ಆದಿಮಾಯೆಯ ಉದ್ಭವವಾಯಿತು. ಸಜ್ಜನರ ಮನಸ್ಸು ಪುಳಕಿತವಾಯಿತು.

ಆದಿ ಮಾಯೆಯು ಸಜ್ಜನರ ಏಳಿಗೆಗೆ ಒಂದೊಂದು ಕಡೆಯಲ್ಲಿ ಒಂದೊಂದು ಅವತಾರದಿಂದ ಸಂಚರಿಸಿತು. ಮನುಷ್ಯರ ಕೆಟ್ಟ ಮನಸ್ಸುಗಳನ್ನು ಪರಿವರ್ತಿಸುತ್ತ ಹತ್ತು ಹಲವು ದೇವಾದಿಗಳನ್ನು ಸ್ವೀಕರಿಸಿದ್ದಾಳೆ. ಎಲ್ಲಿ ಸಂಚಾರ ಮಾಡಿ ನೋಡಿದರೂ ಸೇವೆಗಳು ತೃಪ್ತಿಯಾಗಲೇ ಇಲ್ಲ.

ಹದಿನೆಂಟು ಅವತಾರಗಳಲ್ಲಿ ಹದಿನೆಂಟನೇ ಸೇವೆ ಸ್ವೀಕರಿಸಿದಳು. ಅದು ಕುಮೇರು ಕುಲ್ವಾಡಿ ಮರಾಟ ಕೊಟ್ಟ ಈ ಸೇವೆಯಿಂದ ತೃಪ್ತಳಾಗುತ್ತಾಳೆ. ಇದರಲ್ಲಿ ಕಾಶಿ ಕಾಳ ಭೈರವನ ಸೇವೆ ಕೂಡ ಮಾಡುತ್ತಾನೆ.

ರಾತ್ರಿ ಶ್ರೀ ದೇವಿ ಶ್ರೀ ಮಹಾಮ್ಮಾಯಿ ಸೇವೆಯಲ್ಲೂ ಭೈರವನಿಗೆ ಅಗ್ರಸ್ಥಾನ ಈಶ್ವರನೇ ಭೈರವನಾಗಿ ಬಂದಿದ್ದಾನೆಂದು ಊಹೆ. ದೇವಿ ಸನ್ನಿಧಿಯಲ್ಲಿ ಬಲಭಾಗದಲ್ಲಿದ್ದು ಸೇವೆ ಸ್ವೀಕರಿಸುತ್ತಾನೆ. ಶಕ್ತಿ ಕೂಡಿಸುವುದೆಂದರೆ ಶ್ರೀ ದೇವಿಯ ಸಹಪಾಠಿ. ಇವಳು ದೇವಿಯ ಒಡನಿದ್ದು ಕೆಲಸ ಕಾರ್ಯಗಳನ್ನು ಮಾಡುವವಳು.

ದೇವಿಗೆ ಅಗ್ನಿ, ಕರ್ಪೂರ, ಧೂಪ, ದೀಪಗಳೇ ಸಾಕಾಗುತ್ತವೆ. ಇವುಗಳ ಸೇವನೆಯಿಂದ ತೃಪ್ತಳಾಗುತ್ತಾಳೆ. ಆದರೆ ದೇವಿಧೂತರಿಗೆ ಹಾಗಲ್ಲ. ಅವರಿಗೆ ರಕ್ತತರ್ಪಣವೇ ಮುಖ್ಯವಾದದ್ದು.

ಏಳು ಸಮುದ್ರಗಳ ಮುಂದೆ ಶಂಕಾಸುರನೆಂಬ ರಾಕ್ಷಸನಿದ್ದನು. ಅವನು ತುಂಬಾ ಅನುಚರರೊಡನೆ ಮೆರೆಯುತ್ತಿದ್ದನು. ಇವನ ಉಪಟಳ ತಾಳಲಾರದೆ ದೇವಿಯು ಕುಮೇರು ಕುಲ್ವಾಡಿ ಮರಾಟ ಮಾಡುವಂತಹ ದೇವಿ ಪೂಜೆಗೆ ಸಹಕರಿಸುತ್ತಾಳೆ. ಕೋಳಿ ರೂಪದಲ್ಲಿ ಶಂಖಾಸುರನ ಅನುಚರರನ್ನು ವಧಿಸುತ್ತಾಳೆ. ಪೂಜೆ ಮಾಡುವಾಗ ಇದನ್ನು ಕೋಳಿ ಕೊಯ್ಯುವುದೆಂದು ನಿಯಮ. ಹೀಗೆ ಇವನ ಅನುಚರರ ಸಂಹಾರವಾಗುತ್ತದೆ. ಇದನ್ನು ತಿಳಿದ ಶಂಖಾಸುರನು ಹಂದಿ ರೂಪ ತಾಳಿ ಬರುತ್ತಾನೆ. ಇವನನ್ನು ದೇವಿಯೇ ಸಂಹರಿಸುತ್ತಾಳೆ. ಅವನ ಕೇಳಿಕೆಯಂತೆ ದೇವಿಯು ಶಾಂಭವಿ ಎಂದು ನಾಮಕರಣ ಮಾಡಿಕೊಳ್ಳುತ್ತಾಳೆ. ಪೂಜೆ ವಿಧಿಯಲ್ಲಿ ಹಂದಿ ಕೊಯ್ಯುವ ಕ್ರಮವು ಹೀಗೆಯೇ ಬಂದಿರುತ್ತದೆ. ಇದರ ತಲೆ ಒಳಗೆ ಬಿದ್ದು ಶರೀರ ಹೊರಗೆ ಬೀಳುತ್ತದೆ. ಪದ್ಧತಿ ಪ್ರಕಾರ ಕೋಳಿ ಮತ್ತು ಹಂದಿ ತಲೆ ದೇವಿಯ ಪಾದದಡಿಯಲ್ಲಿರುತ್ತದೆ.

ಈ ದೈತ್ಯನ ಸಂಹಾರದ ನಂತರ ಇವುಗಳ ಶರೀರದ ವಸ್ತುಗಳನ್ನು ತಾನು ಉಪಯೋಗಿಸುತ್ತಾಳೆ. ಕಿವಿಯನ್ನು ತಾಳವಾಗಿಯೂ ಮಾಡುತ್ತಾಳೆ. ಬೆರಳುಗಳನ್ನು ದೀವಟಿಗೆ, ರಕ್ತವನ್ನು ಎಣ್ಣೆ ಎಂಬುದಾಗಿಯೂ ಮೂಗನ್ನು ಶಂಖವಾಗಿಯೂ ಕರುಳನ್ನು ರುದ್ರಾಕ್ಷಿಯಾಗಿಯೂ ಕೈಕಾಲು ಬೆನ್ನೆಲುಬನ್ನು ಮಂಚವಾಗಿಯೂ ಕೂದಲನ್ನು ಧವಳವನ್ನಾಗಿಯೂ ಹೊಟ್ಟೆಯನ್ನು ಅಗ್ನಿ ಪಾತ್ರವಾಗಿ ಮಾಡಿಕೊಳ್ಳುತ್ತಾಳೆ.

ಈ ಹದಿನೆಂಟನೇ ಅವತಾರದಲ್ಲಿ ಇನ್ನು ಹಲವು ಪ್ರಕಾರ ಭಕ್ತರನ್ನು ಪರೀಕ್ಷಿಸುತ್ತಾಳೆ.

ಚಿನ್ನ, ಬೆಳ್ಳಿ, ತಾಮ್ರ, ಸೀಸ, ಕಲ್ಲಿನ, ತವರ, ನವರತ್ನಗಳ ಏಳು ಕೊಡಗಳನ್ನು ಮಾಡಿ ಇವುಗಳಲ್ಲಿದ್ದುಕೊಳ್ಳುತ್ತಾಳೆ. ಊರು ಊರುಗಳಿಗೆ ವಿವಿಧ ರೋಗಗಳನ್ನು ಹಬ್ಬುತ್ತಾಳೆ. ಜನರು ದೇವಿಯನ್ನು ನಂಬಿ ದೇವಿಗೆ ಸೇವ ರೂಪದಲ್ಲಿ ಸೇವೆಯನ್ನು ಮಾಡಿ ಸಂಕಷ್ಟಗಳನ್ನು ಪರಿಹರಿಸಿಕೊಡು ಎಂದ ಬಿನ್ನವಿಸಿಕೊಳ್ಳುತ್ತಾರೆ.

ನಯವಿನಯ ಕರುಣೆಯುಳ್ಳ ದೇವಿಯ ಭಕ್ತರ ಭಕ್ತಿಗೆ ಮೆಚ್ಚಿ ಪ್ರಸನ್ನಳಾಗಿ ಮನಸ್ಸಿನ ಇಷ್ಟಾರ್ಥಗಳನ್ನು ಈಡೇರಿಸಿ ಪ್ರಸನ್ನಳಾಗಿರುತ್ತಾಳೆ." (ವೆಂಕಪ್ಪ ನಾಯ್ಕ ಎ, ಮರಾಟಿ ಸಂಪದ, ೨೦೦೧, ಪುಟ೨೮)

೩.೪ ಭೈರವನ ಪೂಜೆ

ಗೋಂದೂಳು ಪೂಜೆಯಲ್ಲಿ ಶ್ರೀದೇವಿಯ ಪ್ರಥಮ ಭಂಟನಾದ ಭೈರವನಿಗೆ ಪ್ರಥಮ ಪೂಜೆ ಸಲ್ಲುತ್ತದೆ. ತುಳುನಾಡಿನ ದೈವ ದೇವರುಗಳ ಸಂಸ್ಕೃತಿಯಲ್ಲಿ ವೃಕ್ಷಗಳಿಗೆ ಮಹತ್ವದ ಪಾತ್ರವಿದೆ. ಅನೇಕ ದೈವಗಳು ತಮ್ಮನ್ನು ವೃಕ್ಷಗಳ ಜೊತೆಗೆ ಗುರುತಿಸಿಕೊಂಡಿವೆ. ಇದು ಇತರ ಗ್ರಾಮ ದೇವತೆಗಳ ಅಸ್ತಿತ್ವದಲ್ಲಿಯೂ ಕಂಡುಬರುತ್ತದೆ. ಕೆಲವು ದೈವ ದೇವತೆಗಳು ವೃಕ್ಷಗಳಲ್ಲೇ ಒಡಮೂಡಿರುವುದರಿಂದ ಅವುಗಳ ಭಕ್ತರು ಆ ವೃಕ್ಷಗಳನ್ನು ಪೂಜಿಸುತ್ತಾರೆ. ಅವುಗಳನ್ನು ಕಡಿಯುವುದಿಲ್ಲ. ಸೌದೆಯಾಗಿ ಬಳಸುವುದಿಲ್ಲ. ಈ ರೀತಿಯ ಸಂಸ್ಕೃತಿ ಮಾನವನು ಆದಿಯಿಂದಲೂ ನಡೆಸಿಕೊಂಡು ಬಂದಿದ್ದಾನೆ. ಹರಿಯುವ ನೀರು, ಉರಿಯುವ ಸೂರ್ಯ, ಗಿಡ ಮರ ಕಲ್ಲುಗಳಲ್ಲಿ ಚೈತನ್ಯವನ್ನು ಕಂಡ ಮಾನವ ಅವುಗಳನ್ನು ಭಕ್ತಿ ಗೌರವಗಳಿಂದ ಆರಾಧಿಸತೊಡಗಿದ. ಪುರಾತನ ಕಾಲದಿಂದಲೂ ವೃಕ್ಷಗಳು, ಶಿಲೆಗಳು, ಹುತ್ತಗಳು ದೈವ ದೇವರುಗಳ ಕಲ್ಪನಾ ವಿಕಾಸಕ್ಕೆ ಕಾರಣಗಳಾಗಿವೆ. ಭಾರತೀಯ ಸಂಸ್ಕೃತಿಗೆ ಬೆನ್ನೆಲುಬಾಗಿ ಆಚರಣೆಗಳು ನಿಂತಿವೆ. ಆಚರಣೆಯಿಲ್ಲದೆ ಯಾವ ದೈವದ ಅಸ್ತಿತ್ವ ಸಾಧ್ಯವಿಲ್ಲ.

ಭೈರವ ಪೂಜೆಯ ಹಿನ್ನೆಲೆಯಾಗಿ ಇತಿಹಾಸವಾಗಿ ಕೆಲವೊಂದು ಮಾಹಿತಿಗಳು ನಮಗೆ ಸಿಗುತ್ತವೆ. ಕರ್ನಾಟಕದಲ್ಲಿ ಭೈರವನ ಅಸ್ತಿತ್ವದ ಬಗ್ಗೆ ಡಾ. ಚಿದಾನಂದಮೂರ್ತಿಯವರು ಕೆಲವು ಮಾಹಿತಿಯಗಳನ್ನು ಒದಗಿಸುತ್ತಾರೆ. ಕಾಶ್ಮೀರ ಶೈವಸಿದ್ಧಾಂತದಲ್ಲಿ ಸಾಧನೆಯ ಫಲವಾಗಿ ಶಿವನಿಗೆ ಸಮಾನವಾದ ಸ್ಥಿತಿಯನ್ನು ಪಡೆದವನನ್ನು ಭೈರವನೆಂದು ಕರೆಯುತ್ತಾರೆ. "ಕನ್ನಡ ಶಾಸನಗಳಲ್ಲಿ ಬರುವ ಭೈರವ ಪೂಜೆ, ಭೈರವ ಗುಹೆಗಳು ಕಾಶ್ಮೀರ ಶೈವದ ಕೊಡುಗೆ ಎಂದು ಹೇಳಲಾಗದು" ಎಂದು ಹೇಳುತ್ತಾರೆ. ಮುಂದುವರೆದು ಕರ್ನಾಟಕದಲ್ಲಿ

ಭೈರವ ಪೂಜೆಯು ಬಹುಶಃ ಕಾಪಾಲಿಕರಿಂದ ಬಂದಿರಬೇಕು (ಪುಟ ೧೩೮). ಶೈವಧರ್ಮದ ಒಂದು ಶಾಖೆ ವಾಮಾಚಾರ ಪದ್ಧತಿಯ ಕಾಪಾಲಿಕರದು. ಏಳನೆಯ ಶತಮಾನದ ತಾಮ್ರಪಟಗಳಿಂದ ನಾಸಿಕ ಜಿಲ್ಲೆಯ ಕಾಪಾಲೇಶ್ವರ ದೇವಸ್ಥಾನದಲ್ಲಿ ಕಾಪಾಲಿಕರು ಇದ್ದರು. ಕೃಷ್ಣ ಮಿತ್ರನ ಪ್ರಭೋಧ ಚಂದ್ರೋದಯದ ಕಾಪಾಲಿಕನು ಮಹಾಭೈರವನ ಆರಾಧಕನಾಗಿದ್ದು, ಅದೇ ತಾನೇ ಕಡಿದ ನರ ಮುಂಡಗಳ ರಕ್ತದಿಂದ ಭೈರವನನ್ನು ತೃಪ್ತಿಪಡಿಸಬೇಕು ಎನ್ನುತ್ತಾನೆ ಎಂದು ತಮ್ಮ "ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಕ್ರಿ.ಶ. ೪೫೦ - ೧೧೫೦)" ಗ್ರಂಥದಲ್ಲಿ ಚಿದಾನಂದ ಮೂರ್ತಿಯವರು ತಿಳಿಸುತ್ತಾರೆ.

ತುಳುನಾಡಿನ ಕೆಲವು ಹಿರಿಯ ಜನಪದರು "ಭೈರವನು ಈಶ್ವರನ ಅವತಾರ"ವೆಂದೂ ಹೇಳಿಕೆ ನೀಡುತ್ತಾರೆ. ಹಾಗೆಯೇ ಕಾಶ್ಮೀರದ ಹಿಮಾಲಯ ತಪ್ಪಲಿನಲ್ಲಿ ನಡೆದ ಪೌರಾಣಿಕ ಕಥೆಯು ಕೂಡ ಭೈರವನು ಕಾಶ್ಮೀರದಿಂದ ಬಂದವನು ಎಂಬುದಕ್ಕೆ ಒತ್ತು ನೀಡುತ್ತದೆ. ಮತ್ತೆ ಭೈರವನಿಗೆ ಆಗ ತಾನೇ ಕೋಳಿಗಳ ನರ ಮುಂಡಗಳ ರಕ್ತ ತರ್ಪಣವನ್ನೇ ಅರ್ಪಿಸುವುದನ್ನು ಭೈರವ ಪೂಜೆಯಲ್ಲಿ ಕಾಣಬಹುದಾಗಿದೆ. ಭೈರವನು ಹದಿನೆಂಟು ಅವತಾರಗಳನ್ನು ಹೊಂದಿದ್ದಾನೆಂದು ಹೇಳಿಕೆ ನೀಡುತ್ತಾರೆ.

ಒಂದು ಜನಪದ ಕಥೆಯ ಸಾರಾಂಶ ಈ ರೀತಿಯಿದೆ : ಹಿಮಾಲಯ ಶಿಖರದ ತಪ್ಪಲಿನಲ್ಲಿ ಭೈರವನೆಂಬ ಅಸುರನು ದೀರ್ಘ ತಪಸ್ಸು ಮಾಡುತ್ತಿದ್ದನು. ಎಲ್ಲರಿಗಿಂತಲೂ ತಾನು ಶ್ರೇಷ್ಠತನವನ್ನು ಪಡೆಯುವುದೇ ತಪಸ್ಸಿನ ಗುರಿಯಾಗಿತ್ತು. ಘೋರ ತಪಸ್ಸು ಮಾಡಿ ವರವನ್ನು ಪಡೆಯುತ್ತಾನೆ. ಹತ್ತಿರದ ವೈಷ್ಣೋವಿ ದೇವಾಲಯ ಇದ್ದು ಶ್ರೀದೇವಿಯನ್ನು ಪೂಜಿಸಲು ಅಸಂಖ್ಯಾತ ಭಕ್ತರು ಬರುತ್ತಿದ್ದರು. ಶ್ರೀದೇವಿಯನ್ನು ಪೂಜಿಸುತ್ತಾ ಭಕ್ತಾದಿಗಳು ಹಾಡಿ ಹೊಗಳುತ್ತಿದ್ದರು. ಗುಣಗಾನ ಮಾಡುತ್ತಿದ್ದರು. ಅದರ ಪರಿಣಾಮವಾಗಿ ಭಕ್ತರು ತುಂಬಾ ನೆಮ್ಮದಿಯಿಂದ ಜೀವನ ನಡೆಸುತ್ತಿದ್ದರು. ಈ ವಿಷಯ ತಿಳಿದ ಭೈರವನು ಕೋಪೋದ್ರಿಕ್ತನಾಗಿ ನಾನು ಘೋರ ತಪಸ್ಸಿನಿಂದ ಪಡೆದ ವರ ವ್ಯರ್ಥವಾಗಬಾರದು. ದೇವಾಲಯದ ದೇವಿಯನ್ನು ಕಂಡು ಅವಳಿಂದಲೇ ನನ್ನ ಗುಣಗಾನ ಮಾಡಿಸಬೆಕು. ದೇವಿಗಿಂತ ನಾನೇ ಶ್ರೇಷ್ಠ ಎಂಬುದಾಗಿ ಅವಳ ಭಕ್ತಾದಿಗಳು ಹೇಳುವಂತಾಗಬೇಕು ಎಂದು ನಿಶ್ಚಯಿಸುತ್ತಾನೆ. ಹಾಗೆಯೇ ವೈಷ್ಣೋವಿ ದೇವಾಲಯಕ್ಕೆ ಬಂದು ಶ್ರೀದೇವಿಯಲ್ಲಿ ತಾನು ಬಂದ ಕೆಲಸವನ್ನು ಹೇಳುತ್ತಾನೆ. ಶ್ರೀದೇವಿಯು ಅದಕ್ಕೆ ಒಪ್ಪುವುದಿಲ್ಲ. ಇದರಿಂದಾಗಿ ಕೋಪಗೊಂಡ ಭೈರವನು ಮಾತೆಗೆ ಅನೇಕ ರೀತಿಯಲ್ಲಿ ತೊಂದರೆ ಕೊಡಲು ಪ್ರಾರಂಭಿಸುತ್ತಾನೆ. ಕೊನೆಗೆ ದೇವಿಯು ಕೋಪಗೊಂಡು ಈ ಅಸುರನಿಗೆ ತಕ್ಕ ಶಾಸ್ತಿ ಮಾಡಬೇಕೆಂದು ನಿಶ್ಚಯಿಸುತ್ತಾಳೆ. ಭೈರವನಿಗಿಂತ

ಎತ್ತರದ ರೂಪ ತಾಳಿ ತನ್ನ ತ್ರಿಶೂಲದಿಂದ ಅಸುರನ ಹೃದಯಕ್ಕೆ ತಿವಿಯುತ್ತಾಳೆ. ಹೀಗೆ ಭೈರವನ ಅವಸಾನವಾಗುತ್ತದೆ. ತನ್ನ ಮರಣದ ಸಮಯದಲ್ಲಿ ಭೈರವನು ತನ್ನ ಕೊನೆಯ ಆಸೆಯನ್ನು ಹೇಳುತ್ತಾನೆ. "ದೇವಿ ನಿನಗೆ ನಾನು ಸದಾ ಭಂಟನಾಗಿ ರಕ್ಷಕನಂತಿರುತ್ತೇನೆ. ಆದುದರಿಂದ ನಿನಗೆ ಪೂಜೆ ಸಲ್ಲುವಾಗ ಮೊದಲು ನನಗೂ ಪೂಜೆ ಇರಲಿ" ಎಂದು ಬೇಡುತ್ತಾನೆ. ಅದಕ್ಕೆ ಮಾತೆಯು ಸಮ್ಮತಿ ಸೂಚಿಸುತ್ತಾಳೆ. ಅದರಂತೆ ಗೋಂದೋಳು ಪೂಜೆಯು ಪ್ರಾರಂಭವಾಗುವುದಕ್ಕಿಂತ ಮೊದಲು ಭೈರವನಿಗೆ ಬನದಲ್ಲಿ ಅಸುರ ಕ್ರಿಯೆಯಲ್ಲಿ ಪೂಜೆ ಸಲ್ಲಿಸಲಾಗುತ್ತದೆ. ಅಸುರ ಕ್ರಿಯೆಯಾದುದರಿಂದ ಇಲ್ಲಿ ಕೋಳಿಗಳ ರಕ್ತತರ್ಪಣ ಭೈರವನಿಗೆ ನೀಡಲಾಗುತ್ತದೆ. (ಅಣ್ಣುನಾಯ್ಕ, ಮಲಾರ್‌ಕೋಡಿ, ಬಂಟ್ವಾಳ)

ಎರಡನೆಯ ಜನಪದ ಕತೆಯು ಉತ್ತರ ಕರ್ನಾಟಕದಲ್ಲಿ ಕಂಡುಬರುವ ಮಾರಿದೇವತೆಯ ಕತೆಯನ್ನೆ ಹೆಚ್ಚಾಗಿ ಹೋಲುತ್ತದೆ. ಅದರ ಸಾರಾಂಶ ಹೀಗಿದೆ. 'ಬೈರ'ನೆಂಬ ಓರ್ವ ಕೆಳಜಾತಿಯವನು ಸುಳ್ಳು ಹೇಳಿ (ಜಾತಿಯನ್ನು ಹೇಳದೆ) ಮೇಲ್ಜಾತಿಯ ಬ್ರಾಹ್ಮಣ ಹುಡುಗಿಯನ್ನು ಮದುವೆಯಾಗುತ್ತಾನೆ. ಬೈರನು ಪ್ರತೀ ದಿನ ಚಪ್ಪಲಿ ಹೊಲಿಯುವ ಕಾಯಕ ಮಾಡುತ್ತಿದ್ದನು. ಆತ ಬೆಳಿಗ್ಗೆ ಮನೆಯನ್ನು ಬಿಟ್ಟರೆ ಸಂಜೆ ಸಮಯದಲ್ಲಿ ಮನೆ ಸೇರುತ್ತಿದ್ದ. ಹೆಂಡತಿಯು ತನ್ನ ಗಂಡನ ಕೆಲಸದ ಬಗ್ಗೆ ಕೇಳುತ್ತಿರಲಿಲ್ಲ. ಗಂಡ ಬಾಯಿಬಿಟ್ಟು ಹೇಳುತ್ತಿರಲಿಲ್ಲ. ಕಾಲ ಸರಿದಂತೆ ಆತನಿಗೆ ಇಬ್ಬರು ಗಂಡು ಮಕ್ಕಳಾದರು. ಮಕ್ಕಳು ಆಟವಾಡುತ್ತಾ ಆಟವಾಡುತ್ತಾ ಒಂದು ದಿನ ತಮ್ಮ ತಂದೆಯನ್ನು ಹಿಂಬಾಲಿಸಿದರು. ತಂದೆ ಚಪ್ಪಲಿ ಹೊಲಿಯುವ ಕೆಲಸವನ್ನು ಅಡಗಿ ಕುಳಿತು ನೋಡಿ ಬಂದರು. ಮರುದಿನ, ಮಕ್ಕಳು ಅಂಗಳದಲ್ಲಿ ಆಟವಾಡುತ್ತಾ ಹಲಸಿನ ಮರದ ಎಲೆಗಳನ್ನು ಹಿಡಿದುಕೊಂಡು ಚಪ್ಪಲಿ ಹೊಲಿಯುವ ಹಾಗೆ ಅಣಕವಾಡುತ್ತಾ ಇದ್ದರು. ಇದನ್ನು ತಾಯಿ ನೋಡಿ "ಏನು ಮಾಡುತ್ತಿದ್ದಿರಿ?" ಎಂದು ಹೇಳಿದಾಗ "ನಾವು ಅಪ್ಪ ಮಾಡಿದ ಹಾಗೆ ಮಾಡುತ್ತಾ ಆಡುತ್ತಿದ್ದೇವೆ" ಎಂಬ ಉತ್ತರ ಬಂತು. "ಹಾಗೆಲ್ಲಾ ಯಾಕೆ ಮಾಡುತ್ತೀರಿ?" ಎಂದು ಮಕ್ಕಳು ಹೇಳುತ್ತಾರೆ. ತಕ್ಷಣ ತಾಯಿಗೆ ತನ್ನ ಪತಿಯ ಕೆಲಸದ ಪರಿಚಯವಾಯಿತು. ಹಾಗೆ "ಕೆಳಮಟ್ಟದ ಜಾತಿಯವನು ನನ್ನ ಗಂಡ". ಸುಳ್ಳು ಹೇಳಿ ನನಗೆ ಮೋಸ ಮಾಡಿದ ಪತಿಗೆ ತಕ್ಕ ಶಿಕ್ಷೆ ನೀಡಲೇಬೇಕೆಂದು ನಿಶ್ಚಯಿಸಿದಳು. ಒಂದು ದಿನ ತನ್ನ ಪತಿ ಕೆಲಸದಿಂದ ಬರುವ ಸಮಯಕ್ಕೆ ಸರಿಯಾಗಿ ಅವಳು ತನ್ನ ಮಕ್ಕಳಿಬ್ಬರನ್ನು ಮನೆಯೊಳಗೆ ಕೂಡಿ ಹಾಕಿ ತಾನೂ ಮನೆಯೊಳಗಿದ್ದುಕೊಂಡು ಮನೆಗೆ ಬೆಂಕಿಯಿಡುತ್ತಾಳೆ. ಮಕ್ಕಳಿಬ್ಬರೂ ಮನೆಯಿಂದ ಬೆಂಕಿಯ ಮಧ್ಯೆಯೇ ದಾರಿ ಹೊರಬರುತ್ತಾರೆ. ಅದನ್ನು ಕಂಡ ತಾಯಿ ಮಕ್ಕಳಿಗೆ "ನಿಮ್ಮ ಮೈಯೆಲ್ಲಾ ಬೊಬ್ಬೆಗಳು ಬರಲಿ" (ಮೈಯಲ್ಲಿ ಬೀಳುವುದು) ಎಂದು ಶಾಪ ಕೊಡುತ್ತಾನೆ. ತಾನು ಜೀವದಲ್ಲಿ ಇರಬಾರದು

ಹಾಗೆಯೇ ತನ್ನ ಪತಿಗೆ ಈ ಮನೆಯೂ ಇರಬಾರದು ಎನ್ನುತ್ತಾ ಸಾಯುತ್ತಾಳೆ. ಇತ್ತ ಗಂಡನು ಬಂದು ನೋಡಲಾಗಿ ಮನೆಯು ಉರಿದು ಹೋಗಿರುತ್ತದೆ. ಹೆದರಿಕೆಯಿಂದ ಮನೆಯಿಲ್ಲದೆ ಬಂದು ಒಂದು ಕಾಸರಕನ ಮರದ ಕೆಳಗೆ ಕುಳಿತುಕೊಂಡು ರಾತ್ರಿ ಕಳೆಯುತ್ತಾನೆ. ನಂತರ ಆತನನ್ನು 'ಭೈರ' 'ಭೈರವ' ಎಂಬ ಹೆಸರು ಪಡೆದನು. ಭೈರವನ ಪೂಜೆಯನ್ನು ತುಳುನಾಡಿನ ಕಾಸರಗೋಡು, ಸುಳ್ಯ ಪುತ್ತೂರು ಮತ್ತು ಬಂಟ್ವಾಳ ಮಂಗಳೂರು ಪ್ರದೇಶಗಳಲ್ಲಿ ಮಾತ್ರ ಕಂಡುಬರುತ್ತದೆ. ತುಳುನಾಡಿನ ಇತರ ಭಾಗಗಳಲ್ಲಿ ಭೈರವನ ಪೂಜೆಯಾಗಲೀ ಬನಗಳಾಗಲೀ ಕಾಣಸಿಗುವುದಿಲ್ಲ. ಈ ಪ್ರದೇಶಗಳಲ್ಲಿನ ಮರಾಠಿ ನಾಯ್ಕರ ಸ್ವಂತ ಆಸ್ತಿಗಳಲ್ಲಿ ಭೈರವನ ಬನಗಳು ಕಂಡುಬರುತ್ತವೆ. ಹಾಗೆಯೇ ಇತರ ಸಮುದಾಯಗಳ ಕೆಲವೊಂದು ಜಾಗಗಳಲ್ಲಿ ಈ ಬನಗಳು ಕಂಡು ಬರುತ್ತವೆ. ಈ ಬನಗಳು ಏನನ್ನು ಸೂಚಿಸುತ್ತವೆಂದರೆ ಆದಿಯಲ್ಲಿ ಆ ಸ್ಥಳಗಳು ಮರಾಠಿ ನಾಯ್ಕರಿಗೆ ಸಂಬಂಧಪಟ್ಟಿದ್ದು ಅವರು ತಮ್ಮ ಒಳಿತಿಗಾಗಿ ಪ್ರತಿಷ್ಠಾಪಿಸಿದಂತಹ ಬನಗಳು. ಪ್ರತಿಯೊಂದು ಬನಗಳು ಅನೇಕ ಜಾತಿಯ ಗಿಡಮರಗಳನ್ನು ಒಳಗೊಂಡು ಸೊಂಪಾಗಿ ಬೆಳೆದಿರುತ್ತವೆ. ಅದರ ಹತ್ತಿರ ನಾವು ಹೋಗಿ ನೋಡಿದಾಗ ಕಾಡಿನ ಪರಿಸರವನ್ನು ನೆನಪಿಸುತ್ತದೆ. ಈ ಬನಗಳಲ್ಲಿ ಮುಖ್ಯವಾಗಿ ಕಾಸರಕನ ಮರವಿರುತ್ತದೆ. ಮತ್ತು ಹಾಲು ಬರುವ ಯಾವುದಾದರೊಂದು ಮರಗಳ ಜತೆಗೆ ಇತರ ಎಲ್ಲಾ ಜಾತಿಯ ಮರಗಳು ಇರುತ್ತವೆ. ಇಲ್ಲಿ ನಾವು ಮಾನವನ ಪ್ರಕೃತಿ ಆರಾಧನೆಯನ್ನು ಕಾಣಬಹುದು. ಅವರು ಆದಿಯಿಂದಲೂ ದೈವದೊಂದಿಗೆ ಪರಿಸರವನ್ನು ಸಮೀಕರಿಸುವುದನ್ನು ನಾವು ಕಾಣುತ್ತೇವೆ. ಎಲ್ಲಿಯೂ ಭೈರವ ಬನದ ಮರಗಳನ್ನು ಯಾವುದೇ ಕಾರಣಕ್ಕೂ ಕಡಿಯಲಾಗುವುದಿಲ್ಲ. ಆಸ್ತಿಯ ಇತರ ಮರಗಿಡಗಳು ಕೊಡಲಿಗೆ ಬಲಿಯಾದರೆ ಬನದ ಮರಗಿಡಗಳು ಸುರಕ್ಷಿತವಾಗಿ ಸಮೃದ್ಧವಾಗಿ ಬೆಳೆದಿರುತ್ತದೆ. ಒಂದು ವೇಳೆ ಹಠತನದಿಂದ ಅಥವಾ ಇನ್ನಾವುದೇ ನೆಪದಲ್ಲಿ ಬನದ ಮರಗಳನ್ನು ಕಡಿದರೆ ಭೈರವನ ಕೋಪಕ್ಕೆ ಗುರಿಯಾಗಲೇಬೇಕು. ಶಿಕ್ಷೆ ಅನುಭವಿಸಲೇಬೇಕು. ಮಾನವನು ಪ್ರಕೃತಿಯನ್ನು ತನಗೆ ಒಗ್ಗಿಸಿಕೊಳ್ಳಲು ಪ್ರಯತ್ನಿಸುತ್ತಲೇ ಇರುವುದನ್ನು ನಾವು ಇಂದಿಗೂ ಕಾಣುತ್ತೇವೆ. ಆದರೆ ಪ್ರಯತ್ನಗಳು ಅನೇಕ ರೀತಿಯ ಸ್ವಾಭಾವಿಕ ಸಂಪತ್ತುಗಳನ್ನು ಕೊರತೆಯಾಗಿಸಿವೆ. ಪ್ರಕೃತಿ, ಪರಿಸರ ತನ್ನದೇ ರೀತಿಯನ್ನು ಹೊಂದಿರುತ್ತದೆ. ಮಾನವನು ಅದನ್ನು ಬದಲಿಸಲು ಹೊರಟರೆ ಅನೇಕ ರೀತಿಯ ಅನಾಹುತಗಳನ್ನು ತಂದುಕೊಂಡಂತೆ. ಪುತ್ತೂರಿನ ಪ್ರದೇಶದಲ್ಲಿನ ಭೈರವ ಬನದ ಮರ ಕಡಿಯಲು ಹೋಗಿ ಸಾವನ್ನಪ್ಪಿದ ಘಟನೆ ಈ ಭೈರವನ ಬನದ ಸತ್ಯಕ್ಕೆ ಸಾಕ್ಷಿಯಾಗಿ ನಿಲ್ಲುತ್ತದೆ.

ಭೈರವನ ದೋಷದ ಲಕ್ಷಣವು ಕಂಡುಬರುವುದು ಪ್ರಥಮವಾಗಿ ಕುಟುಂಬ ಸಾಕಿ ಸಲಹಿದ ಜಾನುವಾರುಗಳ ಮೂಲಕ. ದನಕರುಗಳು ಕಾಲು ಕೆರೆದು ಹಟ್ಟಿಯಲ್ಲಿದ್ದ ಗೊಬ್ಬರವನ್ನೇ ತಿನ್ನಲಾರಂಭಿಸುತ್ತದೆ.

ನಾಲಗೆಯನ್ನು ಹೊರಹಾಕಿ ಜೋರಾಗಿ ಕೂಗುತ್ತದೆ. ಇದರಿಂದಾಗಿ ಆ ಕುಟುಂಬಕ್ಕೆ ಭೈರವನ ದೋಷ, (ಹರಕೆ ತೀರಿಸಲು (ನೆರವೇರಿಸಲು) ಬಾಕಿಯಾಗಿಯೋ ಅಥವಾ ಭೈರವನ ಪೂಜೆ ಸಮರ್ಪಕವಾಗಿ ನಡೆಯದೇ ಇದ್ದಾಗ) ಈ ಮೂಲಕ ತಿಳಿಯುತ್ತದೆ. ನಂತರ ಜೋಯಿಸರ ಮಾತಿನಂತೆ ಕುಟುಂಬದ ಯಜಮಾನ ಭೈರವನ ಪೂಜೆಯನ್ನು ಭಕ್ತಿ, ಶ್ರದ್ಧೆ, ಶುದ್ಧತೆಯಿಂದ ನೆರವೇರಿಸುವುದಾಗಿ ಹೇಳಿ ಕೋಳಿಯನ್ನು ಈಡು ಬಿಡುತ್ತಾನೆ. ಹಾಗೆಯೇ ದನಕರುಗಳಿಗೆ ಯಾವುದೇ ತೊಂದರೆಗಳು ಕಂಡುಬರುವುದಿಲ್ಲ. ನಂತರ ನಿಗದಿತ ದಿನದಂದು ಭೈರವನಿಗೆ ಅಸುರಕ್ರಿಯೆಯಲ್ಲಿ (ಈಡು ಬಿಟ್ಟ ಕೋಳಿಯ ರಕ್ತತರ್ಪಣ) ಪೂಜೆ ನೆರವೇರಿಸಲಾಗುತ್ತದೆ. ಒಮ್ಮೆ ಈಡು ಬಿಟ್ಟ ಕೋಳಿಯನ್ನು ಯಾವುದೇ ಕಾರಣಕ್ಕೆ ಬದಲಾಯಿಸುವ ಹಾಗಿಲ್ಲ. ಒಂದು ವೇಳೆ ಬದಲಾಯಿಸಿದರೆ ಅದರಿಂದ ಪೂಜೆ ಸಮರ್ಪಕವಾಗಿ ನಡೆಯದೆ ಇರಬಹುದು. ಇತರೆ ದೋಷಗಳು ಕಂಡುಬರುತ್ತವೆ ಎಂದು ಹಿರಿಯ ಜನಪದರು ಹೇಳುತ್ತಾರೆ. ತುಳುನಾಡಿನಲ್ಲಿ ಕೋಳಿ ಅಂಕ ಒಂದು ಜನಪ್ರಿಯ ಜಾನಪದ ಕ್ರೀಡೆಯಾಗಿದೆ. ಅನೇಕ ಮರಾಠಿ - ನಾಯ್ಕ ಕುಟುಂಬದವರು ಭೈರವನಿಗಾಗಿ ಮೊದಲೇ ಹುಂಜಗಳನ್ನು ಈಡುಬಿಟ್ಟಿರುತ್ತಾರೆ. ಆ ಹುಂಜಗಳು ತುಂಬಾ ಚುರುಕಾಗಿದ್ದು ಒಳ್ಳೆಯ ಜಯಿಸುವ ಅಂಕದ ಕೋಳಿಯಾಗಿರುತ್ತವೆ. ಕೋಳಿ ಅಂಕಕ್ಕಾಗಿ ಯಾರಾದರೂ ಅದನ್ನು ಹೆಚ್ಚು ಹೆಚ್ಚು ಬೆಲೆಗೆ ಕೇಳುತ್ತಾರೆ. "ಅದರ ಬದಲಿಗೆ ಬೇರೆ ಹುಂಜವನ್ನು ಬಿಡಬೇಕು" ಎಂದು ಹೇಳಿದರೂ ಯಾರೂ ಕೊಡುವುದಿಲ್ಲ. ಕೊಟ್ಟರೂ ಅದು ಅಂಕದಲ್ಲಿ ಸೋಲು ಅನುಭವಿಸುತ್ತದೆ. ಭೈರವ ಪೂಜೆಗಾಗಿ ಈಡು ಬಿಟ್ಟ ಕೋಳಿಯ ರಕ್ತ ಹೊರಹೋಗಬಾರದು, (ನಾಯಿ ಕಚ್ಚುವುದು ಹಾಗೂ ಇತರ ಯಾವುದೇ ರೀತಿಯಲ್ಲಿ). ಆದುದರಿಂದ ಕುಟುಂಬದವರು ಬಹಳ ಜಾಗ್ರತೆಯಿಂದ ಸಾಕುತ್ತಾರೆ.

ಭೈರವ ಪೂಜೆಯಲ್ಲಿ ಮೂರು ಹೆಸರಿನ ಪೂಜೆಗಳು ನಡೆಯುತ್ತವೆ. ವಿವಿಧ ಮೂರು ಕಾಲಘಟ್ಟಗಳಲ್ಲಿ ಈ ಪೂಜೆಗಳು ನಡೆಯುತ್ತವೆ.

೧. ಕಾಶಿಕಾಲ ಭೈರವ

೨. ಮೂಡುಕಾಲ ಭೈರವ ಮತ್ತು

೩. ಅಗ್ನಿ ಭೈರವ

ಕಾಶಿಕಾಲ ಭೈರವ ಪೂಜೆಯು ವಾರ್ಷಿಕ ಒಂದು ಪೂಜೆ ನಡೆಯುವಂಥದ್ದು. ಇದನ್ನು 'ಕಾಲಾವಧಿ ಪೂಜೆ ಎಂದೂ ಕರೆಯಲಾಗುತ್ತದೆ. ಗೋಂದೋಳು ಪೂಜೆ ನಡೆಯುವ ಕೆಲವು ಕುಟುಂಬದ ಸಂಬಂಧಪಟ್ಟ

ಸ್ಥಳದಲ್ಲಿ ಭೈರವನ ಬನ (ಕಲ್ಲು) ಇರುವುದಿಲ್ಲ. ಅಂಥ ಸಮಯದಲ್ಲಿ ತಾತ್ಕಾಲಿಕವಾಗಿ ಕಲ್ಲು ಹಾಕಿ ಪೂಜೆ ಸಲ್ಲಿಸಲಾಗುತ್ತದೆ. ನಂತರ ಕಲ್ಲನ್ನು ತೆಗೆದುಹಾಕಿ ಬರುತ್ತಾರೆ. ಇಂತಹ ಪೂಜಾ ಕ್ರಮಕ್ಕೆ ಮೂಡು ಕಾಲ ಭೈರವ ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ಇರುವ ಭೈರವ ಬನಗಳಲ್ಲಿ ವಾರ್ಷಿಕ ಪೂಜೆ, ಹರಕೆ ಪೂಜೆ ಹಾಗೂ ಗೋಂದೋಳು ಪೂಜಾ ಸಮಯದ ಪೂಜೆಗಳೂ ನಡೆಯುತ್ತವೆ. ಕೆಲವೊಂದು ಕುಟುಂಬಗಳಲ್ಲಿ ಪ್ರತಿ ತಿಂಗಳು ಹುಣ್ಣಿಮೆಯ ದಿನ ಭೈರವ ನಂತರ ಅಪರೂಪವಾಗಿ ಒಂದು ಭೈರವ ಪೂಜೆ ಕಂಡುಬರುತ್ತದೆ. ಮರಾಠಿ - ನಾಯ್ಕ ಕುಟುಂಬಕ್ಕೆ ವಿನಾಃ ಕಾರಣವಿಲ್ಲದೆ ಇತರರು ಕಷ್ಟ ಕೋಟಲೆಗಳನ್ನು ನೀಡಿದಾಗ ವಿರೋಧಿಗೆ ತಕ್ಕುದಾದ ಘೋರ ಶಿಕ್ಷೆಯಾಗಲಿ ಎಂದು ಭೈರವನಲ್ಲಿ ಪ್ರಾರ್ಥಿಸುತ್ತಾನೆ ಕುಟುಂಬದ ಯಜಮಾನ. ವ್ರತಾಚರಣೆ ಪೂಜೆ ಕೈಗೊಳ್ಳುತ್ತಾನೆ. ಅದರಂತೆ ಪ್ರತಿ ಮಂಗಳವಾರ ಅಥವಾ ಶುಕ್ರವಾರ ಭೈರವ ಬನದಲ್ಲಿ ತೆಂಗಿನ ಕಾಯಿ ಒಡೆಯಲಾಗುತ್ತದೆ. ಇದು ಸುಮಾರು ಹದಿನೆಂಟು ವಾರ ಹಾಗೂ ಮತ್ತೂ ಮುಂದುವರಿಯುತ್ತದೆ.

ಗೋಂದೋಳು ಪೂಜಾ ದಿವಸ ಸಂಜೆ ನಾಲ್ಕು ಅಥವಾ ಐದು ಗಂಟೆಯ ಒಳಗಡೆ ಭೈರವನ ಪೂಜೆ ಪ್ರಾರಂಭವಾಗುತ್ತದೆ. ಆ ಸಮಯಕ್ಕೆ ಪೂಜಾ ಕಾರ್ಯಕ್ಕೆ ಆಹಾರ (ನೈವೇದ್ಯ) ತಯಾರಾಗಿರುತ್ತದೆ. ಇಬ್ಬರು ಗಂಡಸರು ಸೇರಿ ಹುರುಳಿ, ಮೀನು ಸಾಂಬಾರು, ಅಕ್ಕಿಯರೊಟ್ಟಿ, ಅನ್ನದ ಅಡುಗೆಯನ್ನು ಮಾಡುತ್ತಾರೆ. ಇಲ್ಲಿ ಅಡುಗೆಗಾಗಲೀ ಪೂಜೆಗಾಗಲೀ ಮಹಿಳೆಯರ ಭಾಗವಹಿಸುವಿಕೆಗೆ ನಿಷೇಧವಿದೆ. ಗೋಂದೋಳು ಪೂಜೆಯ ಮುಖ್ಯ ಪೂಜಾರಿಯು ಭೈರವ ಬನದ ಕಲ್ಲುಗಳನ್ನು ಶುದ್ಧೀಕರಿಸುತ್ತಾರೆ. ನಂತರ ಮೂರು ಸಲ ಜೋಗಸೆ ಬೆಳ್ತಿಗೆ ಅಕ್ಕಿಯನ್ನು ಇಟ್ಟು ತೆಂಗಿನ ಕಾಯಿಯನ್ನೂ ಅದರ ಮೇಲಿಟ್ಟು ದೀಪ ಹಚ್ಚಿ ಪೂಜಿಸಲಾಗುತ್ತದೆ. ಒಟ್ಟಾರೆಯಾಗಿ ಏಳು ಸೇರು ಬೆಳ್ತಿಗೆ ಅಕ್ಕಿಯನ್ನು ಉಪಯೋಗಿಸಲಾಗುತ್ತದೆ. ನಂತರ 'ಅಗೆಲು' ಬಡಿಸಲಾಗುತ್ತದೆ. ನಂತರ ಅಕ್ಕಿಯನ್ನು ತೆಗೆದು ಕಲ್ಲಿನಲ್ಲಿ ಅನ್ನವನ್ನು ಬಡಿಸಲಾಗುತ್ತದೆ. ಅನ್ನದ ಮೇಲೆ ಈಡು ಬಿಟ್ಟ ಕೋಳಿಗಳಿಂದ ರಕ್ತತರ್ಪಣ ನೀಡಲಾಗುತ್ತದೆ. ನಂತರ ಪ್ರಾರ್ಥನೆ ಮಾಡುತ್ತಾರೆ. ಪೂಜೆಗಾಗಿ ವಿಶೇಷ ತೀರ್ಥಪ್ರಸಾದವಾಗಿ ಶೇಂದಿ ಮತ್ತು ಬೇಯಿಸಿದ ಮೀನು ಮತ್ತು ಹುರುಳಿ (ಉಪ್ಪು ಬಳಸದೆ)ಯನ್ನು ಎಲ್ಲ ಭಕ್ತರಿಗೂ ಹಂಚಲಾಗುತ್ತದೆ. ಪೂಜೆಗಾಗಿ ತಯಾರಿಸಿದ ಅಡುಗೆಯನ್ನು ಅಲ್ಲಿಯೇ ಹತ್ತಿರದಲ್ಲಿ ಅಥವಾ ಮನೆಯ ಅಂಗಳದಲ್ಲಿ ಕುಳಿತು ಊಟ ಮಾಡಲಾಗುತ್ತದೆ. ಭೈರವನ ಪೂಜೆಗಾಗಿ ತಯಾರಿಸಿದ ಯಾವುದೇ ಅಡುಗೆಯನ್ನು ಪುನಃ ಮನೆಯ ಒಳಗೆ ಕೊಂಡೊಯ್ಯುವಂತಿಲ್ಲ. ಭೈರವನಿಗೆ ಬಲಿಕೊಟ್ಟ ಕೋಳಿಗಳನ್ನು ಮರುದಿನದ ಮಧ್ಯಾಹ್ನದ ಭೋಜನಕ್ಕೆ ಉಪಯೋಗಿಸುತ್ತಾರೆ.

ಒಟ್ಟಾರೆಯಾಗಿ ತುಳುನಾಡಿನ ದಕ್ಷಿಣ ಭಾಗದ ಮರಾಠಿ - ನಾಯ್ಕರಿಗೆ ಭೈರವನು ಓರ್ವ ಸರ್ವರಕ್ಷಕನಾಗಿ ಕಾಣುತ್ತಾನೆ. 'ಸದಾ ಭೈರವನು ನಮ್ಮ ಕಷ್ಟಗಳನ್ನು ಪರಿಹರಿಸಿ ಕಾಪಾಡುತ್ತಿರಲಿ' ಎಂದು ಆಶಯ ವ್ಯಕ್ತಪಡಿಸುತ್ತಾರೆ.

೩.೫. ಮಹಾಮಾಯೆಯ ಪೂಜೆ

ಗೋಂದೋಳು ಪೂಜೆಯ ಎರಡನೇ ಮುಖ್ಯ ಪೂಜೆಯು 'ಮಹಾಮಾಯಿಯ ಪೂಜೆ'. ಇದನ್ನು 'ಅಮ್ಮನವರ ಪೂಜೆ', 'ಮಹಮ್ಮಾಯಿಯ ಪೂಜೆ', 'ಶ್ರೀದೇವಿಯ ಪೂಜೆ', 'ಅಮ್ಮೊರು ಪೂಜೆ' ಹೀಗೆ ಅನೇಕ ಹೆಸರಿಡಿದು ಕರೆಯುತ್ತಾರೆ. ತುಳುನಾಡಿನ ಪ್ರದೇಶಗಳನ್ನು ಮೂರು ವಿಭಾಗಗಳಾಗಿ ವಿಂಗಡಿಸಿದಾಗ ಪೂಜೆಯಲ್ಲಿನ ವ್ಯತ್ಯಾಸಗಳನ್ನು ನಾವು ನೋಡಬಹುದು. ಮಹಾಮಾಯಿಯ ಪೂಜೆಯನ್ನು ಕೇಂದ್ರವಾಗಿಟ್ಟುಕೊಂಡು ಗೋಂದೋಳು ಪೂಜೆ ಮೂರು ಹೊತ್ತು ನಡೆಯುವ ಪೂಜೆಯಾಗಿದೆ. ವೈದಿಕರಲ್ಲಿ ತ್ರಿಕಾಲ ಪೂಜೆ ಮೂರು ಹೊತ್ತು ನಡೆದಂತೆಯೇ ಈ ಗೋಂದೋಳು ಪೂಜೆಯು ಸರಿಯಾಗಿ ಮಧ್ಯಾಹ್ನ ೧೨ಗಂಟೆಗೆ ಪ್ರಾರಂಭವಾದರೆ ಮರುದಿನ ಮಧ್ಯಾಹ್ನ ೧೨ಗಂಟೆಗೆ ಸಮಾಪನಗೊಳ್ಳುತ್ತದೆ.

ಮುಖ್ಯ ಪೂಜಾರಿ (ದರ್ಶನ ಪಾತ್ರಿ) ಯವರನ್ನು ಕುಟುಂಬದ ಯಜಮಾನ ಕಂಡು ಒಂದು ದಿನವನ್ನು ನಿಗದಿಪಡಿಸುತ್ತಾರೆ. ಪೂಜೆಯು ಮುಖ್ಯ ವಾರ ಶುಕ್ರವಾರ ಮತ್ತು ಮಂಗಳವಾರ ದಿನಗಳಂದು ನಡೆಯುತ್ತದೆ. ಅಪರೂಪವಾಗಿ ಆದಿತ್ಯವಾರವೂ ಪೂಜೆ ನಡೆಯುವುದಿದೆ. ನಿಗದಿತ ದಿನಕ್ಕೆ ಸರಿಯಾಗಿ ಗೊನೆಕಡಿಯಲಾಗುತ್ತದೆ.

ನಿಗದಿತ ಶುಭದಿನದಂದು ಮನೆಯಲ್ಲಿ ಬೆಳಗ್ಗಿನ ಹೊತ್ತು ನೆಂಟರಿಷ್ಟರು ಬಂಧುಗಳು ನೆರೆದಿರುತ್ತಾರೆ. ಪೂಜಾರಿಗಳು, ದರ್ಶನ ಪಾತ್ರಿ ಮುಂತಾದವರು ಮಧ್ನಾಹ್ನ ೧೨ಗಂಟೆಯ ಒಳಗಡೆ ಮನೆಯಲ್ಲಿ ಹಾಜರಿರುತ್ತಾರೆ. ಕುಟುಂಬದ ಯಜಮಾನ ಅಥವಾ ಹಿರಿಯರೊಬ್ಬರು, 'ಗುರುಮಾರಿಕೆ' (ಗುರುಪದೇಶ) ಇದ್ದ ಗಂಡಸರು ಹೆಂಗಸರು ಎಲ್ಲರೂ ಬರಬೇಕೆಂದು ಕೇಳಿಕೊಳ್ಳುತ್ತಾರೆ. ಸಂಪ್ರದಾಯದಂತೆ ಒಂದು ಬಿಂದಿಗೆ ನೀರು ಕೊಡಲಾಗುತ್ತದೆ. ಎಲ್ಲಾ ಪೂಜಾರಿಗಳು ಕೈ ಕಾಲು ತೊಳೆದು ಪೂಜೆ ನಡೆಯುವ ಅಂಗಣಕ್ಕೆ ಬಂದು ಆಸೀನರಾಗುತ್ತಾರೆ. ಪ್ರತಿಯೊಂದು ಪೂಜೆಯಲ್ಲಿಯೂ ಬೆಸ ಸಂಖ್ಯೆಯ ಪೂಜಾರಿಗಳಿರುತ್ತಾರೆ. ಸಾಮಾನ್ಯವಾಗಿ ಏಳು, ಒಂಬತ್ತು, ಹನ್ನೊಂದು, ಹದಿಮೂರು ಜನ ಪೂಜಾರಿಗಳು ಪೂಜೆಯನ್ನು ನಡೆಸಿಕೊಡುತ್ತಾರೆ. ಮನೆಯ

ಪ್ರಥಮ ಮಹಿಳೆ ಪೂಜಾ ಜ್ಯೋತಿಯನ್ನು ಬೆಳಗಿಸುತ್ತಾರೆ. ಕುಟುಂಬದ ಇತರರು ಕೂಡಿಕೊಂಡಿರುತ್ತಾರೆ. ಮುಖ್ಯ ಪೂಜಾರಿಯು ಆರಂಭಿಕವಾಗಿ ಪ್ರಾರ್ಥನೆ (ನುಡಿಗಟ್ಟು) ಮಾಡುತ್ತಾರೆ. ಈ ಮೂಲಕ ಪೂಜಾಕಾರ್ಯ ವಿಧಿವತ್ತಾಗಿ ಆರಂಭಗೊಳ್ಳುತ್ತದೆ. ಅಂತೆಯೇ ಕುಟುಂಬದ ಹಿರಿಯರು ನಮ್ಮ ಈ ಧಾರ್ಮಿಕ ಕಾರ್ಯದಲ್ಲಿ ಯಾವುದೇ ವಿಘ್ನಗಳು ಬಾರದಂತೆ ತಾಯಿಯ ಸೇವೆ ಸುಗಮವಾಗಿ ನಡೆಯಬೇಕೆಂದು ಪ್ರಾರ್ಥಿಸುತ್ತಾರೆ. ಎಲ್ಲಾ ಪೂಜಾರಿಗಳು ಪೂಜಾ ದೀಪಕ್ಕೆ ಮೂರು ಮೂರು ಸಲ ತೆಂಗಿನೆಣ್ಣೆಯನ್ನು ಬಿಟ್ಟು ಒಬ್ಬರನೊಬ್ಬರ ಕಾಲು ಹಿಡಿದು ಗೌರವ ಸೂಚಿಸುತ್ತಾರೆ. ತೆಂಗಿನೆಣ್ಣೆಯನ್ನು ತೆಗೆದು ಎರಡು ತೋರು ಬೆರಳನ್ನು ಜೋಡಿಸಿ ನೆಲಕ್ಕೆ ಮುಟ್ಟಿಸುತ್ತಾರೆ. ಗತಿಸಿದ ಹಿರಿಯರಿಗೆ ಗೌರವ ನೀಡುವುದನ್ನು ಇದು ತೋರಿಸುತ್ತದೆ. ಈ ಕ್ರಮವನ್ನು ಮರಾಠಿ ಭಾಷೆಯಲ್ಲಿ 'ಪಾಯದ್ ' ಎಂಬುದಾಗಿ ಕರೆಯುತ್ತಾರೆ. ನಂತರ ಅಡಿಕೆ ವೀಳ್ಯದೆಲೆಯನ್ನು ಎಲ್ಲರೂ ಸ್ವೀಕರಿಸಿ ಅಭ್ಯಂಗ ಸ್ನಾನಕ್ಕೆ ಹೊರಡುತ್ತಾರೆ. ಪ್ರತಿಯೊಬ್ಬ ಪೂಜಾರಿಯೂ ಒಂದೆರಡು ದಿವಸಗಳ ಮೊದಲೇ ವ್ರತಾಚರಣೆಯನ್ನು ಪಾಲಿಸಲೇಬೇಕು. ಖಡ್ಡಾಯವಾಗಿ ಸ್ತ್ರೀ - ಪುರುಷ ಪೂಜಾರಿಗಳು ಅಭ್ಯಂಗ ಸ್ನಾನ ಮಾಡಲೇಬೇಕು. ತುಳಸಿ ಕಟ್ಟೆಯ ಇಡಲಾಗುವ 'ಪುಣ್ಯಾರ್ಚನೆ ತೀರ್ಥ' ವನ್ನು ಸ್ವೀಕರಿಸಿ ಶುದ್ಧಿಗಳಾಗುತ್ತಾರೆ. ನಂತರ ಮುಖ್ಯ ಪೂಜಾರಿಯವರು ಈಡುಬಿಟ್ಟ ಕೋಳಿಗಳಿಗೆ ಹಾಗೂ ಹಂದಿಗಳಿಗೆ ಆಹಾರ ನೀಡಲಾಗುತ್ತದೆ. ಎರಡು ಹಂದಿಗಳು ಮತ್ತು ನಾಲ್ಕು ಕೋಳಿಗಳನ್ನು ಈಡು ಬಿಟ್ಟಿರುತ್ತಾರೆ. ಪ್ರಥಮ ಅಭ್ಯಂಗ ಸ್ನಾನಕ್ಕೆ ಮೊದಲಿಗ ಆರಂಭದಲ್ಲಿ ಭೈರವ ಪೂಜೆಗಾಗಿ (ಅಸುರಕ್ರಿಯೆ) ಬೇಕಾಗುವ ಅಡುಗೆಯನ್ನು ಸಂಜೆ ನಾಲ್ಕು ಗಂಟೆಗೆ ಅಥವಾ ಪೂಜಾ ಸಮಯಕ್ಕೆ ಸರಿಯಾಗಿ ಮಾಡಿಕೊಡಬೇಕು ಎಂದು ಅಡುಗೆಯವರಿಗೆ (ಗಂಡಸರು) ವೀಳ್ಯ ನೀಡಲಾಗುತ್ತದೆ. ಅಂತೆಯೇ ದೇವಕ್ರಿಯೆಗಾಗಿನ ಅಡುಗೆ ಸರಿಯಾದ ಸಮಯಕ್ಕೆ ತಯಾರಿರಬೇಕೆಂದು ವೀಳ್ಯ (ಮಹಿಳೆಯರು) ನೀಡಲಾಗುತ್ತದೆ. ಈಡು ಬಿಟ್ಟ ಹಂದಿ ಅಥವಾ ಕೋಳಿಗಳಿಗೆ ಯಾವುದೇ ರೀತಿಯಲ್ಲಿ ಅಶುದ್ಧವಾದರೆ ಅವುಗಳು ಆಹಾರ ಸೇವಿಸುವುದಿಲ್ಲ ಎಂದು ಹಿರಿಯರು ಅಭಿಪ್ರಾಯ ಪಡುತ್ತಾರೆ. ನಂತರ ಮಧ್ಯಾಹ್ನದ ಊಟ ಆಗುತ್ತದೆ. ಮಧ್ಯಾಹ್ನದ ಭೋಜನದಲ್ಲಿ ಯಾವುದೇ ರೀತಿಯಲ್ಲಿ ಮಾಂಸಾಹಾರವನ್ನು ಬಳಸುವುದಿಲ್ಲ.

ಮಧ್ಯಾಹ್ನದ ವಿಶ್ರಾಂತಿ ಸಮಯದಲ್ಲಿ 'ಗದ್ದಿಗೆ' ಗೆ ಬೇಕಾಗುವ ಅಲಂಕಾರಿಕ ಕಾರ್ಯಗಳನ್ನು ಮಾಡುತ್ತಾರೆ. ಮುಖ್ಯವಾಗಿ ತುಳಸಿ, ಕಿಸ್ಕರ, ಹಿಂಗಾರ, ಸೇವಂತಿಗೆ ಹಾಗೂ ಇತರ ಹೂವಿನ ಮಾಲೆಗಳಿಂದ ಶ್ರೀದೇವಿಯ ಗದ್ದಿಗೆ ಅಲಂಕರಿಸಲ್ಪಡುತ್ತದೆ. ದೀವಟಿಗೆ ತಯಾರಿ ನಡೆಯುತ್ತದೆ. ಗದ್ದಿಗೆಯ ಮುಖ್ಯ ಕಲಶಪಾತ್ರೆಗೆ ಕಿಸ್ಕರ ಹೂಗಳಿಂದ ಅಲಂಕರಿಸುತ್ತಾರೆ. ಮರಾಠಿ ಭಾಷೆಯಲ್ಲಿ 'ಗೇಟ್ ' ಎಂದು ಕರೆಯುತ್ತಾರೆ.

ಪ್ರತಿಯೊಂದು ಪೂಜೆಯಲ್ಲಿಯೂ ಕಲಶಪಾತ್ರೆ ಮಣ್ಣಿನದ್ದೇ ಆಗಿರಬೇಕು. ಮಣ್ಣು, ಮಣ್ಣಿನ ಪಾತ್ರೆಗಳು ಜನಪದರ ದೃಷ್ಟಿಯಲ್ಲಿ ಅತೀ ಪ್ರಾಮುಖ್ಯತೆ ಪಡೆದಿರುವುದನ್ನು ನಾವು ಕಾಣುತ್ತೇವೆ. ಜನಪದರು ಪ್ರಕೃತಿಯ ಸ್ವಾಭಾವಿಕ ಕೊಡುಗೆಗಳನ್ನು ಯಾವತ್ತೂ ತಿರಸ್ಕರಿಸುವುದಿಲ್ಲ. ಅವುಗಳನ್ನು ಭಯಭಕ್ತಿಯಿಂದ ಪೂಜಿಸುತ್ತಾರೆ. ಕಲಶ ಪಾತ್ರೆಯ ಮೇಲೆ ಅಲಂಕರಿಸಲ್ಪಡುವ 'ಪ್ರಬಲ್ಯ'ವನ್ನು ತಯಾರುಮಾಡುತ್ತಾರೆ. ಅದಕ್ಕೆ ತೆಂಗಿನ ಸೋಗೆಯ ಮೇಲಿನ ನಾರನ್ನು ತೆಗೆದು ಅರ್ಧವೃತ್ತಾಕಾರ ಮಾಡಿ ಹೂಗಳಿಂದ ಅದನ್ನು ಅಲಂಕರಿಸಲಾಗುತ್ತದೆ. ಪೂಜೆಗೆ ಬಳಸುವ ಎಲ್ಲಾ ಹೆಚ್ಚಿನ ಪರಿಕರಗಳು ಪ್ರಕೃತಿ ಪರಿಸರದಲ್ಲಿ ದೊರಕುವ ಸಾಮಗ್ರಿಗಳೇ ಆಗಿರುವುದು ವಿಶೇಷವಾಗಿ ಕಂಡುಬರುತ್ತದೆ.

ಸಂಜೆ ಸೂರ್ಯಾಸ್ತದ ಸಮಯದಲ್ಲಿ ಭೈರವ ಬನಕ್ಕೆ ಹೋಗಿ ಈ ಮೊದಲೇ ವಿವರಿಸಿರುವಂತೆ ಪೂಜೆ ನಡೆಯುತ್ತದೆ. ನಂತರ ಮನೆಗೆ ಬಂದು ಪೂಜಾರಿಗಳೆಲ್ಲರೂ ಸ್ನಾನ ಮಾಡುತ್ತಾರೆ. ಮುಖ್ಯ ಪೂಜೆಗೆ ಅಣಿಯಾಗುತ್ತಾರೆ. ಪೂಜಾ ಅಂಗಣದಲ್ಲಿ ಪೂಜಾರಿ (ದೇವರ ಮಾನಿ)ಗಳೆಲ್ಲರೂ ಕುಳಿತು ಮಹಾಮಾಯಿಯ 'ಗದ್ದುಗೆ ಏರಿಸುವ' ಸಲುವಾಗಿ ಮಂಡಲ ಬರೆಯುತ್ತಾರೆ. ಈ ಮಂಡಲವು ಭೂಮಂಡಲವನ್ನು ಪ್ರತಿನಿಧಿಸುತ್ತದೆ ಎಂದು ದರ್ಶನಪಾತ್ರಿಗಳು ವಿವರಿಸುತ್ತಾರೆ. ಅದರಲ್ಲಿ ಸೂರ್ಯ - ಚಂದ್ರ, ನಾಗ - ನಕ್ಷತ್ರಗಳನ್ನೂ ಅದರ ಸುತ್ತಲೂ ಪಶು (ಕಾಮಧೇನು) ಢಮರುಗ (ಈಶ್ವರ)ನನ್ನೂ ಬಿಳಿಯಕ್ಕಿಯಲ್ಲಿ ಬರೆಯಲಾಗುತ್ತದೆ. ಮಂಡಲದ ಮಧ್ಯದಲ್ಲಿ ಕೊಡಿ ಬಾಳೆ ಎಲೆಯಲ್ಲಿ ಬೆಳ್ತಿಗೆ ಅಕ್ಕಿಯ ಮೇಲೆ ಹಿತ್ತಾಳೆ ಬಿಂದಿಗೆ (ಚೊಂಬು) ಇಟ್ಟು ಅದರ ಬಾಯಿಯಲ್ಲಿ ಮಾವಿನ ಎಲೆಗಳೊಂದಿಗೆ ಸಿಯಾಳ ಇಡುತ್ತಾರೆ. ಇದನ್ನು 'ಗದ್ದುಗೆ ಏರಿಸುವುದು' ಎಂದು ಕರೆಯುತ್ತಾರೆ. ಅಕ್ಕ ಪಕ್ಕದಲ್ಲಿ ಎರಡು ಕಡೆ ನಂದಾದೀಪ ಬೆಳಗಿಸುತ್ತಾರೆ. ಮಂಡಲದ ಸನಿಹದಲ್ಲಿ ಮಹಾ ಗಣಪತಿಯ ಸ್ವಸ್ತಿಕ ಮತ್ತು ಭೈರವನ ಕಲಶವನ್ನು ಇಡುತ್ತಾರೆ. ಮಂಡಲದ ಪ್ರತಿ ವೃತ್ತಕ್ಕೂ ತೆಂಗಿನಕಾಯಿ ಹಾಗೂ ಹಣ್ಣುಗಳನ್ನು ಇಡುತ್ತಾರೆ. ಒಂದು ಬಾಣಲೆಯಲ್ಲಿ ಎಣ್ಣೆ ಮತ್ತು 'ಭಂಡಾರ ಮಡಕೆ'ಯಲ್ಲಿ ಶೇಂದಿ ಇರುತ್ತದೆ. ಭಂಡಾರ ಮಡಕೆಯ ಶೇಂದಿಯು ಸಂಪ್ರದಾಯದಂತೆ, ಪೂಜೆಯ ಹಿನ್ನಲೆಯಂತೆ ಆದಿಯಿಂದ ಅಂತ್ಯದವರೆಗೂ ಇರುತ್ತದೆ. ಶ್ರೀದೇವಿಯ ಕಲಶ ಪಾತ್ರೆ (ಗೇಟ್)ಯೊಳಗೆ ಪಂಚಾಮೃತ (ಹಾಲು, ಸಕ್ಕರೆ, ಜೇನುತುಪ್ಪ ಹಣ್ಣು ಸಿಯಾಳ) ಹಾಕಿ ಅದರ ಸುತ್ತಲೂ ಕಿಸ್ಕರ ಹೂಗಳನ್ನು ಇಡಲಾಗುತ್ತದೆ. ಪೂಜೆಯ ಕೊನೆಗೆ ಉಳಿದ ಎಣ್ಣೆಯನ್ನು ಭಕ್ತರಿಗೆ ಪ್ರಸಾದವಾಗಿ ಹಂಚುತ್ತಾರೆ. ದೀವಟಿಗೆ ಉರಿಸಿದ ಎಣ್ಣೆಯಾದುದರಿಂದ ಅದು ನೋವು ನಿವಾರಕವಾಗಿರುತ್ತದೆ. ಬರೆದಂತಹ ಮಂಡಲ ತುಂಬಾ ಆಕರ್ಷಕವಾಗಿ ಕಾಣುತ್ತದೆ. ಅದರ ಮಧ್ಯದಲ್ಲಿ ಕಲಶಪಾತ್ರೆ ಮತ್ತು ದೇವಿಯ 'ಸತ್ತಿಗೆ' (ಬೆಳ್ಳಿಯಾ ಬಂಗಾರ)ಯನ್ನು ಇರಿಸಲಾಗುತ್ತದೆ. ಎಲ್ಲಾ

ತರಪದ ಹೂಗಳಿಂದ ಮತ್ತು ತುಳಸಿ ದಳಗಳಿಂದ ಅಲಂಕರಿಸುತ್ತಾರೆ. ನಂತರ ಪೂಜೆಯು ಪ್ರಾರಂಭವಾಗುತ್ತದೆ. ಮತ್ತೊಂದು ವಿಶೇಷ ಎಂದರೆ ಶ್ರೀದೇವಿಗೆ ಹಿಂದುಗಡೆಯಿಂದ ಪೂಜೆ ಸಲ್ಲಿಸಲಾಗುತ್ತದೆ. ಶ್ರೀದೇವಿಯ ಮುಖ್ಯ 'ಸತ್ತಿಗೆ'ಗೆ ಮನೆಯವರು ಬಂಗಾರದ ಸರ ಆಭರಣಗಳನ್ನು ಹಾಕುತ್ತಾರೆ. ಅನೇಕ ರೀತಿಯ ನೈವೇಧ್ಯ ಅರ್ಪಿಸಲಾಗುತ್ತದೆ. ನಿರಂತರ ಪೂಜೆಯಲ್ಲಿ ಆದಿಯಿಂದ ಅಂತ್ಯದವರೆಗೆ ೪೮ ಆರತಿಗಳನ್ನು ಮಾಡಲಾಗುತ್ತದೆ.

ರಾತ್ರಿ ಸುಮಾರು ೮ ಗಂಟೆಗೆ 'ಈಸ್ ದೇವ್' ಪೂಜೆ ನಡೆಯುತ್ತದೆ. ಪೂಜಾರಿಯು ಮನೆಯ ಮುಖ್ಯ ಒಲೆಯಲ್ಲಿಗೆ ಹೋಗಿ ಪಂಚಕಜ್ಜಾಯವನ್ನು ಒಲೆಗೆ ಹಾಕಿ ಒಲೆಯ ಬೂದಿಯನ್ನು (ಮಸಣ ಭಸ್ಮ) ಹಿಂದಿನ ಕಾಲದಲ್ಲಿ ಸ್ಮಶಾನಕ್ಕೆ ಹೋಗಿ ಅಲ್ಲಿಂದ ಭಸ್ಮವನ್ನು ತಂದು ಪೂಜೆ ಮಾಡುತ್ತಿದ್ದರಂತೆ. ಕಾಲಕ್ರಮೇಣ ಮಸಣ ಭಸ್ಮ ಸಿಗಲು ಕಷ್ಟ ಸಾಧ್ಯವಾದುದರಿಂದ ಮನೆಯ ಒಲೆಯಲ್ಲಿನ ಬೂದಿಯನ್ನೆ ಬಳಸಲಾರಂಬಿಸಿದರು. ನಂತರ ಗೌರವ ಅರ್ಪಿಸುವುದು (ಪೂಜಾರಿಗಳು) ತದನಂತರ ಬಲಿಕೊಡುವ ಕಾರ್ಯಕ್ರಮ ಮುಂದುವರಿಯುತ್ತದೆ. ಶ್ರೀದೇವಿಯ ಗದ್ದಿಗೆಗೆ ಅಡ್ಡಲಾಗಿ ಒಂದು ಪರದೆ ಹಿಡಿಯಲಾಗುತ್ತದೆ. ಸ್ವಲ್ಪ ದೂರದಲ್ಲಿ ನಾಲ್ಕು ಕೋಳಿಗಳನ್ನು ಕೊಯ್ದು ರಕ್ತತರ್ಪಣ ನೀಡಲಾಗುತ್ತದೆ. ಜಾಗಟೆ, ಓಲಗ, ಶೃತಿಗಳ ಅಬ್ಬರದ ಮಧ್ಯೆ ಭಕ್ತಾದಿಗಳು ಗೋವಿಂದ.....ಗೋವಿಂದ.....ಎಂದು ಗಟ್ಟಿಯಾಗಿ ಉದ್ಘೋಷ ಮಾಡುತ್ತಾರೆ. ಇವೆಲ್ಲದರ ಮಧ್ಯೆ ಕೋಳಿಗಳನ್ನು ಮತ್ತು ಹಂದಿಗಳನ್ನು ಬಲಿಕೊಡಲಾಗುತ್ತದೆ. ಒಂದು ಹೆಂಟೆ ಕೋಳಿಯ ಬಲಗಾಲಿನ ಒಂದು ತುಂಡನ್ನು ಒಲೆಯಲ್ಲಿ ಹಾಕಿ ಬೇಯಿಸಿ ತದನಂತರ ಅಸುರ - ಗಣಗಳಿಗೆ ನೈವೇಧ್ಯ ಮಾಡಲಾಗುತ್ತದೆ. ಹಂದಿಯ ತೊಡೆಯ ಒಂದು ತುಂಡು ಭಾಗವನ್ನು ತೆಗೆದು ಒಲೆಯಲ್ಲಿ ಬೇಯಿಸಿ ನೈವೇಧ್ಯ ಮಾಡುತ್ತಾರೆ. ಹಂದಿಗಳ ಒಂದೊಂದು ಬಲಕೈಯ ತುಂಡುಗಳನ್ನು ಅವುಗಳ ಬಾಯಿಯಲ್ಲಿ ಇಟ್ಟು ಗದ್ದಿಗೆಯ ಹತ್ತಿಯ ಎರಡು ಬದಿಯಲ್ಲಿ ಇಡಲಾಗುತ್ತದೆ. ಮತ್ತು ಅವುಗಳ ತಲೆಯ ಮೇಲೆ ಎರಡು ದೀಪಗಳನ್ನು ಉರಿಸುತ್ತಾರೆ. ಎಲ್ಲಾ ಭಾಗಗಳಿಂದ ಪುಷ್ಪಾಲಂಕಾರ ಮಾಡುತ್ತಾರೆ. ಪೂಜೆ ಮುಂದುವರಿಯುತ್ತದೆ. ನಂತರ ಶಕ್ತಿ ಕುಳಿತುಕೊಳ್ಳುವುದು ಎಂಬ ಇನ್ನೊಂದು ರೀತಿಯ ಪೂಜೆ ಮುಂದುವರಿಯುತ್ತದೆ. ಶ್ರೀದೇವಿ ಒಬ್ಬಂಟಿಗಳಾಗುತ್ತಾಳೆ. ಹೆಣ್ಣು ಒಬ್ಬಂಟಿಗಳಾಗಿ ಇರಬಾರದು ಎಂಬ ಜನಪದ ಕಲ್ಪನೆ ಮಾರ್ಮಿಕವಾದುದು. ಸ್ತ್ರೀಯೊಬ್ಬಳನ್ನು ಬಿಡದೆ ಅವಳ ಸಂಗಡಕ್ಕೆ ಮತ್ತೊಬ್ಬ ಸ್ತ್ರೀಯನ್ನು ಕಳುಹಿಸುವುದು ಎಂದು ಹಿರಿಯರು (ಜನಪದರು) ಹೇಳುತ್ತಾರೆ. ಶ್ರೀದೇವಿಗೆ ಶಕ್ತಿಯಾಗಿ ಇನ್ನೊಬ್ಬ ಸ್ತ್ರೀಯನ್ನು ಈ ಪೂಜೆಯ ಮೂಲಕ ಕುಳ್ಳಿರಿಸಿ ಶಕ್ತಿ ಹೆಚ್ಚಾಗುವಂತೆ ಮಾಡುವುದೇ ಈ ಪೂಜೆಯ ವೈಶಿಷ್ಟ್ಯ. ಅದಾದ ನಂತರ ಪೂಜೆ ನಡೆಯುವ ಕುಟುಂಬದಲ್ಲಿ ಗತಿಸಿ ಹೋದ ಹಿರಿಯರಿಗೆ ಮತ್ತು ಪೂಜಾರಿಗಳ ಹಿರಿಯರಿಗೆ ವಂದಿಸುವುದು. ಎಂಬ ಕಾರ್ಯ ನಡೆಯುತ್ತದೆ.

ಹಿರಿಯರನ್ನು ನೆನಪಿಸುತ್ತಾ ಅವರಿಗೆ ವಂದನೆ ಸಲ್ಲಿಸುತ್ತಾರೆ. ಶೇಂದಿಯನ್ನು ಎಲ್ಲರೂ ಮೂರು ಮೂರು ಸಲ ಭೂಮಿಗೆ ಬಿಟ್ಟು ಕೃತಜ್ಞತೆ ಸೂಚಿಸುತ್ತಾರೆ. ಅದೇ ವೇಳೆಗೆ ಭಜನಾ ಕಾರ್ಯಕ್ರಮ ಆರಂಭವಾಗುತ್ತದೆ. ಅಂಗಳದಲ್ಲಿ ನೆರೆದ ಆಸಕ್ತ ಭಕ್ತಾದಿಗಳೆಲ್ಲರೂ ಸೇರಿ ಭಜನೆ ಮಾಡುತ್ತಾರೆ. ಪ್ರತಿಯೊಂದು ಗೋಂದೋಳು ಪೂಜಾ ಕಾರ್ಯದಲ್ಲಿ ಭಜನಾ ಕಾರ್ಯಕ್ರಮ ಇರುತ್ತದೆ. ಶ್ರೀದೇವಿಯ ಮುಖ್ಯ ಭಜನೆಗಳೊಂದಿಗೆ ಇತರ ಎಲ್ಲಾ ಭಕ್ತಿ ಗೀತೆಗಳನ್ನು ಭಜಿಸುತ್ತಾರೆ. ಇವೆಲ್ಲದರ ಮಧ್ಯೆ ಪೂಜಾಕಾರ್ಯ ಮುಂದುವರಿಯುತ್ತಲೇ ಇರುತ್ತದೆ. ಭಜನೆಯು ಸುಮಾರು ಒಂದು ಗಂಟೆ ಕಾಲ ಮುಂದುವರಿಯುತ್ತದೆ. ನಂತರ ಹಿರಿಯ ಬೊಟ್ಟು ಎಂಬ ಒಂದು ಕಾರ್ಯಕ್ರಮ ಕಂಡುಬರುತ್ತದೆ. ಅದೂ ಕೂಡ ಗತಿಸಿದ ಹಿರಿಯರ ಸಲುವಾಗಿ ನಡೆಯುವಂತದ್ದು. ಇತ್ತ ಕಡೆ ಪೂಜೆಯು ಮುಖ್ಯ ಭೋಜನಕೂಟಕ್ಕೆ ಆಹಾರದ ತಯಾರಿಕೆ ನಡೆಯುತ್ತಿರುತ್ತದೆ. ಈ ಸಂದರ್ಭ ನೋಡಿದಾಗ ಒಂದು ಮನೆಯಲ್ಲಿ ಒಂದೇ ಸಮಯದಲ್ಲಿ ಅನೇಕ ರೀತಿಯ ಕಾರ್ಯಗಳನ್ನು ನಾವು ಗಮನಿಸಬಹುದು. ಮನೆಯ ಪೂಜಾ ಅಂಗಣದಲ್ಲಿ ಮುಖ್ಯ ಪೂಜೆ ನಡೆದರೆ ಹೊರಗಡೆ ಅಂಗಳದಲ್ಲಿ ಭಜನಾ ಕಾರ್ಯ ನಡೆಯುತ್ತಿರುತ್ತದೆ. ಅವುಗಳ ಮಧ್ಯೆ ಭಕ್ತಾಧಿಗಳು ಅಧಿಕ ಸಂಖ್ಯೆಯಲ್ಲಿ ಹಾಜರಿರುತ್ತಾರೆ. ಮತ್ತೊಂದು ಭಾಗದಲ್ಲಿ ಬಲಿಕೊಟ್ಟ ಕೋಳಿ ಹಂದಿಗಳನ್ನು ಪದಾರ್ಥ ಮಾಡುವ ಸಲುವಾಗಿ ಕೆಲಸ ನಡೆಯುತ್ತದೆ.

೩.೬. ಗೋಂದೋಳು ಕುಣಿತ ಮತ್ತು ದರ್ಶನ

ಭಜನಾ ಕಾರ್ಯಕ್ರಮ ಕೊನೆಗೊಂಡ ನಂತರ ಗೋಂದೋಳು ಕುಣಿತ ಆರಂಭವಾಗುತ್ತದೆ. ಐದು ಜನ ಯುವಕರು ಕುಣಿತಕ್ಕೆ ಸಿದ್ಧರಾಗಿರುತ್ತಾರೆ. ಮುಖ್ಯ ಪೂಜಾರಿಯು ಐದು ದೀವಟಿಗೆಗಳನ್ನು ಗದ್ದಿಗೆ ದೀಪದಿಂದ ಹೊತ್ತಿಸಿ ಕೊಡುತ್ತಾನೆ. ಮಂಡಲಾಕಾರವಾಗಿ ಕುಣಿತ ಪ್ರಾರಂಭವಾಗುತ್ತದೆ. ಮಧ್ಯದಲ್ಲಿ ಹಾಡುಗಾರನು ಹೇಳಿದಂತೆ ಕುಣಿತದವರು ಹಾಡುತ್ತಾರೆ. ಹಿಮ್ಮೇಳವಾಗಿ ಓಲಗದವರು ಇರುತ್ತಾರೆ. ಅಲ್ಲದೆ ಮುಖ್ಯ ಹಾಡುಗಾರನಲ್ಲಿ ಶೃತಿ ಇರುತ್ತದೆ. ಕುಣಿತದ ನಡೆ ಪೂರ್ಣ ವೃತ್ತಾಕಾರವಾಗಿದ್ದು ಎಡಕ್ಕೊಮ್ಮೆ ಬಲಕ್ಕೊಮ್ಮೆ ಬದಲಾಗುತ್ತದೆ. ಈ ಬದಲಾವಣೆ ಮುಖ್ಯ ಹಾಡುಗಾರನನ್ನು ಅವಲಂಬಿತವಾಗಿರುತ್ತದೆ. ಕುಣಿಯುವಾಗ ಹಾಡುವ ಹಾಡು ಹಳೆತಲೆಮಾರಿನಲ್ಲಿ ಮರಾಠಿ ಭಾಷೆಯಲ್ಲಿದ್ದರೆ ಹೊಸ ತಲೆಮಾರು ಕನ್ನಡ ಭಾಷೆಯಲ್ಲಿರುತ್ತದೆ. ಹಾಡು ಕಥನ ರೂಪದಲ್ಲಿರುತ್ತದೆ. ನರ್ತನದ ಆರ್ವತನಕ್ಕೆ ಹೊಂದಿಕೊಂಡು ಶ್ರೀದೇವಿಯ ಹುಟ್ಟು ಪ್ರಸಾರ ಮತ್ತು ಮಹಿಮೆಯನ್ನು ವರ್ಣನಾತ್ಮಕವಾಗಿ ವಿವರಿಸುತ್ತದೆ. ಮುಖ್ಯ ಹಾಡುಗಾರ

ಹಾಡಿದಾಗ ಕುಣಿಯುವವರು ಹಾಡಿನ ಸೊಲ್ಲನ್ನು ಮಾತ್ರ ಹಾಡುತ್ತಾರೆ. ಮುಖ್ಯ ಹಾಡುಗಾರ ''ಮಣ್ಣಿನ ಕೋಟೆ ಕಟ್ಟಿದಳಂತೆ ತಾಯಿ'' ಎಂದು ಹಾಡಿದಾಗ ಕುಣಿತದವರು ''ಲಾಗೆಲೋ ಪನಿ ಲಾಗೆಲಾಲೋ'' ಎಂದು ಹಾಡುತ್ತಾರೆ. ಮೊದಲೇ ನಿಗದಿಯಾದಂತೆ ಏಳು, ಒಂಬತ್ತು ಹೀಗೆ ನಿರ್ದಿಷ್ಟ ನಡೆಗಳನ್ನು ಮಾತ್ರ ಹಾಡಿ ಕುಣಿಯುತ್ತಾರೆ. ಒಂದು ಸುತ್ತು ಆದ ನಂತರ ದೀವಟಿಗೆಗಳಿಗೆ ಎಣ್ಣೆಯನ್ನು ಹಾಕಿಕೊಳ್ಳುತ್ತಾರೆ. ಒಂದು ಪೂಜೆಯಲ್ಲಿ ಎರಡು ಮೂರು ದರ್ಶನ ಪಾತ್ರಿಗಳು ಇರುತ್ತಾರೆ. ಮುಖ್ಯ ದರ್ಶನ ಪಾತ್ರಿಯು ಕೊನೆಗೆ ಬಂದರೆ ಮೊದಲು ಎರಡು ಮೂರು ಸುತ್ತುಗಳಲ್ಲಿ ದರ್ಶನ ಪಾತ್ರಿಗಳು ಅಂಗಳಕ್ಕೆ ಬಂದು ದೀವಟಿಗೆಗಳನ್ನು ಹಿಡಿದುಕೊಂಡು ತಮ್ಮ ಎದೆಗೆ, ತಲೆಗೆ ಹಿಡಿದುಕೊಂಡು ದರ್ಶನದಲ್ಲಿಯೇ ಮುಂದುವರಿಯುತ್ತಾರೆ. ದೀವಟಿಗೆಗಳು ಕುಣಿತಗಾರರ ಕೈಸೇರಿ ಕುಣಿತ ಮುಂದುವರಿಯತ್ತದೆ. ಮುಖ್ಯವಾಗಿ ಗೋಂದೋಳು ಕುಣಿತದ ಹಾಡಿನಲ್ಲಿ ನಲವತ್ತೆಂಟು ಶ್ಲೋಕಗಳು ಇವೆ. ಎಂದು ಹಿರಿಯರೊಬ್ಬರು ಹೇಳುತ್ತಾರೆ. ಯಾರಿಗೂ ಸರಿಯಾಗಿ ಎಲ್ಲಾ ಶ್ಲೋಕಗಳು ಬರುವುದಿಲ್ಲ. ಮತ್ತೆ ಅದಕ್ಕೆ ಅಲ್ಲಿ ಸಮಯವು ಕಡಿಮೆ ಇರುವುದರಿಂದ ಅಸಾಧ್ಯವಾದ ಕೆಲಸವದು. ಮತ್ತೆ ಒಂದು ವೇಳೆ ಆ ಎಲ್ಲಾ ನಲ್ವತ್ತೆಂಟು ಶ್ಲೋಕಗಳನ್ನು ಹೇಳಿದರೆ (ಸರಿಯಾಗಿ) ಆತನಿಗೆ ಅಲ್ಲಿಯೇ ದೇವಿ ಆವಾಹನೆಯಾಗುತ್ತಾಳೆ ಎಂದು ಹೇಳುತ್ತಾರೆ. ಕೊನೆಯದಾಗಿ ಮುಖ್ಯ ದರ್ಶನ ಪಾತ್ರಿಯ ದರ್ಶನ ಪ್ರಾರಂಭವಾಗುತ್ತದೆ. ಅಂಗಳದಲ್ಲಿ ಕುಣಿತದವರಿಂದ ದೀವಟಿಗೆಗಳನ್ನು ಪಡೆದು ತನ್ನ ಎದೆಗೆ ಕೈಕಳಗೆ ತಲೆಗೆ ಎಲ್ಲಾ ದೀವಟಿಗೆಗಳನ್ನು ಹಿಡಿದುಕೊಂಡು ಕುಟುಂಬದ ಯಜಮಾನನಲ್ಲಿ ಸೇವೆಗೆ ಕಾರಣಗಳನ್ನು ಕೇಳಿ ತಿಳಿದುಕೊಳ್ಳುತ್ತಾನೆ. ಈ ಎಲ್ಲಾ ಸಮಯದಲ್ಲಿ ನೆರೆದಿರುವ ಎಲ್ಲಾ ಭಕ್ತಾಭಿಮಾನಿಗಳು ಎದ್ದು ನಿಂತು ಭಕ್ತಿ ಗೌರವದಿಂದ ಮೌನವಾಗಿರುತ್ತಾರೆ. ಕುಟುಂಬದ ಎಲ್ಲಾ ಇದ್ದು ಯಜಮಾನ ನಾನು ಈ ಕಾರಣಕ್ಕಾಗಿ ಸೇವೆ ಮಾಡುತ್ತಿರುವುದಾಗಿಯೂ ಈ ಸೇವೆಯನ್ನು ಸಂತೋಷದಿಂದ ಸ್ವೀಕರಿಸಿ ನಮ್ಮನ್ನು ಉದ್ಧರಿಸಬೇಕೆಂದು ಕೇಳಿಕೊಳ್ಳುತ್ತಾನೆ. ಏನಾದರೂ ತಪ್ಪುಗಳಾಗಿದ್ದಲ್ಲಿ ದರ್ಶನ ಪಾತ್ರಿಯು ಅದನ್ನು ಹೇಳುತ್ತದೆ. ನಂತರ ದರ್ಶನ ಪಾತ್ರಿಯು ಹಿಂಗಾರ (ಅಡಿಕೆ ಮರದ ಹೂವು) ಹಿಡಿದು ಕಣಿಯುವುದಕ್ಕೆ ಸುತ್ತುವ ಸೇವೆಗೆ 'ಹಿಂಗಾರ ಸೇವೆ' ಎಂದು ಕರೆಯುತ್ತಾರೆ. ನಂತರ ದಪ್ಪ ಬಟ್ಟೆಯಿಂದ ಮಾಡಿದ ಬತ್ತಿಯನ್ನು ಹಚ್ಚಿ ಕೊಡುತ್ತಾರೆ. ಪಾತ್ರಿಯು ಉರಿಯುವ ಬತ್ತಿಯನ್ನು ನುಂಗುತ್ತಾ ಸುತ್ತು ಬರುತ್ತಾನೆ. ಉರಿಯುವ ಬತ್ತಿಯನ್ನು ಬಾಯಲ್ಲಿಟ್ಟು - ಬಾಯಿಯೊಳಗೇ ನಂದಿಸುತ್ತಾನೆ. ಇದನ್ನು 'ಬತ್ತಿಸೇವೆ' ಎನ್ನುತ್ತಾರೆ. ನಂತರ ಎಲ್ಲಾ ದೀವಟಿಗೆಗಳನ್ನೂ ತೆಗೆದುಕೊಂಡು ಮತ್ತಷ್ಟು ಆವೇಶದಿಂದ ಎದೆಗೆ ಉರಿಯನ್ನು ಬಡಿದುಕೊಳ್ಳುತ್ತಾ ಕಿವಿಗಡಚುವ ವಾದ್ಯದವರೊಂದಿಗೆ ದರ್ಶನ ಪಾತ್ರಿಯು ಭಯಂಕರ ಮುಖಭಾವಗಳನ್ನು ಪ್ರದರ್ಶಿಸುತ್ತಾ ನಲಿಯುತ್ತಾನೆ.

ಇದನ್ನು 'ದೊಂದಿಸೇವೆ' ಎನ್ನುತ್ತಾರೆ. ಬಳಿಕ ದೊಂದಿ - ದೀವಟಿಗೆಗಳನ್ನು ನಂದಿಸಲಾಗುತ್ತದೆ. ದರ್ಶನ ಪಾತ್ರಿ ತಟಸ್ಥನಾಗಿ ಭಕ್ತರೆಲ್ಲರಿಗೂ ಅಭಯದಾನ ಮಾಡುತ್ತಾನೆ. ನಂತರ ಶ್ರೀದೇವಿಗೆ ಮಂಗಳಾರತಿ ಮಾಡುತ್ತಾರೆ. ದೇವಿಗೆ ಹೊಗಳಿಕೆ ಶುಭನಮನಗಳನ್ನು ಸಲ್ಲಿಸುತ್ತಾರೆ. ಇದು ತುಳುನಾಡಿನ ದಕ್ಷಿಣದ ಸುಳ್ಯ ಪುತ್ತೂರು ಬಂಟ್ವಾಳ ಮಂಗಳೂರು ಮತ್ತು ಕಾಸರಗೋಡು ಪ್ರದೇಶಗಳಲ್ಲಿ ನಡೆಯುವ ಮಹಾಮಾಯಿಯ ಪೂಜೆ.

ಮಂಗಳವಾರ ಪೂಜೆ

ಈ ಪೂಜಾ ಆಚರಣೆಯಲ್ಲಿ ಎಲ್ಲಾ ಪೂಜಾ ವಿಧಿ ವಿಧಾನಗಳು ಗೋಂದೋಳು ಪೂಜೆಯನ್ನೇ ಹೋಲುತ್ತವೆ. ವ್ಯತ್ಯಾಸವೇನೆಂದರೆ ಬಲಿ ಪದ್ಧತಿಯಲ್ಲಿ ಮಾತ್ರ ಕಂಡು ಬರುತ್ತದೆ. ಮಂಗಳವಾರ ಪೂಜೆ (ಅಂಗಾರೆ ಪೂಜೆ)ಯಲ್ಲಿ ಹಂದಿಗಳನ್ನು ಬಲಿಕೊಡಲಾಗುವುದಿಲ್ಲ. ಕೇವಲ ಕೋಳಿಗಳ ರಕ್ತತರ್ಪಣದೊಂದಿಗೆ ಪೂಜೆ ನಡೆಯತ್ತದೆ. ತುಳುನಾಡಿನ ದಕ್ಷಿಣದ ಪ್ರದೇಶಗಳಲ್ಲಿ ಎರಡು ವರ್ಷಕ್ಕೆ ಒಮ್ಮೆ ಈ ಪೂಜೆಯನ್ನು ಮಾಡುವ ಪದ್ಧತಿಯಿದೆ. ಒಂದು ವರ್ಷ 'ಗೋಂದೋಳು ಪೂಜೆ' ನಡೆದರೆ ಮುಂದಿನ ವರುಷ 'ಮಂಗಳವಾರ' ಪೂಜೆಯನ್ನು ನೆರವೇರಿಸುತ್ತಾರೆ.

ತುಳುನಾಡಿನಲ್ಲಿ ನಡೆದ ಕೆಲವು ಸತ್ಯ ಘಟನೆಗಳು

ಸುಮಾರು ೫೦ ವರ್ಷಗಳ ಹಿಂದೆ ಕಾಸರಗೋಡು ಪ್ರದೇಶದ ಬ್ರಾಹ್ಮಣ ಕುಟುಂಬದಲ್ಲಿ ನಡೆದ ಘಟನೆಯ ಸಾರಾಂಶ ಹೀಗಿದೆ. ಬ್ರಾಹ್ಮಣರ ಸ್ವಂತ ಜಾಗದಲ್ಲಿ ಒಂದು ಭೈರವನ ಬನ ಇದ್ದು ಅನೇಕ ವರ್ಷಗಳಿಂದ ಯಾವುದೇ ರೀತಿಯ ಪೂಜೆ - ಪುನಸ್ಕಾರ ಸಲ್ಲುತ್ತಿರಲಿಲ್ಲ. ಭೈರವನಿಗೆ ಸೇವೆ ನೀಡದೆ ಹೋದರೆ ಪ್ರಥಮವಾಗಿ ಜಾನುವಾರುಗಳಿಗೆ ದೋಷ ಕಂಡು ಬರುತ್ತದೆ. ಅದೇ ರೀತಿ ಇಲ್ಲಿಯೂ ನಡೆದಾಗ ಮನೆಯ ಯಜಮಾನ ಜೋಯಿಸರ ಮೊರೆಹೊಕ್ಕರು. ಭೈರವನಿಗೆ ಪೂಜೆ ಸಲ್ಲಿಸಬೇಕು. ಅದು ಅಸುರಕ್ರಿಯೆಯಲ್ಲಿ ಆಗಬೇಕು. ಇದರಿಂದ ದನಕರುಗಳು ಶಾಂತಿಯಿಂದ ಸುಖವಾಗಿರುತ್ತವೆ. ಎಂಬುದಾಗಿ ಪರಿಹಾರದ ದಾರಿ ತೋರಿಸಲಾಯಿತು. ಭೈರವನಿಗೆ ಅಸುರ ಕ್ರಿಯೆಯಲ್ಲಿ ಸಲ್ಲಿಸುವ ಪೂಜೆಯ ಬಗ್ಗೆ ನಂಬಿಕೆಯಿಲ್ಲದ ಯಜಮಾನ ನಾನೇ ಏಕೆ ಮಂತ್ರಗಳೊಂದಿಗೆ ಪೂಜೆ ಮಾಡಬಾರದು? ಎಂದು ಪೂಜೆ ಮಾಡಲು ಅಣಿಯಾಗುತ್ತಾನೆ. ಪೂಜೆ ಪ್ರಾರಂಭವಾದೊಡನೆಯೇ ಹಟ್ಟಿಯ ಒಂದು ದನ ಸಾವನ್ನಪ್ಪಿತ್ತು. ಪೂಜೆ ಮುಂದುವರೆಯಿತು.

ಹಟ್ಟಿಯಲ್ಲಿ ಜಾನುವಾರುಗಳ ಕೋಲಾಹಲವಾದ ಸುದ್ದಿ ತಿಳಿದೊಡನೆ ಪೂಜೆ ನಿಲ್ಲಿಸಲಾಯಿತು. ನಂತರ ಭೈರವನಿಗೆ ಅಸುರಕ್ರಿಯೆಯಲ್ಲಿ ಪೂಜೆ ಮಾಡುವುದಾಗಿ ಪ್ರಾರ್ಥನೆ ಮಾಡಿದ ನಂತರ ಎಲ್ಲಾ ಶಾಂತ ರೂಪಕ್ಕೆ ಮರಳಿದವು. ತರುವಾಯ ಭೈರವ ಪೂಜೆಯನ್ನು ಮರಾಠಿನಾಯ್ಕರ ಮೂಲಕ ಮಾಡಲಾಯಿತು.

ಸುಳ್ಯ ಪರಿಸರದಲ್ಲಿ ಗೌಡ ಕುಟುಂಬದಲ್ಲಿ ಈಗ್ಗೆ ೫ - ೬ ವರ್ಷಗಳ ಮೊದಲು ನಡೆದಂತಹ ಘಟನೆ : ಕುಟುಂಬದ ಹಿರಿಯರು (ಗತಿಸಿದ) ಯಾವುದೋ ಕಷ್ಟಕಾಲದಲ್ಲಿ ಪರಿಹಾರಕ್ಕಾಗಿ ಶ್ರೀದೇವಿಯ ಗೋಂದೋಳು ಪೂಜೆಯನ್ನು ಮಾಡಿಸುವುದಾಗಿ ಹರಕೆ ಹೇಳಿದ್ದರೂ ಪೂಜೆ ನೆರವೇರಿಸಿರಲಿಲ್ಲ. ಕುಟುಂಬದಲ್ಲಿ ಅನೇಕ ದೋಷಗಳು ಕಂಡುಬಂದಾಗ (ಒಂದು ಸಾವು ಸಹಿತ) ಅಷ್ಟಮಂಗಲ ಪ್ರಶ್ನೆ ಕಾರ್ಯ ಇರಿಸಿದರು. ಅನೇಕ ದೋಷಗಳಲ್ಲಿ ಒಂದು ಗೋಂದೋಳು ಪೂಜೆಯ ದೋಷ ಕಂಡು ಬಂತು. ಹರಕೆ ಹೇಳಿ ಮಾಡಿರಲಿಲ್ಲ. ಒಂದು ತಿಂಗಳ ಒಳಗೆ ಮಾಡಲೇಬೇಕು. ಮಾಡದಿದ್ದರೆ ಇತರ ದೋಷಗಳಿಂದ ಇದು ಸೇರಿ ಇನ್ನೊಂದು ಜೀವ ಹೋಗುತ್ತದೆ ಎಂದು ಎಚ್ಚರಿಸಲಾಯಿತು. ತಕ್ಷಣ ಕಾರ್ಯಪ್ರವೃತ್ತರಾಗಿ (ಮಳೆಗಾಲವಾಗಿದ್ದರೂ) ಒಂದು ನಿಗದಿತ ದಿನದಂದು ಗೋಂದೋಳು ಪೂಜೆ ನೆರವೇರಿತು.

ಬಂಟ್ವಾಳ ತಾಲೂಕಿನಲ್ಲಿ ಒಂದು ನಾಯ್ಕರ ಕುಟುಂಬದಲ್ಲಿ ಗೋಂದೋಳು ಪೂಜೆ ನಿಗದಿಯಾಗಿತ್ತು. ಹಿರಿಯ ಬಂಧುವೊಬ್ಬರು (ಉಪಾಧ್ಯಾಯ) ತಮ್ಮ ಮಗಳೊಂದಿಗೆ ಪೂಜೆ ನಡೆಯುವ ಹತ್ತಿರದ ಮನೆಗೆ ಬಂದಿದ್ದರು. ಹಿಂದಿನ ಮನಸ್ತಾಪದಿಂದ ಪೂಜೆ ನಡೆಯುವ ಮನೆಗೆ ಬಂದಿರಲಿಲ್ಲ. ಇವರು ಬಂದ ವಿಷಯ ತಿಳಿದು ಪೂಜೆ ನಡೆಯುವ ಮನೆಯವರು ಬಂದು ತಾವು ಮನೆಗೆ ಬರಬೇಕು. ಹಿಂದಿನದೆಲ್ಲವನ್ನು ಮರೆತು ಈ ಗೋಂದೋಳು ಪೂಜೆಯಲ್ಲಿ ಪಾಲ್ಗೊಳ್ಳಬೇಕೆಂದು ನಿವೇದಿಸಿಕೊಂಡರು. ಹಿರಿಯರಾದ ನೀವು ತಪ್ಪನ್ನು ಮನ್ನಿಸಿ ಬರಬೇಕೆಂದಾಗ ಹಿರಿಯರ ಮನಸ್ಸು ಬದಲಾಯಿತು. ಆದರೆ ಮಗಳು ತಂದೆಗೆ ಮಾತನಾಡಲು ಅವಕಾಶ ನೀಡದೇ ಖಡಾಖಂಡಿತವಾಗಿ 'ನಾವು ಬರುವುದಿಲ್ಲ. ನಾವು ಮನೆಗೆ ಹೋಗುತ್ತೇವೆ' ಎಂದು ವಾದಿಸತೊಡಗಿದಳು. ಅಲ್ಲಿದ್ದ ಇತರರು ನೀನು ಇನ್ನೂ ಚಿಕ್ಕವಳು (ಯುವತಿ) ಹಿರಿಯರ ಮಾತಿಗೆ ಬೆಲೆ ಕೊಡಬೇಕು. ಇದು ಲಘುವಾಗಿ ಪರಿಗಣಿಸುವ ಪೂಜೆಯಲ್ಲ. ಮಹಾಮಾಯಿಯ ಪೂಜೆ ಎಂದು ತಿಳಿಹೇಳಿದರೂ ಅವಳ ಮನ ಪರಿವರ್ತನೆಯಾಗುವುದರಲ್ಲಿ ವಿಫಲವಾಯಿತು. ಕೊನೆಗೆ ತಂದೆಯನ್ನು ಬಿಟ್ಟು ಮನೆಗೆ ಹೊರಟೇ ಹೋದಳು. ಕೆಲವೇ ವರ್ಷಗಳಲ್ಲಿ (ಮದುವೆ ಆಗಿರಲಿಲ್ಲ) ಅಸಹಜ ಸಾವಿಗೆ ತುತ್ತಾದಳು. ಅವಳ ತಂದೆ ಇನ್ನೂ ಬದುಕಿದ್ದಾರೆಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳುತ್ತಾರೆ.

ಕಾಸರಗೋಡು ಪ್ರದೇಶದಲ್ಲಿ ಬ್ರಾಹ್ಮಣ ಕುಟುಂಬದಲ್ಲಿ ಮರಾಠಿ - ನಾಯ್ಕನು ಕೂಲಿ ಕೆಲಸ ಮಾಡುತ್ತಿದ್ದನು. ಒಂದು ದಿನ ಕುಟುಂಬದ ಯಜಮಾನ ಕೆಲಸಗಾರನಿಗೆ "ನಾಳೆ ಬೇಗ ಬರಬೇಕು" ಎಂದು ಹೇಳಿದಾಗ "ಇಂದು ರಾತ್ರಿ ಮನೆಯಲ್ಲಿ ಗೋಂದೋಳು ಪೂಜೆ ನಡೆಯುವುದರಿಂದಾಗಿ ಬೇಗ ಬರಲಾಗುವುದಿಲ್ಲ." ಎಂದು ಹೇಳಿ ತನ್ನ ಮನೆಗೆ ಹೋದನು. ಮರದಿನ ನಿದ್ರೆ ಮಾಡಿರದಿದ್ದರೂ ಸ್ವಲ್ಪ ತಡವಾಗಿ ಕೆಲಸದ ಮನೆಗೆ ಹೋದಾಗ "ಯಜಮಾನನು" ಏನು! ತಡಮಾಡಿದ್ದು ಎಂಥಾ ಪೂಜೆ! ಹೆಂಡ ಕುಡಿದುಕೊಂಡು ಏನು ಪೂಜೆ ಮಾಡುತ್ತಿರಿ! ಎಂದು ವ್ಯಂಗ್ಯವಾಡಿದನು. ಕೆಲಸಗಾರನು ಮರುಮಾತನಾಡದೆ ತನ್ನ ಪಾಡಿಗೆ ತಾನು ಕೆಲಸಕ್ಕೆ ಹೋದನು. ಸ್ವಲ್ಪ ಸಮಯದ ನಂತರ ಕೆಲಸದ ನಿಮಿತ್ತ ಯಜಮಾನನನ್ನು ಕರೆದಾಗ ಆತ ಮನೆಯೊಳಗೆ ಮಲಗಿದ್ದನು. ಕಾರಣ ಕೇಳಿದಾಗ ಚಳಿ ಜ್ವರ ತಕ್ಷಣ ಬಂದು ಮೈಯೆಲ್ಲಾ ಬೊಬ್ಬೆಗಳು ಬಿದ್ದಿವೆ ಎಂದು ವಿಷಯ ತಿಳಿಸಿದನು. ತಕ್ಷಣ ತನ್ನ ತಪ್ಪಿನ ಅರಿವಾಗಿ ಕೆಲಸಗಾರನನ್ನು ಕರೆದು ತಾನು ಮುಂದಿನ ಗೋಂದೋಳು ಪೂಜೆಗೆ ಬಂದು ತಪ್ಪಿನ ಹರಕೆ ಹಾಕುವುದಾಗಿ ವಾಗ್ದಾನ ಮಾಡಿದನು. ಕೆಲಸಗಾರರು ಯಾವುದೋ ಸೊಪ್ಪಿನ ರಸವನ್ನು ಕೊಟ್ಟಾಗಿ ಬೊಬ್ಬೆಗಳು ಕಡಿಮೆಯಾಗಿ ಕಂಡು ಬಂತು.

ಬಂಟ್ವಾಳದ ಕುದ್ದಡ್ಕ ಎಂಬಲ್ಲಿ ಗೋಂದೋಳು ಪೂಜೆಗಾಗಿ ದಿನ ನಿಗದಿಗೊಳಿಸಿದ್ದರು. ಪೂಜಾಕಾರ್ಯಕ್ಕೆ ೧೦ - ೧೫ ದಿನಗಳಿರುವಾಗಲೇ ಕುಟುಂಬದ ಯಜಮಾನ ಹತ್ತಿರದ ಹಂದಿ ಫಾರ್ಮ್‌ಗೆ ಹೋಗಿ ಸೂಕ್ಷ್ಮವಾಗಿ ಎರಡು ಹಂದಿಗಳನ್ನು ಮುಂಗಡ ಹಣ ಕೊಟ್ಟು ಹೋಗಿದ್ದರು. ಪೂಜೆಯ ಮುನ್ನಾದಿನ ಹೋದಾಗ ಮೊದಲು ನಿಗದಿಪಡಿಸಿದ ಹಂದಿ ತುಂಬಾ ಕೊಬ್ಬಿತ್ತು. (೧೫ದಿನಗಳಲ್ಲಿ) ಆದರ ಬೆಲೆ ಹೆಚ್ಚಾಗುತ್ತದೆ ಎಂದು ಬೇರೆ ಸಣ್ಣ ಹಂದಿಯನ್ನು ನೋಡಿ ವಾಹನದಲ್ಲಿ ತಂದರು. ದಾರಿ ಮಧ್ಯೆ ನೋಡಿದಾಗ ಚಿಕ್ಕ ಹಂದಿ ಸತ್ತು ಹೋಗಿತ್ತು. ತಕ್ಷಣ ವಾಹನದಲ್ಲಿಯೇ ಫಾರ್ಮ್‌ಗೆ ಬಂದು ವಿಷಯ ತಿಳಿಸಿದಾಗ ಅವರು ಮೌನವಹಿಸಿದರು. ಸತ್ತ ಹಂದಿಯನ್ನು ಗುಂಡಿ ತೋಡಿ ಹಾಕಿದ ನಂತರ ಮೊದಲು ನಿಗದಿಪಡಿಸಿದ ಹಂದಿಯನ್ನೇ ಪಡೆದುಕೊಂಡರು. ಪೂಜಾ ದಿನ ಪೂಜೆ ಮುಂದುವರಿದು ದರ್ಶನ ಪಾತ್ರಿಯು "ಕಡಿಮೆ ಹಣ ಎಂದು ಆಶೆಪಟ್ಟರೆ ದುಪ್ಪಟ್ಟು ಹಣ ಹೋದೀತು! ಜಾಗ್ರತೆಯಿರಲಿ" ಎಂಬ ಎಚ್ಚರಿಕೆಯನ್ನು ನೀಡಿತು.

ಬಂಟ್ವಾಳ ತಾಲೂಕಿನ ಕಲ್ಲಡ್ಕ ಎಂಬಲ್ಲಿ ಕ್ರಿಶ್ಚಿಯನ್ ಮಹಿಳೆಯೊಬ್ಬಳು ಮನೆಯಲ್ಲಿ ಗೋಂದೋಳು ಪೂಜೆ ನಡೆಸಿದಳು. ಪೂಜೆ ನೋಡುವ ಸಲುವಾಗಿ ಒಂದು ಕಡೆ ಆಸೀನಳಾಗಿದ್ದಳು. ಪೂಜೆ ಮಾಡುತ್ತಾ ಪೂಜಾರಿಗಳು (ದೇವರಮಾನಿ) ಅನೇಕ ಸಲ ಹಿರಿಯರಿಗೆ ಗೌರವ ಸೂಚಿಸುವ ಸಲುವಾಗಿ 'ಪಾಯದು'

ಎಂಬ ಸಂಪ್ರದಾಯದಂತೆ ಶೇಂದಿಯನ್ನು ಸ್ವಲ್ಪ ಸ್ವಲ್ಪ ತೀರ್ಥವಾಗಿ ಸ್ವೀಕರಿಸುತ್ತಿದ್ದರು. ಇದನ್ನು ನೋಡಿದ ಮನೆಯ ಮಹಿಳೆ "ನೀವು ಪೂಜೆ ಮಾಡಲು ಬಂದಿರೋ ಇಲ್ಲ ಶೇಂದಿ ಕುಡಿಯಲು ಬಂದಿರೋ? ಎಂದು ವ್ಯಂಗ್ಯವಾಡಿದಳಂತೆ. ಪೂಜಾರಿಗಳು ಏನೂ ಉತ್ತರ ಕೊಡದೇ ಪೂಜೆ ಮುಗಿಸಿದರು. ಊಟ (ಪ್ರಸಾದ) ಸ್ವೀಕರಿಸದೆ ಅವರ ಮನೆ ದಾರಿ ಹಿಡಿದರು. ಇತ್ತ ಪೂಜೆ ನಡೆದ ಮನೆಯಲ್ಲಿನವರಿಗೆ ಊಟ ಬಡಿಸಲು ಹೋದಾಗ ಹಂದಿ ಮಾಂಸದ ಪಾತ್ರೆಯಲ್ಲಿ ಹುಳ ಕಂಡುಬಂತು. ಮಹಿಳೆಗೆ ತಕ್ಷಣ ತನ್ನ ತಪ್ಪಿನ ಅರಿವಾಗಿ ಪೂಜಾರಿಗಳ ಮನೆಗೆ ಹೋಗಿ ತಪ್ಪನ್ನು ಮನ್ನಿಸಬೇಕೆಂದು ವಿನಂತಿಸುತ್ತಾಳೆ. ನಾವು ಚೆನ್ನಾಗಿ ಪೂಜೆ ಮಾಡುವವರಲ್ಲ. ಪುನ: ನಾವು ಬರುವುದಿಲ್ಲವೆಂದು ಸಮುಜಾಯಿಸಿ ನೀಡಿದರಂತೆ.

ಹೀಗೆ ತುಳುನಾಡಿನಲ್ಲಿ ನಡೆದಂತಹ ಅನೇಕ ಘಟನೆಗಳ ನಿದರ್ಶನಗಳು ದೊರೆಯುತ್ತವೆ. ಇತರ ಸಮುದಾಯಗಳು ಗೋಂದೋಳು ಪೂಜೆಯ ಮೇಲೆ ಹೆಚ್ಚು ಹೆಚ್ಚಾಗಿ ನಂಬಿಕೆಯಿಡಲು ಇಂತಹ ಘಟನೆಗಳು ಒಂದು ರೀತಿಯಲ್ಲಿ ಕಾರಣಗಳಾಗಿವೆ ಎಂದು ಹೇಳಬಹುದು.

ತುಳುನಾಡಿನ ಉತ್ತರದ ಉಡುಪಿ ಕುಂದಾಪುರ ಕಾರ್ಕಳ ಪ್ರದೇಶಗಳಲ್ಲಿನ ಗೋಂದೋಳು ಪೂಜೆಯ ರೀತಿ ಬೇರೆಯಾಗಿದೆ. ಇಲ್ಲಿನ ಗೋಂದೋಳು ಪೂಜೆಯನ್ನು ಮುಖ್ಯವಾಗಿ ಎರಡು ರೀತಿಯಲ್ಲಿ (ಸಮಯದಲ್ಲಿ) ನಡೆಸಲಾಗುತ್ತದೆ. ಒಂದು ಊರಿಗಾಗಿ ಊರಿನವರೆಲ್ಲರೂ ಸೇರಿ ಮಾಡುವ ಪೂಜೆಗೆ "ಮಾರಿ ಗೋಂದೋಳು" ಎಂದು ಕರೆದರೆ ಒಂದು ಮನೆಯವರು ತಮ್ಮ ಮನೆಯಲ್ಲಿಯೇ ನಡೆಸುವಂತಹ ಪೂಜೆಯನ್ನು 'ಗೋಂದೋಳು ಪೂಜೆ' ಎಂದು ಕರೆಯುತ್ತಾರೆ. ಈ ಪ್ರದೇಶಗಳಲ್ಲಿನ ಒಂದೊಂದು ಊರಿಗೂ ಒಂದೊಂದು ಗದ್ದುಗೆಗಳ (ಅಮ್ಮನವರ ಗದ್ದುಗೆ) ಗುಡಿಗಳು ಕಂಡು ಬರುತ್ತವೆ. ಊರಿನಲ್ಲಿ ಎಲ್ಲಿ ಯಾವ ಮನೆಯಲ್ಲಿ ಗೋಂದೋಳು ಪೂಜೆಯಾಗಬೇಕಾದರೆ ಊರಿನ ಅಮ್ಮನವರ ಗುಡಿಯಲ್ಲಿರುವ ದೇವಿ ಅಮ್ಮನವರ ಗದ್ದುಗೆಯನ್ನು ಕೊಂಡೊಯ್ಯಬೇಕಾಗುತ್ತದೆ. ಒಂದು ಗ್ರಾಮದಲ್ಲಿ ಒಂದೇ ದಿನ ಎರಡು ಕಡೆ ಪೂಜೆ ಇದ್ದರೆ ಹತ್ತಿರದ ಗ್ರಾಮದಲ್ಲಿರುವ ಗದ್ದುಗೆಯಿಂದ ದೇವಿಯ ಮೂರ್ತಿಯನ್ನು ತರಲಾಗುತ್ತದೆ.

ಒಂದು ಗ್ರಾಮದಲ್ಲಿ 'ಮಾರಿ ಗೋಂದೋಳು' ಪೂಜೆ ನಡೆಯಬೇಕಾದರೆ ಆ ಊರಿನ ಪ್ರತಿ ಮನೆಯವರು ವಂತಿಗೆಯನ್ನು ಕೊಡಬೇಕಾಗುತ್ತದೆ. ಪೆರ್ಡೂರಿನಲ್ಲಿ ಮಾರಿ ಗೋಂದೋಳು ಪೂಜೆಗಾಗಿ ಊರಿನವರು ಹತ್ತು ರೂಪಾಯಿ ಮತ್ತು ಒಂದು ಸೇರು ಅಕ್ಕಿಯನ್ನು ವಂತಿಗೆ ರೂಪದಲ್ಲಿ ಕೊಡುತ್ತಾರೆ. ರಾತ್ರಿಯಾದ ನಂತರವೇ ತಲೆಯಲ್ಲಿ ಹೊತ್ತುಕೊಂಡು ಹೋಗುತ್ತಾರೆ. ಇಲ್ಲಿನ ವಿಶೇಷವೆಂದರೆ ಪ್ರತಿಯೊಂದು ಅಮ್ಮನವರ

ಗದ್ದುಗೆಯಲ್ಲಿಯೂ ಪ್ರತಿದಿನ ಪೂಜೆ ನಡೆಯುತ್ತದೆ. ಮರಾಠಿ - ನಾಯ್ಕ ಓರ್ವನನ್ನು ನೇಮಿಸುತ್ತಾರೆ. ಪೂಜೆ ಇದ್ದಾಗ ಈ ಅರ್ಚಕರೇ ಮೂರ್ತಿಯನ್ನು ಹೊತ್ತುಕೊಂಡು ಹೋಗುತ್ತಾರೆ. ಎಷ್ಟು ದೂರವಿದ್ದರೂ ಕಾಲ್ನಡಿಗೆಯಲ್ಲಿಯೇ ಹೋಗುತ್ತಾರೆ. ಪೂಜಾ ಪರಿಕರಗಳನ್ನೆಲ್ಲಾ ಇನ್ನೊಬ್ಬ ಸಹಾಯಕರು ಹೊತ್ತುಕೊಂಡು ಬರುತ್ತಾರೆ. 'ಮಾರಿ ಗೋಂದೋಳು' ನಡೆಯುವ ಗುಡಿಯಲ್ಲಿ ಶ್ರೀ ಮಾತೆಯ ಮೂರ್ತಿಯನ್ನು ಇಡಲಾಗುತ್ತದೆ. ನಂತರ ವಿವಿಧ ರೀತಿಯಲ್ಲಿ ಅಲಂಕಾರ ಮಾಡುತ್ತಾರೆ. ಮುಖ್ಯವಾಗಿ ಬಾಳೆದಿಂಡನ್ನು ಕತ್ತರಿಸಿ ಜೋಡಿಸುತ್ತಾರೆ. ಗದ್ದುಗೆಗೆ ಅದು ಅಲಂಕಾರಿಕವಾಗಿ ಕಾಣುತ್ತದೆ. ಬಾಳೆದಿಂಡನ್ನುಜೋಡಿಸಲು ಒಂದು ಜಾತಿಯ ಮುಳ್ಳನ್ನು (ಕಾರೇ ಮುಳ್ಳು ತುಳುವಿನಲ್ಲಿ) ಉಪಯೋಗಿಸುತ್ತಾರೆ. ಜನಪದರು ಅನಾದಿಕಾಲದಿಂದಲೂ ಪ್ರಕೃತಿಯಲ್ಲಿರುವುದನ್ನು ಬಳಸುತ್ತಿದ್ದರು. ಅದನ್ನು ಬಿಟ್ಟುಕೊಡುವುದಿಲ್ಲ. ಆಧುನಿಕವಾಗಿ ಏನೇ ಬಂದರೂ ಜನಪದರು ಸುಲಭದಲ್ಲಿ ಸ್ವೀಕರಿಸುವುದಿಲ್ಲ. ಮತ್ತೆ ಅವರು ಆಚರಿಸುವ ಯಾವುದೇ ಆಚರಣೆಯಲ್ಲಿ ಅಪವಿತ್ರ್ಯಕ್ಕೆ ಆಸ್ಪದ ಕೊಡುವುದಿಲ್ಲ. ಭಕ್ತಾದಿಗಳು ದೇವಿಗೆ ಕರ್ಪೂರ, ಅಗರಬತ್ತಿ, ಹಣ್ಣುಕಾಯಿ, ತೆಂಗಿನಎಣ್ಣೆ ಇತ್ಯಾದಿಗಳನ್ನು ದೇವಿಗೆ ಅರ್ಪಿಸುವ ಸಲುವಾಗಿ ತರುತ್ತಾರೆ. ದೇವಿಯ ಗದ್ದುಗೆಗೆ ಅಲಂಕಾರಗಳು ಮುಗಿದ ನಂತರ ಮುಖ್ಯ ಪೂಜಾರಿಯು ಪೂಜೆ ಆರಂಭಿಸುತ್ತಾನೆ. ಇದೇ ಸಮಯದಲ್ಲಿ ಗುಡಿಯ ಹೊರಗಡೆ ನಾಲ್ವರು ವೇಷ ತೊಡುತ್ತಾರೆ. ಈ ವೇಷ ಯಕ್ಷಗಾನದ ವೇಷವನ್ನು ನಮಗೆ ನೆನಪಿಸುತ್ತದೆ. ಅರ್ಚಕನು ಆರತಿ ಮಾಡುತ್ತಾನೆ. ನಾಲ್ವರು ವೇಷಗಾರರು ಗುಡಿಯ ಮುಂದೆ ಬಂದು ಮಹಾಮಾಯಿಗೆ ವಂದಿಸಿ ಪ್ರದಕ್ಷಿಣಾಕಾರವಾಗಿ ಕುಣಿಯಲು ಪ್ರಾರಂಭಿಸುತ್ತಾರೆ. ಹಿಮ್ಮೇಳದಲ್ಲಿ ಅವರಿಗೆ ವಾದ್ಯ ವೃಂದದವರು (ಓಲಗ) ಸಹಕರಿಸುತ್ತಾರೆ. ಗಾಯಕರೊಬ್ಬರು ದೇವಿಯ ಹೊಗಳಿಕೆಯನ್ನು ಹಾಡುತ್ತಾರೆ. ಅವಕ್ಕೆ ವೇಷಗಾರರು ದನಿಗೂಡಿಸುತ್ತಾ ಕುಣಿಯುತ್ತಾರೆ. ಗಾಯಕ 'ಗಮಟೆ'ಯನ್ನು ಬಳಸುತ್ತಾನೆ. ವೇಷಗಾರರು ತಾಳಗಳನ್ನು ಉಪಯೋಗಿಸುವುದನ್ನು ಕಾಣಬಹುದು.

ಗಾಯಕರು ದೇವಿಯ ಹೊಗಳಿಕೆಯ ನಂತರ ವಿಶ್ರಮಿಸುತ್ತಾರೆ. ಆದರೆ ವೇಷಗಾರರು ಓಲಗದವರ ಹಿಮ್ಮೇಳದೊಂದಿಗೆ ಕುಣಿತ ಮುಂದುವರೆಸುತ್ತಾರೆ. ಅನೇಕ ಭಕ್ತಾಧಿಗಳು ನೆರೆದಿರುತ್ತಾರೆ. ವೇಷಗಾರರು ಆವೇಷ ಭರಿತ ಕುಣಿತದಲ್ಲಿ ಮಗ್ನರಾಗುತ್ತಾರೆ. ಒಬ್ಬ ನಿಂತರೆ ಇತರ ಮೂವರು ಕುಳಿತಲ್ಲೆ ಕುಪ್ಪಳಿಸುತ್ತಾ ಪ್ರದಕ್ಷಿಣೆ ಬರುತ್ತಾರೆ. ಮೊದಲು ಹಾಡುತ್ತಿದ್ದ ಗಾಯಕರು ಪುನ: ಸೇರಿಕೊಂಡು ಕುಣಿತ ಮುಂದುವರಿಯುತ್ತದೆ. ಕ್ರಮೇಣ ಊರಿನ ಉತ್ಸಾಹಿ ಯುವಕರು ವಯಸ್ಕರು ಸೇರಿಕೊಂಡಾಗ ನೆರೆದಿರುವ ಭಕ್ತಾದಿಗಳು ನಗುಮುಖದಿಂದ ಪ್ರೋತ್ಸಾಹಿಸುತ್ತಾರೆ. ಸುಮಾರು ಅರ್ಧ ಗಂಟೆಯ ತನಕ ಕುಣಿತ ಇದ್ದು ಮುಗಿಯುತ್ತದೆ.

ಕುಣಿತಗಾರರು ಹೆಚ್ಚಾದಂತೆಲ್ಲಾ ಯಾವುದೇ ರೀತಿ ಇರುವುದು ಕಂಡುಬರುವುದಿಲ್ಲ. ತುಳುನಾಡಿನ ದಕ್ಷಿಣ ಭಾಗದ ಗೋಂದೋಳು ಕುಣಿತವು ಕ್ರಮವತ್ತಾಗಿ ಏಕಾಗ್ರತೆಯಿಂದ ಕಂಡುಬಂದರೆ ಅದು ಇಲ್ಲಿ (ಉತ್ತರ ಭಾಗ) ಕಂಡುಬರುವುದಿಲ್ಲ. ಹಾಸ್ಯಾತ್ಮಕವಾಗಿ ಕಾಣುವುದರಿಂದ ಏಕಾಗ್ರತೆಗೆ ತೊಂದರೆ ಉಂಟಾಗುತ್ತದೆ. ನಂತರ ಮೊಕ್ತೆಸರರು ಗುಡಿಯೊಳಗಿನ ಗದ್ದುಗೆಯ ಜ್ಯೋತಿಯಿಂದ ಪಂಚ ದೀವಟಿಗೆಗಳನ್ನು ಹೊತ್ತಿಸಿ ಅಂಗಳದಲ್ಲಿರುವ ಕುಣಿತಗಾರರಿಗೆ ಕೊಡುತ್ತಾರೆ. ದೀವಟಿಗೆಗಳೊಂದಿಗೆ ನಂತರದ ನರ್ತನ ಮುಂದುವರಿಯುತ್ತದೆ. ಹೀಗೆಯೇ ಸುಮಾರು ರಾತ್ರಿ ಹತ್ತು ಗಂಟೆಯ ತನಕ ಇರುತ್ತದೆ. ನಂತರ ಅಣಕು ಪ್ರದರ್ಶನ ಹಾಸ್ಯಾತ್ಮಕವಾಗಿ ನಡೆಯುತ್ತದೆ. ಪಂಚದೀವಟಿಗೆಯವರು ನೆಲದಲ್ಲಿ ಕುಳಿತುಕೊಳ್ಳುತ್ತಾರೆ. ಅವರಿಗೆ ಊಟ ಬಡಿಸುವ ಅಣಕು ಪ್ರದರ್ಶನ ಮತ್ತು ಹಾಸ್ಯಭರಿತ ಮಾತುಗಳನ್ನಾಡುತ್ತಾರೆ. ಅಣುಕು ಪ್ರದರ್ಶನದಲ್ಲಿ ಬ್ರಾಹ್ಮಣರ ಊಟದ ಬಗ್ಗೆ ಲೇವಡಿಯಾಡುತ್ತಾರೆ. ಇದು ನಮಗೆ ಪುರೋಹಿತಶಾಹಿ ಪರಂಪರೆಯ ನಿರಾಕರಣೆಯ, ಪ್ರತಿಭಟನೆಯ ರೂಪವನ್ನು ನೀಡುತ್ತದೆ.[೪] ಇದು ಉಡುಪಿ ಜಿಲ್ಲೆಯ 'ಮಾರಿ ಗೋಂದೋಳು ಪೂಜೆ''ಯಲ್ಲಿ ಮಾತ್ರ ಕಂಡುಬರುತ್ತದೆ. ದಕ್ಷಿಣದ ಭಾಗದಲ್ಲಿಲ್ಲ. ಕೂಲಂಕುಷವಾಗಿ ನೋಡಿದರೆ ಉಡುಪಿ ಜಿಲ್ಲೆಗಿಂತ ದಕ್ಷಿಣಕನ್ನಡ ಮತ್ತು ಕಾಸರಗೋಡು ಜಿಲ್ಲೆಯಲ್ಲಿನ ಹೆಚ್ಚು ಕೆಳವರ್ಗದ ಜನರು ವೈದಿಕರ (ಪುರೋಹಿತ ವರ್ಗದ) ದಾಸ್ಯಕ್ಕೆ ಒಳಗಾದವರು ಮಾತ್ರ ಈ ಆರಾಧನೆಯಲ್ಲಿ ತೊಡಗಿರುವುದು ಕಂಡುಬರುತ್ತದೆ. ಶ್ರಮಿಕ ಜನ ವರ್ಗ ಈ ಪೂಜೆಯಲ್ಲಿ ಭಾಗವಹಿಸುವುದನ್ನು ನೋಡಿದರೆ ಇದು ಶುದ್ಧ ಕೃಷಿ ಪರವಾದ ಹಬ್ಬ ಎನ್ನುವುದರಲ್ಲಿ ಎರಡು ಮಾತಿಲ್ಲ. ಈ ಗೋಂದೋಳು ಪೂಜೆಯ ಒಡಲೊಳಗೆ ನಮ್ಮ ನೆಲ, ಜಲ, ಸಸ್ಯ, ಪರಿಸರವನ್ನು ರಕ್ಷಿಸುವ ಸಂದೇಶ ಅಡಗಿದೆ. ಪ್ರಾಕೃತಿಕವಾದ ವ್ಯವಸಾಯ ಕ್ರಮಕ್ಕೆ ದಕ್ಕೆಯಾಗದಂತೆ ಮುಂದಿನ ಪೀಳಿಗೆ ಬದುಕಿ ಬಾಳಬೇಕು ಎನ್ನುವ ಹಿರಿಯರ ಆಶಯವನ್ನು ಪೂಜೆಯ ಮೂಲಕ ಹೇಳಲಾಗುತ್ತಿದೆ. ಕಹಿಯಾದ ಮಾತ್ರೆಯನ್ನು ಸಿಹಿಯ ಲೇಪನದಲ್ಲಿ ಮಾಡಿದರೆ ಎಲ್ಲರು ಅದನ್ನ ಸ್ವೀಕರಿಸುತ್ತಾರಲ್ಲವೆ? ಹಾಗೆಯೆ ಈ ಪೂಜೆ ಒಂದು ಸಿಹಿಯ ಲೇಪನ ಅಷ್ಟೇ.

ಓರ್ವ ವೇಷಗಾರನು ಮಾತೆ ಮಹಮ್ಮಾಯಿಯ ಹೊಗಳಿಕೆಯ ಹಾಡನ್ನು ಹಾಡುತ್ತಾನೆ. ಕೊನೆಗೆ ಪೂಜಾರಿಯು ಎಲ್ಲಾ ಕಡೆ ತೀರ್ಥ ಹಾಕಿ ಶುದ್ಧ ಮಾಡುತ್ತಾರೆ. ಮೊಕ್ತೆಸರರು ದೊಡ್ಡ ದೀವಟಿಗೆಯನ್ನು ಗದ್ದುಗೆಯ ದೀಪದಿಂದ ಉರಿಸಿ ಮುಖ್ಯ ದರ್ಶನ ಪಾತ್ರಿಗೆ ನೀಡುತ್ತಾರೆ. ದರ್ಶನ ಪಾತ್ರಿಗೆ ಹೂವಿನ ಹಾರ ಹಾಕುತ್ತಾರೆ. ನಂತರ ಅಡಿಕೆ ಹಿಂಗಾರವನ್ನು ನೀಡಿ ಶುದ್ಧೀಕರಿಸುತ್ತಾರೆ. ಪ್ರತಿಯೊಬ್ಬ ಭಕ್ತಾಧಿಗಳಿಗೂ ಹಿಂಗಾರ ಹೂವನ್ನು ನೀಡುತ್ತಾರೆ. ಆ ವೇಳೆಗೆ ದರ್ಶನ ಪಾತ್ರಿಗೆ ದರ್ಶನ ಪ್ರಾರಂಭವಾಗುತ್ತದೆ. ದರ್ಶನ ಪಾತ್ರಿಯು

ಹಿಂಗಾರವನ್ನು ಮುಖದ ಮೇಲೆಲ್ಲಾ ಉಜ್ಜುತ್ತಾ ಬೆತ್ತದ ಕೋಲಿನಿಂದ ತನ್ನ ಮೈಗೆಲ್ಲಾ ಹೊಡೆದುಕೊಳ್ಳುತ್ತಾನೆ. ದೀವಟಿಗೆಯನ್ನು ಮೈ ಮೇಲೆ ಇಟ್ಟುಕೊಳ್ಳುತ್ತಾನೆ. ಭಕ್ತಾದಿಗಳೆಲ್ಲರೂ ಒಕ್ಕೊರಲಿನಿಂದ ಗೋವಿಂದ...ಗೋವಿಂದ...ಎಂದು ಘೋಷಿಸುತ್ತಾ ಹಿಂಗಾರವನ್ನು ದರ್ಶನಪಾತ್ರಿಯ ಮೇಲೆ ಹಾಕುತ್ತಾರೆ. ಮೊಕ್ತೆಸರರು 'ಅರಿಕೆ' ಮಾಡಿಕೊಳ್ಳುತ್ತಾರೆ. "ನಿಮಗೆ ಸುಖ ಶಾಂತಿಯನ್ನು ದಯಪಾಲಿಸುತ್ತೇನೆಂದು ಅಭಯದಾನ ನೀಡುವುದರೊಂದಿಗೆ ಗೋಂದೋಳು ಪೂಜೆ ಮುಗಿಯುತ್ತದೆ. ನಂತರ ಎಲ್ಲರಿಗೂ ಪ್ರಸಾದ ಹಂಚುತ್ತಾರೆ. ನಂತರ ಎಲ್ಲರೂ ಊರಿನ ಗಡಿಭಾಗಕ್ಕೆ ದೊಂದಿಗಳೊಂದಿಗೆ ಹೋಗಿ ಊರಿನವರು ತಂದಂತಹ ಕೋಳಿಗಳನ್ನು ಬಲಿಕೊಡಲಾಗುತ್ತದೆ. ಇದರಿಂದ ಊರಿನಲ್ಲಿರುವ ಮಾರಿಯನ್ನು ಹೊಡೆದೋಡಿಸು ವಂತಾಗುತ್ತದೆ ಎಂದು ಜನಪದರ ನಂಬಿಕೆಯಾಗಿದೆ. ಹಾಗೆಯೇ ಇಲ್ಲಿನ ಮಾರಿ ಗೋಂದೋಳು ಪೂಜೆಯ ಇನ್ನೊಂದು ವೈಶಿಷ್ಟ್ಯವೆಂದರೆ ಗುಡಿಗೆ ದೇವಿಯ ಮೂರ್ತಿ ಬರುವುದಕ್ಕಿಂತ ಮೊದಲು ಅಲ್ಲಿ (ಸ್ವಲ್ಪ ದೂರದಲ್ಲಿ) ಕೋಳಿ ಅಂಕ ನಡೆಯುತ್ತದೆ. ಗುಡಿಯಲ್ಲಿ ಶ್ರೀದೇವಿಯ ಗದ್ದುಗೆಯೇರಿಸಿದ ತಕ್ಷಣ ಕೋಳಿ ಅಂಕ ಮುಗಿಯುತ್ತದೆ.

ಉಡುಪಿ ಜಿಲ್ಲೆಯಲ್ಲಿ ಕೌಟುಂಬಿಕ ಗೋಂದೋಳು ಪೂಜೆಯು ನಿಯಮ ಪ್ರಕಾರ ನಡೆಯುತ್ತದೆ. ಅಲ್ಲಿ ಮರಾಠಿ - ನಾಯ್ಕರೇ ಎಲ್ಲದರಲ್ಲೂ ಪಾಲ್ಗೊಳ್ಳುತ್ತಾರೆ. 'ಮಾರಿಗೋಂದೋಳು ಪೂಜೆ' ಊರಿಗೆ ಸಂಬಂಧಪಟ್ಟ ಕಾರಣ ಊರಿನವರೆಲ್ಲರೂ ಕೂಡಿಕೊಂಡಿರುತ್ತಾರೆ. ಆದರೂ ಮುಖ್ಯ ಪೂಜಾದಿ ಕಾರ್ಯಗಳೆಲ್ಲಾ ಮರಾಠಿ - ನಾಯ್ಕರೇ ಮಾಡುವುದನ್ನು ಕಾಣಬಹುದು. ಇಲ್ಲಿನ ಗೋಂದೋಳು ಪೂಜೆಗಳಲ್ಲಿ ಅಪರೂಪವಾಗಿ ಹಂದಿಗಳನ್ನು ಬಲಿ ಕೊಡುತ್ತಾರೆ. ಹೆಚ್ಚಾಗಿ ಕೋಳಿ, ಕುರಿ, ಆಡುಗಳನ್ನು ಬಲಿ ಕೊಡುವ ಸಂಪ್ರದಾಯವಿದೆ. ಶ್ರೀದೇವಿಯ ಮೂರ್ತಿಯನ್ನು ಹೊತ್ತುಕೊಂಡು ಹೋಗುವಾಗ ಯಾರು ಏನನ್ನು ಎಲ್ಲಿಗೆ ಕೊಂಡು ಹೋಗುತ್ತಿದ್ದೀರಿ? ಎಂಬ ಪ್ರಶ್ನೆ ಹಾಕಬಾರದೆಂಬ ನಿಯಮ ಸಂಪ್ರದಾಯವಿದೆ.[*] ಅದಕ್ಕಾಗಿ ಕತ್ತಲಾದ ನಂತರವೇ ಮೂರ್ತಿಯನ್ನು ಹೊತ್ತುಕೊಂಡು ನಡೆಯುತ್ತಾರೆ. ಭೌಗೋಳಿಕವಾಗಿ ವ್ಯತ್ಯಾಸ ಕಂಡುಬಂದಂತೆ ಧಾರ್ಮಿಕ ಆಚರಣೆಯಲ್ಲಿಯೂ ವ್ಯತ್ಯಾಸಗಳುಂಟಾಗುವುದನ್ನು ನಾವು ಈ ಮೂಲಕ ತಿಳಿಯಬಹುದು. ತುಳುನಾಡಿನ ದಕ್ಷಿಣದಲ್ಲಿ ಒಂದು ಸಮುದಾಯ ಆಚರಣೆಯಾಗಿ ಕಂಡುಬಂದರೆ ಅದು ಉತ್ತರ ಭಾಗದಲ್ಲಿ ಒಂದು ಊರೇ ಸೇರಿ ಸೌಹಾರ್ದತೆಯಿಂದ ನಡೆಸುವ ನಾಡಿನ ಆಚರಣೆಯಾಗಿ ಬದಲಾವಣೆ ಹೊಂದಿದೆ.

ತುಳುನಾಡಿನ ಬೆಳ್ತಂಗಡಿ, ಉಪ್ಪಿನಂಗಡಿ ಮತ್ತು ಬಂಟ್ವಾಳದ ಕೆಲವು ಪರಿಸರದಲ್ಲಿ ಗೋಂದೋಳು ಪೂಜೆ ಮಾಡುವವರನ್ನು 'ಪೆಟ್ಟಿಗೆಯವರು' ಎಂದು ಕರೆಯುತ್ತಾರೆ. ಕುಣಿತದಲ್ಲಿಯೂ ವ್ಯತ್ಯಾಸಗಳು ಕಂಡುಬರುತ್ತವೆ. ದಕ್ಷಿಣದ ಹಾಡಿಗೂ ಉತ್ತರದ ಹಾಡಿಗೂ ಯಾವುದೇ ಸಾಮ್ಯತೆ ಕಂಡು ಬರುವುದಿಲ್ಲ. ಒಟ್ಟಾರೆಯಾಗಿ ಮಹಾಮಾಯಿಯನ್ನು ಕುರಿತ ಕಥನ ಹಾಡುಗಳಾಗಿ ಕಂಡುಬರುತ್ತದೆ. ಆಯಾಯ ಪ್ರದೇಶಗಳಲ್ಲಿ ಈ ಪೂಜೆಯು ಇತರ ಸಮುದಾಯದ ಮೇಲೆ ಯಾವ ರೀತಿ ಪ್ರಭಾವ ಬೀರಿದೆಯೋ ಅದೇ ರೀತಿ ಇತರ ಕೆಲವೊಂದು ಆಚರಣೆಗಳ ಪ್ರಭಾವವೂ ಗೋಂದೋಳು ಪೂಜೆಯ ಮೇಲೆ ಆಗಿದೆ ಎಂದು ಹೇಳಬಹುದು.

ದೇವಕ್ರಿಯೆ

ಗೋಂದೋಳು ಪೂಜೆಯಲ್ಲಿ ಸಾಮಾನ್ಯವಾಗಿ ಮಧ್ಯಾಹ್ನ ೧೨ಗಂಟೆಯಿಂದ ದೇವಕ್ರಿಯೆಯಿಂದಲೇ ಪೂಜಾ ವಿಧಿವಿದಾನಗಳು ಆರಂಭಗೊಳ್ಳುತ್ತವೆ. ಜ್ಯೋತಿ ಬೆಳಗಿಸಿ ಪ್ರಾರ್ಥನೆಗಳು ನಡೆಯುತ್ತವೆ. ನಂತರ ಸುಮಾರು ಏಳು ಗಂಟೆಗೆ ಮಹತ್ವದ ದೇವಕ್ರಿಯೆಗಳು ಆರಂಭಗೊಂಡು ಮಧ್ಯೆ ಅಸುರಕ್ರಿಯೆಗಳೂ ನಡೆಯುತ್ತವೆ. ಏಳು ಗಂಟೆಗೆ ಮಹಾಮಾಯಿಯ 'ಗದ್ದಿಗೆ ಏರಿಸಿ' ಹೂವು, ಶ್ರೀಗಂಧದ ನೈವೇಧ್ಯಗಳನ್ನು ಸಮರ್ಪಿಸಲಾಗುತ್ತದೆ. ದೇವಕ್ರಿಯೆಯಲ್ಲಿ ಏಕಾರತಿ, ಕೂರ್ಮಾರತಿ, ರಥಾರತಿ, ಕರ್ಪೂರಾರತಿ, ಪಂಚಾರತಿ, ಧೂಪಾರತಿ ಸರ್ಪಾರತಿ ಮತ್ತು ಮಹಾಮಂಗಳಾರತಿ ಹೀಗೆ ಆದಿಯಿಂದ ಅಂತ್ಯದವರೆಗೆ ಸುಮಾರು ೪೮ ಆರತಿಗಳ ಸೇವೆ ನಡೆಯುತ್ತದೆ. ಆದಿಯಲ್ಲಿ ದೇವಕ್ರಿಯೆಯಿಂದಲೇ ಗೋಂದೋಳು ಪೂಜೆ ನಡೆಸುತ್ತಿದ್ದರೆಂದು ತಿಳಿದು ಬರುತ್ತದೆ. (ಕೈತಂಜೆ ನರಸಿಂಹ ಭಟ್ಟ: ೧೯೭೭; ೧೬೮) ಪಂಚಾಮೃತಗಳೆಂದು ಕರೆಯುವ ಹಣ್ಣು, ಹಾಲು, ಸಕ್ಕರೆ, ಜೇನುತುಪ್ಪ, ಸಿಯಾಳ ಇತ್ಯಾದಿ ಬಳಸಲ್ಪಡುತ್ತದೆ. ಮೂಲತ: ಶೈವ ತಾಂತ್ರಿಕಾಚಾರಣೆಯೊಂದಿಗೆ ನಿಕಟ ಸಂಬಂಧ ಹೊಂದಿರುವ ಈ ಆಚರಣೆ ಶಕ್ತಿಯಾರಾಧನೆಯಾಗಿದೆ. ಐತಿಹಾಸಿಕ ಕಾಲಘಟ್ಟವೊಂದರಲ್ಲಿ ವೈದಿಕಾಚರಣೆಯ ಪ್ರಭಾವಕ್ಕೆ ಒಳಗಾಗಿರುವ ಸಾಧ್ಯತೆಯನ್ನು ಇಂದು ಅದರ ತಾಂತ್ರಿಕ ಕ್ರಿಯಾವಿಧಿಗಳಲ್ಲಿ ಕಾಣಬಹುದಾಗಿದೆ. ಮಂಡಲ ಬರೆದು ಮಹಾಮಾಯಿಯನ್ನು ಪ್ರತಿನಿಧಿಸುವ 'ಸತ್ತಿಗೆ', ಕಲಶಗಳು, ತುಳಸಿ, ಕಿಸ್ಕರ ಮತ್ತು ಇತರ ಹೂವಿನಲಂಕಾರಗಳೆಲ್ಲಾ ದೇವಕ್ರಿಯೆಯಲ್ಲಿ ಮಹತ್ವ ಪಡೆದವುಗಳಾಗಿವೆ.

ಅಸುರಕ್ರಿಯೆ

'ಅಸುರಕ್ರಿಯೆ' ಎಂದ ತಕ್ಷಣ ನಮ್ಮ ಮನಪಟಲದಲ್ಲಿ ಪ್ರಾಣಿವಧೆ ಮಾಡುವುದು ಮೂಡಿಬರುತ್ತದೆ. ತುಳುನಾಡಿನ ಅತೀ ಹೆಚ್ಚು ದೈವಗಳ ಆರಾಧನೆಗಳ ಅಸುರಕ್ರಿಯೆಯ ಮೂಲಕವೇ ನಡೆಯುತ್ತವೆ. ಅದಕ್ಕೆ ಈ ಗೋಂದೋಳು ಪೂಜೆಯು ಹೊರತಾಗಿಲ್ಲ. ಜನಪದರು ಅಲೌಕಿಕ ಶಕ್ತಿಯನ್ನು ತೃಪ್ತಿ ಪಡಿಸಲು ರಕ್ತದಿಂದ ಮಾತ್ರ ಸಾಧ್ಯ ಎಂದು ನಂಬಿರುವುದರ ಫಲವಾಗಿ ಈ ಪದ್ಧತಿ ಬೆಳೆದಿರಬೇಕು. ನಾವು ಪೌರಾಣಿಕ ಕಥೆಗಳನ್ನು ನೋಡಿದಾಗ ಪ್ರತಿಯೊಂದು ದೇವ - ದೇವತೆಯರಿಗೆ ಅಂಗರಕ್ಷಕರಂತೆ ಸಹಾಯಕರಂತೆ ಅಸುರರು ಕಂಡುಬರುತ್ತಾರೆ. ಎಲ್ಲಾ ಭಂಟರು ಒಂದೊಂದು ರೀತಿಯಲ್ಲಿ ಸೋಲನ್ನು ಒಪ್ಪಿಕೊಂಡು ವರವನ್ನು ಪಡೆಯುತ್ತಾರೆ. ದೇವ - ದೇವತೆಯರಿಗೆ ಪೂಜೆ ಸಲ್ಲುವ ಸಂದರ್ಭದಲ್ಲಿ ಈ ಭಂಟರೂ ರಕ್ತ ತರ್ಪಣವನ್ನು ಪಡೆದು ಸಂತೃಪ್ತರಾಗುತ್ತಾರೆ.

ಗೋಂದೋಳು ಪೂಜೆಯ ಆಚರಣೆಯ ದಿನ ಸುಮಾರು ಸಂಜೆ ೬ ಗಂಟೆಯಿಂದ ಭೈರವನ ಪೂಜೆಯ ಮೂಲಕ ಅಸುರ ಕ್ರಿಯೆಗಳು ಆರಂಭಗೊಳ್ಳುತ್ತದೆ. ಇಲ್ಲಿ ಮೀನು, ಹುರುಳಿ, ರೊಟ್ಟಿ, ಅನ್ನ, ಇವುಗಳನ್ನು ಎಡೆ ಬಡಿಸಲಾಗುತ್ತದೆ. ನಂತರ ಕೋಳಿಗಳನ್ನು ಬಲಿ ಕೊಡುತ್ತಾರೆ. ನಂತರ ರಾತ್ರಿ ೮ ಗಂಟೆಯ ಸಂದರ್ಭದಲ್ಲಿ ಹಂದಿ ಮತ್ತು ಕೋಳಿಗಳನ್ನು ಬಲಿಯ ರೂಪದಲ್ಲಿ ಅಸುರಕ್ರಿಯೆಯಾಗುತ್ತದೆ. ರಾತ್ರಿ ೮.೪೫ರ ಸಮಯದಲ್ಲಿ ಕೋಳಿ ಮತ್ತು ಹಂದಿಗಳ ಬಲಗಾಲಿನ ಒಂದು ಚಿಕ್ಕ ಭಾಗ (ತುಂಡು)ವನ್ನು ಒಲೆಯಲ್ಲಿ ಸುಟ್ಟು (ಬೇಯಿಸಿ) ದೈವಗಳಿಗೆ ನೈವೇಧ್ಯ ಮಾಡಲಾಗುತ್ತದೆ. ಮಧ್ಯರಾತ್ರಿ ೧೧ಗಂಟೆಗೆ ಭೈರವನಿಗೆ ಎಡೆ ಬಡಿಸಿದರಿಂದ ಸ್ವಲ್ಪ ಸ್ವಲ್ಪ ಮಾಂಸಾಹಾರವನ್ನು ತೆಗೆದು ಒಂದು 'ಸೂಟೆ' (ತೆಂಗಿನ ಸೋಗೆಯ ಕಟ್ಟು) ಯೊಂದಿಗೆ ಮನೆಯಿಂದ ಸ್ವಲ್ಪ ದೂರದಲ್ಲಿ ಹೋಗಿ ಒಂದು ಕಲ್ಲಿನ ಮೇಲಿಟ್ಟು ಬರುತ್ತಾರೆ. ಇದಕ್ಕೆ 'ಭೈರವನ ಗಡಿಪಾರು' ಎಂದು ಕರೆಯಲಾಗುತ್ತದೆ. ಹೀಗೆ ಇವೆಲ್ಲಾ ಈ ಆರಾಧನೆಯಲ್ಲಿ ಕಂಡುಬರುವ ಅಸುರಕ್ರಿಯೆಗಳು.

ದೇವಕ್ರಿಯೆಯಲ್ಲಿ ಭಕ್ತರು ಯಾವ ರೀತಿ ಭಾವಪರವಶರಾಗುತ್ತಾರೋ ಅದೇ ರೀತಿ ಅಸುರಕ್ರಿಯೆಯಲ್ಲಿಯೂ ಭಾವಪರವಶರಾಗುವುದನ್ನು ಕಾಣಬಹುದು. ಪುರಾತನ ಕಾಲದಿಂದಲೂ ಮಾನವ ಪ್ರಕೃತಿಯ ರುದ್ರರಮಣೀಯತೆಯನ್ನು, ಕಂಡು ಅದರೊಳಗಿನ ರಹಸ್ಯಗಳಿಗೆ ತಲೆಬಾಗಿದ. ಅಲ್ಲಿಂದಲೇ ಆರಾಧನಾ ಪದ್ಧತಿಗಳು ಜೀವನದ ಅವಿಭಾಜ್ಯ ಅಂಗಗಳಾಗಿ ಬೆಳೆದವು. ನರಬಲಿ, ಪ್ರಾಣಿಬಲಿಗಳು ಇಲ್ಲಿಂದಲೇ ಪ್ರಾರಂಭವಾಗಿರಬಹುದು. ಯಾವುದೋ ಒಂದು ಅತೀಂದ್ರಿಯವಾದ ಶಕ್ತಿಯನ್ನು ತೃಪ್ತಿಪಡಿಸಿದರೆ ತಮ್ಮ

ಜೀವನವೂ ಸುಖಮಯವಾಗುತ್ತದೆ ಎಂಬ ನಂಬಿಕೆ ಕಲ್ಪನೆಗಳೇ ಬಲಿ ಪದ್ಧತಿಗಳಿಗೆ ಕಾರಣಗಳಾಗಿ ಕಾಣುತ್ತವೆ. ಡಾ. ಸುಶೀಲಾ ಪಿ. ಉಪಾಧ್ಯಾಯರು ಭೂತಾರಾಧನೆಯ ಬಗ್ಗೆ ಹೀಗೆ ಹೇಳುತ್ತಾರೆ.'' ಮನುಷ್ಯಜೀವನದ ಎಷ್ಟೋ ಸತ್ಯಗಳು ವಿಜ್ಞಾನದ ಒರೆಗಲ್ಲಿಗೆ ಹಚ್ಚಿ ಪರೀಕ್ಷಿಸುವಂಥವುಗಳಲ್ಲ ಎಂಬುದನ್ನು ಮಾನವನ ಇತಿಹಾಸದಿಂದ ತಿಳಿಯಬಹುದು. ವಿಜ್ಞಾನ ಬುದ್ಧಿಶಕ್ತಿಗೆ, ದೀಶಕ್ತಿಗೆ ಸಂಬಂಧಿಸಿದ್ದು ನಂಬಿಕೆ, ವಿಶ್ವಾಸ, ಮೌಲ್ಯಗಳು ಮಾನವನ ಹೃದಯಕ್ಕೆ ಸಂಬಂಧಿಸಿದ ಸತ್ಯಗಳು. ಯಾವುದೋ ಒಂದು ಅತೀಂದ್ರಿಯವಾದ ಶಕ್ತಿ ಆತನ ಜೀವನವನ್ನು ಆಶೋತ್ತರಗಳನ್ನು ನಿಯಂತ್ರಿಸುತ್ತದೆ. ವೈಜ್ಞಾನಿಕವಾಗಿ ಅದು ಸತ್ಯವಲ್ಲದಿರಬಹುದು, ಆದರೆ ಅದನ್ನು ಅಲ್ಲಗೆಳೆಯುವ ಸಾಹಸ ಅಂದಿನಿಂದ ಇಂದಿನವರೆಗೆ ಫಲಕಾರಿಯಾಗಿಲ್ಲ, ಮುಂದೆಯೂ ಆಗಲಾರದು. ಇವುಗಳನ್ನು ನಾವು ಮೂಢನಂಬಿಕೆಯೆಂದು ಬರೆಯಬಹುದು. ಆದರೆ ಜನ ಸಾಮಾನ್ಯರ ಬದುಕಿನಲ್ಲಿ ಒಂದಾಗಿ ಬೆರೆತು ನೋಡಿದರೆ ಎಷ್ಟು ಸತ್ಯ ಎಂಬ ಸಾಕ್ಷಾತ್ಕಾರವಾಗದಿಲಾರದು.'' (ಸುಶೀಲಾ ಪಿ. ಉಪಾಧ್ಯಾಯ: ೧೯೮೯: ೭,೮)

ಜನಪದರು ತಮ್ಮ ಯಾವುದೇ ಆಚರಣೆ ಸಂಪ್ರದಾಯಗಳನ್ನು ಎಂದೂ ಸುಲಭವಾಗಿ ಬಿಟ್ಟುಕೊಟ್ಟವರಲ್ಲ. ಉದಾಹರಣೆಗೆ ಬಲಿ ಪದ್ಧತಿ ಇಂದು ಸರಕಾರದ ಕಾನೂನು ಉಲ್ಲಂಘನೆಯಾಗಿರುತ್ತದೆ. ಆದರೆ ಬಲಿಪದ್ಧತಿ ನಡದೇ ತೀರುತ್ತದೆ. ಅದು ಜನಪದರ ಭಾವನಾತ್ಮಕ ಅಂಶಗಳಲ್ಲಿ ಒಂದು ಎಂದು ಹೇಳಬಹುದು. ಮನುಸ್ಮೃತಿಯು ಪ್ರಾಣಿಬಲಿಯ ಕುರಿತು ಹೀಗೆ ಹೇಳುತ್ತದೆ.

ನಾತ್ತಾ ದುಷ್ಯತ್ಯದನ್ನಾದ್ಯಾನ್ಪ್ರಾಣಿನೋ ಹನ್ಯಹನ್ಯಪಿ !
ಧಾತ್ರೈವ ಸೃಷ್ಟಾ ಹ್ಯಾದ್ಯಾಶ್ಚ ಪ್ರಾಣಿನೋತ್ತಾರ ಏವಚ !!

ಪ್ರತಿದಿನವೂ ತಿನ್ನಲಿಕ್ಕೆ ಯೋಗ್ಯವಾದ ಪ್ರಾಣಿಗಳನ್ನೇ ಕೊಂದು ತಿಂದರೆ ಅದು ಅಪರಾಧವಲ್ಲ. ಏಕೆಂದರೆ ತಿನ್ನುವವರನ್ನೂ ಪ್ರಾಣಿಗಳನ್ನೂ ಭಗವಂತನೇ ಸೃಷ್ಟಿ ಮಾಡಿದ್ದಾನೆ.

ಯಜ್ಞಾಯ ಜಗ್ಧಿರ್ಮಾಸಸ್ಯೇತ್ಯೇಷ ದೈವೋ ವಿಧಿ: ಸ್ಮೃತ: !
ಆತೋ ನ್ಯಥಾ ಪ್ರವೃತ್ತಿಸ್ತು ರಾಕ್ಷಸೋ ವಿಧಿರುಚ್ಯತೇ !!

ಯಜ್ಞಕ್ಕಾಗಿ ಪಶುವನ್ನು ಕೊಂದು ಮಾಡಿದ ಮಾಂಸಭಕ್ಷಣವು "ದೈವಿ ಕರೀತಿ" ಯೆಂದು ಹೇಳಲ್ಪಟ್ಟಿದೆ. ಇದಕ್ಕೆ ವಿರುದ್ಧವಾಗಿ ಅನ್ಯ ಸಂದರ್ಭಗಳಲ್ಲಿ ಮಾಡುವ ಅಕಾರಣ ಪಶುವಧೆ ಮತ್ತು ಮಾಂಸ ಭಕ್ಷಣವು "ರಾಕ್ಷಸರೀತಿ" ಎಂದು ಹೇಳಲ್ಪಟ್ಟಿದೆ. (ಶೇಷ ನವರತ್ನ (ಅನು) : ೧೯೮೮)

ಗುರುಪದೇಶ ಮಾಡುವುದು

ಯಾವುದೇ ಆಚರಣೆಯಿರಲಿ ಸಂಪ್ರದಾಯವಿರಲಿ ನಂಬಿಕೆಗಳಿರಲಿ ಅವುಗಳು ಅಸ್ತಿತ್ವಕ್ಕೆ ಬರಲು ಯಾರಾದರೂ ಓರ್ವ ಹಿರಿಯನೋ ದಾರ್ಶನಿಕನೋ ಮೊದಲು ದಾರಿ ತೋರಿಸುವವನಿರುತ್ತಾನೆ. ಹಿಂದಿನ ಕಾಲದಿಂದಲೂ ಜನಪದರಲ್ಲಿ ಹಿರಿಯರಿಗೆ ಅತೀ ಮಹತ್ವದ ಗೌರವ ಸ್ಥಾನಮಾನಗಳು ಇದ್ದವು. ನಾವು ಇತಿಹಾಸ ನೋಡಿದಾಗ ಹಿರಿಯರ, ಗುರುಗಳ ಸಲಹೆಗಳು ಯಾವ ರೀತಿ ಸಹಕಾರಿಯಾಗುತ್ತಿದ್ದವು ಎಂಬುದನ್ನು ಮನವರಿಕೆ ಮಾಡಿಕೊಳ್ಳಬಹುದು. ಗುರುವಿಲ್ಲದೆ ವಿದ್ಯೆ ಇಲ್ಲ ಎಂಬ ಮಾತಿನಂತೆ ಜನಪದ ಆಚರಣೆಗಳಲ್ಲಿ ಗುರುಗಳ ಉಪದೇಶಗಳನ್ನು ಸಲಹೆಗಳನ್ನು ನೋಡಬಹುದು.

ಪ್ರಸ್ತುತ ಗೋಂದೋಳು ಪೂಜೆಯಲ್ಲಿ ಗುರುಪದೇಶ (ಗುರುಮಾರಿಕೆ, ದೇವರಮಾನಿ) ಇಲ್ಲದೆ ಯಾರೂ ಪೂಜೆಯ ಕಾರ್ಯದಲ್ಲಿ ಭಾಗವಹಿಸುವಂತಿಲ್ಲ. ಓರ್ವ ಹಿರಿಯರಿಂದ (ಪೂಜಾರಿ) ಗುರುಪದೇಶ ಪಡೆಯಲಾಗುತ್ತದೆ. ಗುರುಪದೇಶವನ್ನು ಪೂಜೆ ನಡೆಯುವ ಸಂದರ್ಭದಲ್ಲಿ ಪಡೆಯಲಾಗುತ್ತದೆ. ಇದು ಸುಮಾರು ರಾತ್ರಿ ೧೨ ಅಥವಾ ೧೨-೩೦ ರ ಸಮಯದಲ್ಲಿ ನೆರವೇರುತ್ತದೆ. ಪ್ರಥಮವಾಗಿ ಉಪದೇಶ ಪಡೆಯುವ ಮಹಿಳೆ ಅಥವಾ ಪುರುಷರು ಸ್ನಾನ ಮಾಡಿ ಬರುತ್ತಾರೆ. ಅಲ್ಲಿ ನೆರೆದಿರುವ ಅತೀ ಮುಖ್ಯ (ಹತ್ತಿರದ) ಬಂಧು ಬಾಂಧವರಲ್ಲಿ ಕಾಲು ಮುಟ್ಟಿ ನಮಸ್ಕರಿಸಿ "ನಾನು ಗುರುಮಾರಿಕೆ (ಗುರುಪದೇಶ) ಪಡೆಯುತ್ತಿದ್ದೇನೆ" ಎಂದು ಹೇಳಿ ಅಪ್ಪಣೆ ಪಡೆಯುತ್ತಾರೆ. ನಂತರ ಪೂಜಾ ಗದ್ದಿಗೆಯ ಹತ್ತಿರ ಮುಖ್ಯ ಪೂಜಾರಿಗಳು ಕೆಲವೊಂದು ರೀತಿನೀತಿಗಳ ಬಗ್ಗೆ ವಿವರಿಸುತ್ತಾರೆ. ತದನಂತರ ಗುರುವಿನ ಮಡಿಲಲ್ಲಿ ಕುಳಿತು ಕೊಳ್ಳುತ್ತಾರೆ. ಅವರಿಬ್ಬರ ಮೇಲೆ ಬಿಳಿ ಬಟ್ಟೆಯನ್ನು ಹೊದಿಸುತ್ತಾರೆ. ಗುರುಗಳು ಮುಖ್ಯ ಮೂರು ಮಂತ್ರಗಳನ್ನು ಹೇಳುತ್ತಾರೆ. ನಂತರ ಗುರುಗಳಿಗೆ ವಂದಿಸಿ ಆಶೀರ್ವಾದ ಪಡೆಯುತ್ತಾರೆ. ಉಪದೇಶ ಪಡೆದವರು ಎಲ್ಲಿ ಯಾವ ಪೂಜೆಗೆ ಹೋದರೂ ಪ್ರಥಮವಾಗಿ ಗುರುವನ್ನು ನೆನಪಿಸಿ ತೀರ್ಥ ಸ್ವೀಕರಿಸಬೇಕು. ಹೀಗೆ ಅನೇಕ ರೀತಿನೀತಿಗಳನ್ನು ತಿಳಿಸಲಾಗುತ್ತದೆ. ಗುರುಪದೇಶ ಮಾಡಿದ ಗುರುಗಳಿಗೆ ಗೌರವಪೂರ್ವಕವಾಗಿ ಒಂದು ಬಿಳಿ ವಸ್ತ್ರವನ್ನು ಮತ್ತು ರೂ.೧೦-೨೫ರನ್ನು ನೀಡುತ್ತಾರೆ.

೩.೭. ತುಳುನಾಡಿನ ಇತರ ಸಮುದಾಯಗಳಲ್ಲಿ ಗೋಂದೋಳು ಪರಿಕಲ್ಪನೆ

ಕನ್ನಡನಾಡಿನ ಕರಾವಳಿ ಪ್ರದೇಶದ ತುಳುನಾಡಿನ ಗೋಂದೋಳು ಪೂಜೆ ವಿಶಿಷ್ಟವಾದ ಸಂಸ್ಕೃತಿಯ ಪ್ರತೀಕ ಎಂದು ಹೇಳಬಹುದು. ತುಳುನಾಡಿನ ಮರಾಠಿಗರು ಮುಖ್ಯ ಪಾತ್ರ ವಹಿಸುವ ಈ ಗೋಂದೋಳು ಪೂಜೆ ಇತರ ವೈದಿಕೇತರ ಜನಾಂಗದ ಮೇಲೆ ಪ್ರಭಾವ ಬೀರಿದೆ. ತುಳುನಾಡಿನಲ್ಲಿ ಅತೀ ಹಿಂದಿನ ಕಾಲದಲ್ಲಿ ಗೋಂದೋಳು ಪೂಜೆಯನ್ನು ಮರಾಠಿ - ನಾಯ್ಕರು ಮಾತ್ರ ಮಾಡುತ್ತಿದ್ದರು. ಇತರ ಸಮುದಾಯದವರು ಪ್ರೇಕ್ಷಕರಾಗಿದ್ದರು. ಒಂಟಿಯಾಗಿ ಜೀವನ ಮಾಡಲು ಯಾಕೆ ಸಾಧ್ಯವಿಲ್ಲವೋ ಹಾಗೆಯೇ ಒಂದು ಸಮುದಾಯ ಇತರರೊಡನೆ ಬೆರೆಯದೆ ಜೀವನ ಮಾಡುವುದು ಅಸಾಧ್ಯದ ಮಾತು. ಒಂದಲ್ಲ ಒಂದು ರೀತಿಯಲ್ಲಿ ಅವಲಂಬಿತರಾಗಲೇ ಬೇಕು. ಕೊಡುಕೊಳ್ಳುವಿಕೆ ಇರಲೇಬೇಕು. ಈ ನಿಟ್ಟಿನಲ್ಲಿ ಮರಾಠಿ ಸಮುದಾಯವೂ ಅದಕ್ಕೆ ಹೊರತಾಗಿಲ್ಲ. ಕಾಲ ಕ್ರಮೇಣ ಮರಾಠಿ - ನಾಯ್ಕರ ಮನೆಗಳಲ್ಲಿ ನಡೆಯುವ ಪೂಜೆ ಕುಟುಂಬಿಕರಿಗೆ ಸೀಮಿತವಾಗಿದ್ದದ್ದು ಇತರ ಸಮುದಾಯದ ಕುಟುಂಬವೂ ಪಾಲ್ಗೊಳ್ಳುವಂತಾಯಿತು. ಒಂದು ಕಾಲದಲ್ಲಿ ಗೋಂದೋಳು ಪೂಜೆಯನ್ನು ಇತರ ಸಮುದಾಯದವರು ಲಘುವಾಗಿ ಪರಿಗಣಿಸುತ್ತಾ ಅಣಕಿಸುತ್ತಿದ್ದರು ಎಂಬುದಾಗಿ ಕೆಲ ಹಿರಿಯರು ಹೇಳುತ್ತಾರೆ. ಹೆಂಡದೊಂದಿಗೆ (ಶೇಂದಿ, ಶರಾಬು) ಆಚರಿಸುವ ಈ ಪೂಜೆಯನ್ನು ಮರಾಠಿಗರ (ನಾಯ್ಕರ) ಮೋಜಿನಾಟ ಎಂದು ಅಪಹಾಸ್ಯ ಮಾಡಿದವರು ಅನೇಕ ತೊಂದರೆಗಳಿಗೆ ಗುರಿಯಾಗಿದ ನಿದರ್ಶನಗಳು ಬೇಕಾದಷ್ಟು ಕಾಣಸಿಗುತ್ತವೆ. ಪೂಜಾಕಾರ್ಯ ನೆರವೇರಿಸಿ ಸಂತೃಪ್ತ ಜೀವನ ನಡೆಸುವ ಬಯಕೆಯೂ ಬಂದರೆ ಅದರಲ್ಲಿ ತಪ್ಪಿಲ್ಲ. ಅನೇಕ ಕಷ್ಟ ಪರಿಹಾರಕ್ಕಾಗಿ ಪೂಜೆ ನಡೆಸಿದವರು ಅಭಿವೃದ್ಧಿಯ ಪಥದಲ್ಲಿ ಮುನ್ನಡೆದರು. ಹಾಗೆಯೇ ಇತರ ಸಮುದಾಯವೂ ತಮ್ಮ ಕಷ್ಟ ಪರಿಹಾರಕ್ಕೆ ಶ್ರೀ ದೇವಿಯ ಸೇವೆ ಮಾಡುವುದಾಗಿಯೋ, ಅಥವಾ ನಾಯ್ಕರ ಮನೆಯಲ್ಲಿ ಜರುಗುವ ಪೂಜಾಕಾರ್ಯಕ್ಕೆ ಹರಕೆ ರೂಪದಲ್ಲಿ ತೆಂಗಿನೆಣ್ಣೆ, ಹಣ್ಣು ಕಾಯಿ ಇತ್ಯಾದಿ ಸಮರ್ಪಿಸುವುದು ಕಂಡುಬರುತ್ತದೆ.

ಈ ಪೂಜೆಯನ್ನು ವಿಶೇಷವಾಗಿ ಮರಾಠಿಗರೇ ಮಾಡುತ್ತಿರುವವರಾದರೂ ಅವರಂತೆಯೇ ಮಹಾರಾಷ್ಟ್ರಕ್ಕೆ ಸೇರಿದ ಉತ್ತರ ಕೊಂಕಣ ಪ್ರದೇಶದಿಂದ, ವಾಣಿಜ್ಯೋದ್ಯಮಿಗಳಾಗಿ ಬಂದ ಕೊಂಕಣಸ್ಥ ಸಮುದಾಯವೂ ನಡೆಯಿಸುತ್ತಿದ್ದರು ಎಂದು ಶ್ರೀ ಕೈತಂಜೆ ನರಸಿಂಹ ಭಟ್ಟರು ತಮ್ಮ "ಗೋಂದಲ ಪೂಜೆ" ಲೇಖನದಲ್ಲಿ ಹೇಳುತ್ತಾರೆ. ಬ್ರಾಹ್ಮಣರೂ, ಕ್ರಿಶ್ಚಿಯನರೂ ಪೂಜೆ ಮಾಡಿದ ಉದಾಹರಣೆಗಳು ಕಂಡುಬರುತ್ತವೆ ಎಂದು ಲೇಖಕರು ತಿಳಿಸುತ್ತಾರೆ. ತುಳುನಾಡಿನ ದಕ್ಷಿಣ ಪ್ರದೇಶಗಳಲ್ಲಿ ಗೌಡ, ಕುಲಾಲ, ಸುವರ್ಣ (ಪೂಜಾರಿ)

ಇತ್ಯಾದಿ ಇತರ ಸಮುದಾಯಗಳಲ್ಲಿ ಪೂಜೆ ನಡೆದಿವೆ ಹಾಗೂ ಇಂದಿಗೂ ನಡೆಯುತ್ತವೆ. ಉಡುಪಿ ಜಿಲ್ಲೆಯಲ್ಲಿ ಮಾರಿ ಗೋಂದೋಳು ಪೂಜೆಯನ್ನು ಒಂದು ಊರಿನ, ಗ್ರಾಮದ ಒಳಿತಿಗಾಗಿ ಎಲ್ಲಾ ಸಮುದಾಯದವರು ಸೇರಿ ನಡೆಸುತ್ತಾರೆ. ಇತರ ಸಮುದಾಯದ ಎಲ್ಲಾ ಮನೆಗಳಲ್ಲಿಯೂ ಮರಾಠಿ - ನಾಯ್ಕರೇ ಪೂಜಾ ಕಾರ್ಯ ವಿಧಿಗಳನ್ನು ನೆರವೇರಿಸುತ್ತಾರೆ. ಇತರೆ ಪ್ರಾಮುಖ್ಯವಿಲ್ಲದ ಕೆಲಸಗಳನ್ನು ಇತರ ಸಮುದಾಯದವರು ಮಾಡುತ್ತಾರೆ ಇಲ್ಲವೆ ಸಹಕರಿಸುತ್ತಾರೆ. ಪೂಜೆಯ ಪರಿಕರಗಳು ಇರುವುದು ಮರಾಠಿ - ನಾಯ್ಕರಲ್ಲಿ ಮಾತ್ರ. ಒಂದು ವೇಳೆ ಇತರ ಸಮುದಾಯದವರು ತಾನೇ ಮಾಡುತ್ತೇನೆ (ಭೈರವ ಪೂಜೆ, ಮಹಾಮಾಯಿಯ ಪೂಜೆ) ಎಂದು ಮಾಡಲು ಹೊರಟರೆ ಕಷ್ಟಗಳು ಕಟ್ಟಿಟ್ಟ ಬುತ್ತಿ ಎಂದು ಹಿರಿಯ ಜನಪದರು ಹೇಳುತ್ತಾರೆ. ಮತ್ತು ನಿದರ್ಶನಗಳನ್ನೂ ಅನುಭವಗಳನ್ನೂ ಕೊಡುತ್ತಾರೆ.

ಮರಾಠಿ - ನಾಯ್ಕರ ಮನೆಯೊಳಗಡೆ 'ಗದ್ದಿಗೆ ಏರಿಸಿ' ಪೂಜಾಕಾರ್ಯ ನಡೆಸಿದರೆ ಇತರ ಸಮುದಾಯದವರ ಮನೆಯಲ್ಲಿ ಹೊರಗಡೆ ಅಂಗಳದಲ್ಲಿ ಮಾಡುತ್ತಾರೆ. ಕೆಲವೊಂದು ಮನೆಗಳಲ್ಲಿ ಪ್ರತಿವರ್ಷ ಈ ಗೋಂದೋಳು ಪೂಜೆ ಮಾಡಿದರೆ ಇತರರು ಹರಕೆ ಸೇವೆ ರೂಪದಲ್ಲಿ ನಡೆಯುತ್ತದೆ. ಸುಳ್ಯ, ಪುತ್ತೂರು, ಕಾಸರಗೋಡು, ಬಂಟ್ವಾಳ ಪ್ರದೇಶಗಳಲ್ಲಿ ಇತರ ಸಮುದಾಯಗಳಾದ ಗೌಡ, ಕೊಂಕಣಿ. ಕುಲಾಲ್, ಬ್ರಾಹ್ಮಣ ಕುಟುಂಬಗಳ ಸಂಬಂಧಪಟ್ಟ ಸ್ಥಳಗಳಲ್ಲಿ (ಕೃಷಿ ಪ್ರದೇಶ) ಭೈರವ ಬನಗಳು ಕಂಡುಬರುತ್ತವೆ. ಆದುದರಿಂದ ಇಂದಿಗೂ ಅವರು ಪ್ರತಿವರ್ಷ ಒಂದು ಸಲ ನಾಯ್ಕರಿಂದ ಪೂಜೆ ಸಲ್ಲಿಸುತ್ತಾರೆ. ಒಂದು ವರ್ಷ ತಪ್ಪಿದರೆ ಕಷ್ಟಗಳು ದೋಷಗಳು ಕಂಡುಬರುತ್ತವೆ. ಹಾಗೆಯೇ ಮರಾಠಿ - ನಾಯ್ಕರನ್ನು ಬಿಟ್ಟು ಇತರರು ಪೂಜೆ ನಡೆಸಿದರೂ ಅದು ದೋಷಪೂರಿತ ಎಂದು ಕಂಡುಬರುತ್ತದೆ. ಗೌಡ ಸಮುದಾಯದವರು 'ಹಟ್ಟಿಮಾರಿ' ಎಂಬ ಪೂಜೆಯನ್ನು ಹಟ್ಟಿ ಸಮೃದ್ಧಿ (ಜಾನುವಾರು ವೃದ್ಧಿ) ಗಾಗಿ ಅಥವಾ ಕಷ್ಟ ಕಾರ್ಪಣ್ಯಗಳು ಕಂಡು ಬಂದಾಗ ಮಾಡುವ ಸಂಪ್ರದಾಯವಿದೆ. ಭೈರವನ ಬನ (ಕಲ್ಲು) ಇದ್ದು ಪೂಜೆ ಸಲ್ಲಿಸುವವರು 'ಹಟ್ಟಿಮಾರಿ ಪೂಜೆ' ಮಾಡುವುದಿಲ್ಲ. ಸುಳ್ಯ ಪರಿಸರದಲ್ಲಿ ಓರ್ವ ಗೌಡ ಕುಟುಂಬದಲ್ಲಿ ಏಳೆಂಟು ವರ್ಷಗಳ ಮೊದಲು ಹಟ್ಟಿಯಲ್ಲಿದ್ದ ದನ ಕರುಗಳಿಗೆ ಕಾಲು ಕೆರೆದು ಹಟ್ಟಿ ಗೊಬ್ಬರವನ್ನೇ ತಿನ್ನಲಾರಂಭಿಸಿತು. ದೋಷದ ಬಗ್ಗೆ ವಿಚಾರಿಸಿ ಒಂದು ಕೋಳಿಯನ್ನು ಈಡು ಬಿಟ್ಟು ಭೈರವನ ಪೂಜೆ ಮಾಡುವುದಾಗಿ ಹರಕೆ ಹೇಳಿಕೊಂಡರು. ಕಷ್ಟಗಳು ಪರಿಹಾರವಾದವು. ಅಂತೆಯೇ ಭೈರವನ ಪೂಜೆಯ ಜತೆಗೆ ಮಹಾಮ್ಮಾಯಿಯ ಪೂಜೆಯನ್ನೂ ನೆರವೇರಿಸಿದರು. ತದನಂತರ ಪ್ರತಿವರ್ಷವೂ 'ಹಟ್ಟಿಮಾರಿ' ಪೂಜೆಯನ್ನು ನಡೆಸುತ್ತಿರುವುದಾಗಿ ಹೇಳುತ್ತಾರೆ. ಜನಪದರು ಯಾವುದೇ ಒಂದು ಆಚರಣೆಯನ್ನು ಒಳಿತಿಗಾಗಿಯೇ ಸೂಕ್ಷ್ಮವಾಗಿ ಪರಿಶೀಲಿಸಿ

ಮುಂದುವರೆಸಿಕೊಂಡು ಹೋಗುತ್ತಾರೆ. ಒಂದು ಸಮುದಾಯದ ಧಾರ್ಮಿಕ ಆಚರಣೆಯನ್ನು ಇನ್ನೊಂದು ಸಮುದಾಯ ಅತೀ ಸುಲಭವಾಗಿ ಒಪ್ಪಿಕೊಳ್ಳುವುದಿಲ್ಲ. ಸೂಕ್ಷ್ಮವಾಗಿ ಆ ಆಚರಣೆಗಳ ರೀತಿ ನಿಯಮಗಳನ್ನು ಅದರ ಫಲಿತಾಂಶವನ್ನೂ ಕಂಡುಕೊಂಡ ನಂತರವೇ ತಾವು ಅದರ ಮೇಲೆ ಭಯ ಭಕ್ತಿ ನಿಷ್ಠೆ ತೋರಿಸುತ್ತಾ ಆಚರಣೆಯನ್ನು ಜಾರಿಗೆ ತರುತ್ತಾರೆ. ಇದಕ್ಕೆ ಮತ್ತೊಂದು ಭೌಗೋಳಿಕ ಪರಿಸರವೂ ಕಾರಣ ಎಂದು ಹೇಳಬೇಕು. ತುಳುನಾಡಿನ ಮರಾಠಿ - ನಾಯ್ಕರು ಮೊದ ಮೊದಲು ತಮ್ಮ ಕೆಲವೊಂದು ಆಚರಣೆಗಳನ್ನು ಹೊರತುಪಡಿಸಿ ಇತರ ಭೂತಕೋಲ, ಸ್ಥಳ ಮಹಿಮೆ ಹೊಂದಿರುವ ಸಾಂಸ್ಕೃತಿಕ ವೀರರ ಬಗ್ಗೆಗಿನ ಆಚರಣೆಯ ಬಗ್ಗೆ ಗಮನ ಹರಿಸುತ್ತಿರಲಿಲ್ಲ. ಕಾಲಕ್ರಮೇಣ ತುಳುನಾಡಿನ ಭೂತ ಸಂಪ್ರದಾಯ (ಭೌಗೋಳಿಕವಾಗಿ ಕಂಡುಬರುವುದು)ವನ್ನು ಒಪ್ಪಿಕೊಂಡು ಅದರ ಕಾರಣಿಕ (ಮಹಿಮೆ) ಫಲಿತಾಂಶಗಳನ್ನು ತಿಳಿದು ತಾವೂ ಅದರಲ್ಲಿ ಭಾಗಿಯಾಗುವುದನ್ನು ಕಾಣುತ್ತೇವೆ. ಇದು ಎಲ್ಲಾ ಸಮುದಾಯಕ್ಕೂ ಅನ್ವಯಿಸುತ್ತದೆ.

ಹೀಗೆಯೇ ಈ ಗೋಂದೋಳು ಪೂಜೆ ತುಳುನಾಡಿನಲ್ಲಿ ಒಂದು ವಿಶಿಷ್ಟ ಆಚರಣೆಯಾಗಿದ್ದು ಸಂಸ್ಕೃತಿಯ ಮೇಲೆ ಪ್ರಭಾವ ಬೀರಿ ಬಹುದೊಡ್ಡ ನಾಡಹಬ್ಬವಾಗಿ ಕಂಡುಬಂದರೆ ಆಶ್ಚರ್ಯವಿಲ್ಲ. ಈ ಆಚರಣೆ ಇತರ ವೈದಿಕರ ಹಾಗೂ ವೈದಿಕೇತರ ಮೇಲೂ ಪ್ರಭಾವ ಬೀರಿದೆ.

ಅದಿ ಟಿಪ್ಪಣಿಗಳು

೧. ಕರ್ನಾಟಕದಲ್ಲಿ 'ಗೊಂದಲಿಗರು' 'ಗೋಂದಲ' ಹುಟ್ಟಿತು ಮತ್ತು ಯಾದವರ ಕಾಲದ ಶಾಂಙ್ಞದೇವನ ಅಭಿಮತ, ನಾಗಚಂದ್ರ ಕವಿಯ ಮಲ್ಲಿನಾಥ ಪುರಾಣ, ಪಾಲ್ಕುರಿಕೆ ಸೋಮನಾಥ ಮುಂತಾದ ಗ್ರಂಥಗಳಲ್ಲಿ ಉದಾಹರಣೆಗಳಿವೆ. (ಮುದೇನೂರು ಸಂಗಣ್ಣ, ೧೯೯೩, ಪುಟ ೨೩ - ೨೪)

೨. ಪ್ರಾಚೀನ ಮರಾಠಿ ಕಾವ್ಯ ಮುಖ್ಯ ಮೂರು ಸ್ವರೂಪಗಳನ್ನು ಹೊಂದಿದೆ. ಸಂತಕಾವ್ಯ, ಪಂಡಿತೀ ಕಾವ್ಯ ಮತ್ತು ಶಾಹಿರೀ ಕಾವ್ಯ. ಪೋವಾಡಿ ಮತ್ತು ಲಾವಣಿ ಶಾಹಿರೀಯ ಎರಡು ಪ್ರಕಾರಗಳು. ಪೋವಾಡೆ ಕವನಗಳ ಹುಟ್ಟು ಧರ್ಮದ ಮೂಲಕ ಮಹಾರಾಷ್ಟ್ರದಲ್ಲಿ ಧಾರ್ಮಿಕ ದಿನಾಚರಣೆ ಮತ್ತು ಕುಲಧರ್ಮಗಳ ಪರಿಪಾಲನೆಗಳ ಸಾಂಪ್ರದಾಯಿಕ ರೂಢಿಯಲ್ಲಿ 'ಗೋಂಧಳ ಹಾಕಿಸುವುದು' ಎಂಬ ಪ್ರಕಾರವಿತ್ತು. ಗೋಂಧಳದ ಆರಂಭ ಈಶ್ವರನ ಸ್ತುತಿಯಿಂದ. ಸಂತ ನಾಮದೇವನಿಗಿಂತ ಮೊದಲೇ ಗೋಂಧಳ ಪ್ರಚಾರದಲ್ಲಿತ್ತು. (ಡಾ. ಎಸ್.ಎಸ್.ಬ್ಯಾತನಾಳ, ೧೯೮೧, ಪುಟ ೧ - ೪)

೩. ಕಾಸರಗೋಡಿನಲ್ಲಿ ವಲಸಿಗರಾಗಿ ಬಂದು ನೆಲೆಸಿದ ಕರ್ಹಾಡ ಬ್ರಾಹ್ಮಣರು ವೈದಿಕ ರೀತಿಯಲ್ಲಿ (ದೇವಕ್ರಿಯೆ) 'ಗೋಂದಾಲ್' ಎಂಬ ಕುಣಿತವಿರುವ ಪೂಜೆ ಮಾಡುತ್ತಿದ್ದರು. (ಕೃ.ಭ.ಪೆರ್ಲ, ೧೯೯೦, ಪುಟ ೩೬೦)

೪. ಇಂತಹುದೇ ಬ್ರಾಹ್ಮಣ್ಯದ ನಿರಾಕರಣೆಯನ್ನು ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ಪುತ್ತೂರು ಬೆಳ್ತಂಗಡಿ ತಾಲೂಕುಗಳಲ್ಲಿನ ಗೌಡ ಸಮುದಾಯದವರು ಸುಗ್ಗಿ ಹುಣ್ಣಿಮೆಯ ಸಂದರ್ಭದಲ್ಲಿ ಕುಣಿದು ಅಚರಿಸುವ 'ಸಿದ್ಧವೇಷ'ದಲ್ಲಿ ಕಾಣಬಹುದು. (ಡಾ. ಪುರುಷೋತ್ತಮ ಬಿಳಿಮಲೆ, ೧೯೯೦, ಪುಟ ೨೭)

೫. ಹಾಗೆ ಕೇಳಿದರೆ ಅಪಶಕುನವಾಗುತ್ತದೆ. ಆದುದರಿಂದಲೇ ರಾತ್ರಿಯ ವೇಳೆ ಗದ್ದುಗೆಯಿಂದ ಮಹಮ್ಮಾಯಿಯ ಮೂರ್ತಿ ಕೊಂಡೊಯ್ಯುತ್ತಿರುವಾಗ ಯಾರು ಯಾವುದೇ ಪ್ರಶ್ನೆ ಹಾಕುವುದಿಲ್ಲ. ರಾತ್ರಿ ಸಮಯ ಹೋಗುವಾಗ ಹಿಂದೆ ತಿರುಗಿ ನೋಡಬಾರದೆಂಬ ನಂಬಿಕೆಯೂ ತುಳುನಾಡಿನಲ್ಲಿದೆ.

ಅಧ್ಯಾಯ : ೪

ಮರಾಠಿಗರ ಇತರ ಆಚರಣೆಗಳು

ಅಧ್ಯಾಯ : ೪

ಮರಾಠಿಗರ ಇತರ ಆಚರಣೆಗಳು

ಈ ಮೊದಲೇ ತಿಳಿಸಿರುವಂತೆ ಮರಾಠಿ - ನಾಯ್ಕರು ಹೊರನಾಡಿನಿಂದ ವಲಸೆಬಂದು ತುಳುನಾಡಿನಲ್ಲಿ ನೆಲೆಯೂರಿದವರು. ಇವರ ಹಬ್ಬದ ಆಚರಣೆಗಳು, ಧಾರ್ಮಿಕ ಆಚರಣೆಗಳು ಹಾಗೂ ಇತರ ಆಚರಣೆಗಳು ಎಲ್ಲವೂ ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬಂದ ಭಾವನಾತ್ಮಕ ಆಚರಣೆಗಳಾಗಿವೆ. ಇವರಲ್ಲಿ ಗೋಂದೋಳು ಪೂಜೆಯ ಜತೆಗೆ ಇತರ ಅನೇಕ ವಿಶಿಷ್ಟವಾದ ಆಚರಣೆಗಳನ್ನು ನಾವು ಕಾಣಬಹುದು. ಮೂಲ ಮರಾಠಿ ಭಾಷೆ ಮಾತನಾಡಿದರೂ ತದನಂತರ ತುಳುನಾಡಿನ ತುಳು ಸಂಸ್ಕೃತಿಗೆ ಹೊಂದಿಕೊಂಡು ತುಳುವರಲ್ಲಿ ಒಂದಾಗಿದ್ದಾರೆ. ಮರಾಠಿ ಭಾಷೆಯನ್ನು ಬಿಟ್ಟು ಕನ್ನಡ ಭಾಷೆಯನ್ನು, ತುಳುಭಾಷೆಯನ್ನು ಮನೆ ಭಾಷೆಯನ್ನಾಗಿ ಮಾಡಿಕೊಂಡಿದ್ದಾರೆ. ಕಾಸರಗೋಡು, ಸುಳ್ಯ, ಬಂಟ್ವಾಳ ಪ್ರದೇಶಗಳಲ್ಲಿನ ಮರಾಠಿ - ನಾಯ್ಕರು ಈಗಲೂ ಮರಾಠಿ ಭಾಷೆಯನ್ನೇ ಉಳಿಸಿಕೊಂಡು ಬಂದಿದ್ದಾರೆ. ತುಳುನಾಡಿನಲ್ಲಿದ್ದುಕೊಂಡು ತಮ್ಮ ಮೂಲ ಆಚರಣೆಗಳನ್ನು ಬಿಟ್ಟುಬಿಡದೇ ತುಳುನಾಡಿನ ಇತರ ಆಚರಣೆಗಳನ್ನು ಒಂದಾಗಿ ಆಚರಿಸುವ ಮೂಲಕ ವಿಶಿಷ್ಟತಮದಿಂದ ಕೂಡಿದ ಒಂದು ಸಮುದಾಯವಾಗಿದೆ. ಇವರ ಆಚರಣೆಗಳನ್ನು ಜೀವನಾವರ್ತನ ಆಚರಣೆಗಳು ಮತ್ತು ವಾರ್ಷಿಕಾವರ್ತನ ಆಚರಣೆಗಳು ಎಂಬುದಾಗಿ ವಿಂಗಡಿಸಬಹುದು.

೪.೧. ಜೀವನಾವರ್ತನ ಆಚರಣೆಗಳು

ಮರಾಠಿ - ನಾಯ್ಕರ ಕುಟುಂಬದಲ್ಲಿನ ಹುಡುಗಿ ಮೈನೆರೆದಾಗ 'ಮದಿಮಾಲ್ ಆಯಳ್' (ಮಧುಮಗಳಾದಳು) ಎಂದು ತುಳುಭಾಷೆಯಲ್ಲಿ ಹೇಳುತ್ತಾರೆ. ಈ ಸಂದರ್ಭದಲ್ಲಿ ಹುಡುಗಿ ಮೂರು ದಿನ ಮನೆಯೊಳಗೆ ಪ್ರವೇಶಿಸುವಂತಿಲ್ಲ. ಈ ಸಮಯದಲ್ಲಿ ಕೊಟ್ಟಿಗೆಯಲ್ಲಿ ಇರುತ್ತಾರೆ. ನಾಲ್ಕನೇ ದಿವಸ ಸ್ನಾನ ಮಾಡಿ ಮನೆ ಪ್ರವೇಶಿಸಬಹುದು. ಹಿಂದಿನ ಕಾಲದಲ್ಲಿ ಆಡಂಬರವಾಗಿ 'ಋತುಶಾಂತಿ' ('ಮದಿಮಲೆ ಮದಿಮೆ',

'ಕರ ಪತ್ತಪುನಿ' (ಮಡಕೆ ಹಿಡಿಸುವುದು) ಕಾರ್ಯಕ್ರಮ ಇಟ್ಟುಕೊಳ್ಳುತ್ತಿದ್ದರು. ಅಪರೂಪವಾಗಿ ಋತು ಶಾಂತಿಯ ಕರಪತ್ರ ಮುದ್ರಿಸಿದ ನಿದರ್ಶನವೂ ಇದೆ. ಬಂಧುಬಳಗದವರನ್ನು, ನೆರೆಕರೆಯವರನ್ನು ಆಹ್ವಾನಿಸಿ ಭೋಜನಕೂಟ ಏರ್ಪಡಿಸುತ್ತಿದ್ದರು. ಕ್ರಮೇಣ ಅದೆಲ್ಲಾ ನೇಪಥ್ಯಕ್ಕೆ ಸರಿದವು. ಇಂದು ಅಂಥ ಯಾವುದೇ ಕಾರ್ಯಕ್ರಮ ಇಲ್ಲ. ಋತುಮತಿಯಾದ ನಾಲ್ಕನೇ ಅಥವಾ ಐದನೇ ದಿವಸದ ನಂತರ ಊರಿನ ಅಥವಾ ಹತ್ತಿರದ ದೇವಾಲಯಕ್ಕೆ ಹೋಗಿ ಕಲಶಸ್ನಾನ ಮಾಡಿ ಬರುತ್ತಾರೆ.

ಮದುವೆ ಸಮಾರಂಭವೂ ಮರಾಠಿಗರಲ್ಲಿ ಆಡಂಬರದಿಂದ ಕೂಡಿತ್ತು. ಒಂದು ಮದುವೆ ಮಂಗಲ ಕಾರ್ಯವು ಸುಮಾರು ಏಳು ದಿನಗಳವರೆಗೆ ನಡೆಯುತ್ತಿತ್ತು. ಇವರಲ್ಲಿ ಸುಮಾರು ಹನ್ನೆರಡು ಬಳಿ (ಗೋತ್ರ)ಗಳು ಕಂಡುಬರುತ್ತವೆ. ಒಂದೇ ಬಳಿಯ (ಗೋತ್ರ)ವರಲ್ಲಿ ಮದುವೆ ಸಂಬಂಧ ನಡೆಯಕೂಡದು. ಒಂದು ವೇಳೆ ನಡೆದಲ್ಲಿ ಅಂಥವರನ್ನು ಜಾತಿಯಿಂದ ಬಹಿಷ್ಕರಿಸುವ ಪದ್ಧತಿ ಅತೀ ಹಿಂದಿನ ಕಾಲದಲ್ಲಿ ಇತ್ತು. ಆದರೆ ಈಗ ಅಂಥ ಪದ್ಧತಿ ಕಂಡುಬರುವುದಿಲ್ಲ. ಕೆಲವೊಂದು ಪ್ರದೇಶಗಳಲ್ಲಿ ವಿಧವಾ ವಿವಾಹ ನಡೆದರೆ ಮತ್ತೆ ಕೆಲವು ಭಾಗಗಳಲ್ಲಿ ನಿಷೇಧ ಕಂಡುಬರುತ್ತದೆ. ಮದುವೆಯಲ್ಲಿ ವರದಕ್ಷಿಣೆ ಪದ್ಧತಿ ಪ್ರಚಲಿತದಲ್ಲಿದೆ. ಆದರೆ ಇದು ಈಗ ಕಡಿಮೆ ಸಂಖ್ಯೆಯಲ್ಲಿದೆ.

ಹಿಂದಿನ ಕಾಲದ ಏಳು ದಿನಗಳ ಮದುವೆ ಸಮಾರಂಭಗಳಲ್ಲಿ ಪ್ರಮುಖವಾದುದು. ನೂತನ ಪತಿ - ಪತ್ನಿ ಖಡ್ಡಾಯವಾಗಿ ಅನೇಕ ವಿಧದ ಆಟಗಳಲ್ಲಿ ಭಾಗವಹಿಸಬೇಕಿತ್ತು. ಅನೇಕ ನೀತಿಭೋದಕ ಹಾಸ್ಯಭರಿತ ಕ್ರೀಡೆಗಳನ್ನು ಆಡಬೇಕು ಎಂದು ಹಿರಿಯರು ನೆನಪಿಸಿಕೊಳ್ಳುತ್ತಾರೆ. ನೂತನ ಪತಿ - ಪತ್ನಿಯರಿಗೆ ಯಾವುದೇ ರೀತಿಯಲ್ಲಿ ಪರಿಚಯ, ಗುಣನಡತೆ ತಿಳಿದಿರುವುದಿಲ್ಲ. ಮದುವೆಯ ನಂತರ ತಕ್ಷಣ ಅವಿಭಕ್ತ ಕುಟುಂಬಗಳಲ್ಲಿ ನವವಧು ಜೀವನ ನಡೆಸಬೇಕಾಗಿತ್ತು. ಒಂದು ರೀತಿಯಲ್ಲಿ ಅವಳಿಗೆ ಭಯದ ವಾತಾವರಣ ನಿರ್ಮಾಣವಾಗುವುದರಲ್ಲಿ ಸಂಶಯವಿಲ್ಲ. ಈ ಎಲ್ಲವುಗಳನ್ನು ನಿವಾರಿಸಲು ಇಂತಹ ಕ್ರೀಡೆಗಳು ಸಹಕಾರಿಯಾಗುತ್ತಿತ್ತು. 'ಅಡಿಕೆ ಕಾಯಿ ಆಟ', 'ಮೀನು ಹಿಡಿಯುವ ಆಟ', 'ಒನಕೆ ಹಿಡಿದು ಭತ್ತ ಕುಟ್ಟುವ ಆಟ' ಹೀಗೆ ಅನೇಕ ರೀತಿಯ ಆಟಗಳು ನೂತನ ವಧುವರನನ್ನು ಮನೋರಂಜನಾತ್ಮಕತೆಯಿಂದ ತಿಳುವಳಿಕೆಗೆ ಒಳಪಡಿಸುತ್ತಿದ್ದವು. ಹಿಂದಿನ ಕಾಲದಲ್ಲಿ ವಿವಾಹ ವಿಚ್ಛೇದನೆ ಎಂಬ ಕ್ರಮವೇ ಇರಲಿಲ್ಲ. ಅವಕಾಶವೂ ಇಲ್ಲ. ಗಂಡ ಹೆಂಡತಿ ಏನೇ ಎಷ್ಟೇ ಕಷ್ಟಗಳು ಬಂದರೂ ಹೊಂದಿಕೊಂಡು ಹೋಗಬೇಕೆಂಬುದೇ ಕ್ರೀಡೆಗಳ ಆಶಯವಾಗಿದೆ. ಇಂದು ಕೇವಲ ಒಂದೆರಡು ದಿನಗಳಲ್ಲಿ ಮದುವೆ ಎಂಬ ಮಂಗಲ ಕಾರ್ಯ

ಮುಗಿದುಹೋಗುತ್ತದೆ. ಮದುವೆಗೆ ಮೊದಲು ಹುಡುಗ ಹುಡುಗಿಯರ ಮನೆಯಲ್ಲಿ ತಲಾ ಒಂದು ಸಾರಿ ಸತ್ಕಾರ ಕೂಟ ನಡೆಯುತ್ತದೆ. ಮದುವೆಯ ನಂತರ ಎರಡು ಮನೆಯ ಅತ್ತೆಯರಿಗೆ ವಿಶೇಷವಾಗಿ 'ಸತ್ಕಾರ ಕೂಟ' ('ಮಾಮಿ ಸಮ್ಮಾನ') ಏರ್ಪಟ್ಟರೆ ಮುಗಿಯಿತು. ಹಿಂದಿನ ಕಾಲದಲ್ಲಿ ಮದುವೆ ನಂತರ ಮೊದಲನೆಯದಾಗಿ ದೇವಾಲಯಕ್ಕೆ ನೂತನ ದಂಪತಿಗಳು ಹೋಗಿ ದೇವರ ದರ್ಶನ ಪಡೆದು ಪೂಜೆ ಸಲ್ಲಿಸಿದರೆ ಇಂದು ಪ್ರವಾಸ ಹೊರಡುತ್ತಾರೆ. ಜನಪದರು ಪ್ರತಿಯೊಂದು ಕಾರ್ಯವನ್ನು ಮುಂದಾಲೋಚನೆಯಿಂದ ಅದರ ಫಲಿತಾಂಶವನ್ನು ಗ್ರಹಿಸಿ ಮುನ್ನಡೆಯುತ್ತಿದ್ದರು. ಅಂತಹ ಎಲ್ಲಾ ಆಚರಣೆಗಳು ಕಾರ್ಯಕ್ರಮಗಳು ಇಂದಿಗೂ ಆಧುನಿಕರಿಗೆ ದಾರಿದೀಪಗಳಾಗಿವೆ.

ಮರಾಠಿಗರಲ್ಲಿ ಮದುವೆಯಾಗಿ ಪ್ರಥಮ ಗರ್ಭಿಣಿಯಾಗಿ ಏಳನೇ ತಿಂಗಳಲ್ಲಿ ಗಂಡನ ಮನೆಯಲ್ಲಿಯೇ "ಬಯಕೆಯ ಮದುವೆ" ಎಂಬ ಮಂಗಲ ಕಾರ್ಯ ನಡೆಯುತ್ತದೆ. ಆ ದಿನ ಬಂಧು ಬಳಗದವರು ಹತ್ತಿರದವರೆಲ್ಲಾ ಆಮಂತ್ರಿಸಲ್ಪಡುತ್ತಾರೆ. ದೀಪ ಬೆಳಗಿಸಿ ಹಿರಿಯರು ಪ್ರಾರ್ಥನೆ ಮಾಡುತ್ತಾರೆ. ಯಾವುದೇ ರೀತಿಯ ವಿಘ್ನಗಳು ಬರದೇ ಸುಖವಾಗಿ ಪ್ರಸವವಾಗಬೇಕೆಂದು ಕುಲದೈವ ದೇವರುಗಳಲ್ಲಿ ಗತಿಸಿದ ಗುರುಹಿರಿಯರಲ್ಲಿ ಅರಿಕೆ ಮಾಡಿಕೊಳ್ಳುತ್ತಾರೆ. ತವರು ಮನೆಯವರು ವಿಶೇಷವಾಗಿ ತಿಂಡಿ ತಿನಿಸುಗಳನ್ನು ಮನೆಯಿಂದಲೇ ತಂದು ಬಡಿಸಬೇಕಾಗುತ್ತದೆ. ಹಾಗೆಯೇ ಎಲ್ಲಾ ತರಹದ ತಿಂಡಿತಿನಿಸುಗಳನ್ನು ಮೊದಲು ಗರ್ಭಿಣಿಗೆ ಬಡಿಸಲಾಗುತ್ತದೆ. ಸಂಪ್ರದಾಯದಂತೆ ಓರ್ವ ಸ್ತ್ರೀಯನ್ನು ಒಬ್ಬಂಟಿಯಾಗಿ ಬಿಡದೆ ಮತ್ತು ಇತರ ನೆರೆದಿರುವ ಮಕ್ಕಳು ಆಸೆ ಪಡದಂತೆ ಗರ್ಭಿಣಿಯ ಜತೆಗೆ ಚಿಕ್ಕ ಹುಡುಗ - ಹುಡುಗಿಯನ್ನು ಕುಳ್ಳಿರಿಸಿ ಅವರಿಗೂ ಬಡಿಸಲಾಗುತ್ತದೆ. ನಂತರ ಭೋಜನದೊಂದಿಗೆ ಸಮಾರಂಭ ಮುಗಿಯುತ್ತದೆ. ತವರು ಮನೆಯವರು ಗರ್ಭಿಣಿಯನ್ನು ಜತೆಗೆ ಮನೆಗೆ ಕರೆದುಕೊಂಡು ಹೋಗುತ್ತಾರೆ. ಪ್ರವಸದ ತನಕ ಅಲ್ಲಿಯೇ ಇರುತ್ತಾಳೆ.

ಕುಟುಂಬದಲ್ಲಿ ಮಗುವಿನ ಜನನವಾದ ಹನ್ನೊಂದನೇ ದಿನದಲ್ಲಿ ತೊಟ್ಟಿಲು ತೂಗುವ ಕಾರ್ಯಕ್ರಮವಿದೆ. ಅದಕ್ಕೆ ತುಳುನಾಡಿನ ದಕ್ಷಿಣಭಾಗದಲ್ಲಿ 'ಅಮೆ' (ತುಳು ಭಾಷೆಯಲ್ಲಿ) ಎಂದು ಕರೆಯುತ್ತಾರೆ. ಮರುದಿನ ಮಗುವಿನ ನಾಮಕರಣ ನಡೆಯುತ್ತದೆ. ಜನನದ ದಿನದಂದು ನಾಮಕರಣದ ತನಕ ಹನ್ನೆರಡು ದಿನಗಳು ನಿಷಿದ್ಧ (ಸೂತಕ)ದ ದಿನಗಳಾಗಿವೆ. ಈ ಸಮಯದಲ್ಲಿ ಕುಟುಂಬದವರು ಯಾವುದೇ ಮಂಗಲ ಸಮಾರಂಭಕ್ಕೆ ಹೋಗುವಂತಿಲ್ಲ. ದೇವಾಲಯಗಳಿಗೆ ಹೋಗುವುದಿಲ್ಲ. ಬಹಳ ಕಟ್ಟುನಿಟ್ಟಾಗಿ ಈ ನಿಯಮಗಳನ್ನು ಪಾಲಿಸಲಾಗುತ್ತದೆ.

ಕುಟುಂಬದಲ್ಲಿ ಸಾವು ಸಂಭವಿಸಿದಾಗ ಬಂಧು ನೆಂಟರಿಗೆ ಹಾಗೂ ಹತ್ತಿರದವರಿಗೆ ಸುದ್ದಿ ಮುಟ್ಟಿಸಲಾಗುತ್ತದೆ. ಮನೆಯ ಒಳಗೆ ಶವದ ತಲೆ ಮತ್ತು ಕಾಲುಗಳ ಹತ್ತಿರ ದೀಪ ಉರಿಸಲಾಗುತ್ತದೆ. ಎರಡು ಕಡೆಯೂ ಕುಳಿತುಕೊಂಡಿರುತ್ತಾರೆ. ಯಾವುದೇ ಸಮಯದಲ್ಲಿ ಶವವನ್ನು ಒಂಟಿಯಾಗಿ ಬಿಡಬಾರದೆಂಬ ನಂಬಿಕೆಯಿದೆ. ಬಂಧು ಬಾಂಧವರು ತಂದಂತಹ ಒಂದೊಂದು ಬಿಳಿ ಬಟ್ಟೆಯನ್ನು ತಂದು ಶವದ ಮೇಲೆ ಹೊದಿಸಲಾಗುತ್ತದೆ. ಎಲ್ಲರೂ ಬಂದ ಮೇಲೆ ಶವವನ್ನು ಹೊರಗೆ ಅಂಗಳದಲ್ಲಿ (ಮನೆಯ ಮಾಡಿನ ಕೆಳಗಡೆ) ಸ್ನಾನ ಮಾಡಿಸುತ್ತಾರೆ. ನಂತರ ಬಟ್ಟೆ ತೊಡಸಿ ಶವದ ಬಾಯಿಗೆ ಎಲ್ಲರೂ (ಅತೀ ಸಮೀಪವರ್ತಿಗಳು, ಮನೆಯವರು) ಆಹಾರ ಕೊಡುತ್ತಾರೆ. ನಂತರ ದಹನ ಮಾಡುತ್ತಾರೆ. ಮೂರನೇ ದಿನ 'ಬೂದಿ ಮುಚ್ಚುವ' ಕಾರ್ಯ ನಡೆಯುತ್ತದೆ. ಹಿರಿಯರು ಬಂದು ಬೂದಿಯನ್ನು ರಾಶಿಮಾಡಿ ಮೇಲ್ಮೈಯಲ್ಲಿ ಮಣ್ಣು ಮಾಡುತ್ತಾರೆ. ಅದರ ಮೇಲೆ 'ಸರೋಳಿ' ಗಿಡದ ಕೊಂಬೆ (ಗೆಲ್ಲು)ಯನ್ನು ನೆಡುತ್ತಾರೆ. ಜತೆಗೆ ಒಂದು ತುಳಸಿಗಿಡವನ್ನು ನೆಡುತ್ತಾರೆ. ಹನ್ನೊಂದನೆಯ ದಿನದಂದು 'ಶುದ್ಧ ಆಗುವ ದಿನ' ಅಂದು ಕುಟುಂಬದವರು ಮನೆಯಲ್ಲಿನ ಬಟ್ಟೆ ಬರೆ ಪಾತ್ರೆ ಪಗಡೆ ಹೀಗೆ ಎಲ್ಲವನ್ನೂ ತೊಳೆದು ಹಾಕುತ್ತಾರೆ. ದೇವಾಲಯದಿಂದ ಪುಣ್ಯಾರ್ಚನೆ ತೀರ್ಥ ತಂದು ಸ್ನಾನ ಮಾಡಿ ಮನೆಯೊಳಗಡೆ ಪಾತ್ರೆಗಳ ಮೇಲೆ ಚಿಮುಕಿಸಲಾಗುತ್ತದೆ. ಅಂದಿಗೆ ಹನ್ನೊಂದು ದಿನಗಳ ಸೂತಕಗಳ (ನಿಷಿದ್ಧ) ದಿನಗಳು ಮುಗಿಯುತ್ತದೆ. ಮರುದಿನ ಹನ್ನೆರಡನೇ ದಿನದಂದು ಸದ್ಗತಿ ಕಾರ್ಯ ನಡೆಯುತ್ತದೆ. ಬಂಧುಗಳು ನೆಂಟರು ವಿವಿದ ತಿಂಡಿತಿನಿಸುಗಳನ್ನು ತರುತ್ತಾರೆ. ಎಲ್ಲವನ್ನೂ ದಹನ ಮಾಡಿದಲ್ಲಿಗೆ ತೆಗೆದುಕೊಂಡು ಹೋಗಿ ಬಡಿಸಿ ಪ್ರಾರ್ಥನೆ ಮಾಡಲಾಗುತ್ತದೆ. ನಂತರ ಮನೆಯಲ್ಲಿ ದೀಪ ಉರಿಸಿ ಪ್ರಾರ್ಥಿಸಿ ಗತಿಸಿದವರ ಹೆಸರಿನಲ್ಲಿ ಅನ್ನ - ಸಂತರ್ಪಣೆ ನಡೆಯುತ್ತದೆ.

ಪ್ರತಿ ವರ್ಷ ಕಾರ್ತೆಲ್ (ಜೂನ್ - ಜುಲೈ) ತಿಂಗಳಿನ ಹುಣ್ಣಿಮೆಯಂದು ಶ್ರಾದ್ಧ ನಡೆಸಲಾಗುತ್ತದೆ. ಅಂದು ಕುಟುಂಬದಲ್ಲಿ ಈ ಮೊದಲು ಗತಿಸಿ ಹೋದವರೆಲ್ಲರಿಗೂ 'ಅಗೆಲು' ಬಡಿಸಲಾಗುತ್ತದೆ. ಮನೆಯಲ್ಲಿ ಬಂಧುಗಳು ನೆಂಟರಿಷ್ಟರು ಸೇರಿರುತ್ತಾರೆ. ದೀಪವಿರಿಸಿ ಪ್ರಾರ್ಥನೆ ಸಲ್ಲಿಸಲಾಗುತ್ತದೆ. ಸೇವೆಯನ್ನು ಸ್ವೀಕರಿಸಿ ಕುಟುಂಬದ ಎಲ್ಲಾ ಕಾರ್ಯಗಳಿಗೆ ಬೆಂಗಾವಲಾಗಿರಬೇಕೆಂದು, ತಮ್ಮನ್ನು ಉದ್ಧರಿಸಬೇಕೆಂದು ಹಿರಿಯವರಲ್ಲಿ ಅರಿಕೆ ಮಾಡುತ್ತಾರೆ. ಊಟದೊಂದಿಗೆ ಕಾರ್ಯಕ್ರಮ ಮುಗಿಯುತ್ತದೆ.

ವಾರ್ಷಿಕಾವರ್ತನ ಆಚರಣೆಗಳು

ತುಳುನಾಡಿನ ಮರಾಠಿ ಸಮುದಾಯದವರು ತುಳುನಾಡಿನ ಇತರ ಸಮುದಾಯ ಆಚರಿಸುವ ಹೆಚ್ಚಿನ ಎಲ್ಲಾ ಆಚರಣೆಗಳನ್ನು ಆಚರಿಸುತ್ತಾರೆ.

ಬಾಲೆಸಾಂತು

ತುಳುನಾಡಿನ ಮರಾಠಿ - ನಾಯ್ಕರ ಇನ್ನೊಂದು ಆಚರಣೆ ಬಾಲೆಸಾಂತು. ಹಿಂದಿನ ಕಾಲದಲ್ಲಿ ಹೆಚ್ಚು ಹೆಚ್ಚು ಸ್ಥಳಗಳಲ್ಲಿ ಈ ಕುಣಿತವನ್ನು ನಡೆಸುತ್ತಿದ್ದರು. ಕಾಲಕ್ರಮೇಣ ನಡೆಯದೇ ಹೋಯಿತು. ಆದರೆ ಬಂಟ್ವಾಳ ತಾಲೂಕು ಮತ್ತು ಕಾಸರಗೋಡಿನ ಅಡ್ಯನಡ್ಕ ಎಣ್ಮಕಜೆ, ಕೋಡಂದೂರು ಪ್ರದೇಶಗಳಲ್ಲಿ ಇಂದಿಗೂ ಉಳಿಸಿಕೊಂಡು ಬರಲಾಗಿದೆ. ಇದು ಮರಾಠಿಗರಿಗೆ ಮೂಲ ಮಠವೆಂದು ಹೇಳಲ್ಪಡುವ ಶ್ರೀ ಕ್ಷೇತ್ರ ಶೃಂಗೇರಿಯ ಶಾರದಾಂಬೆಯ ಆರಾಧನಾ ಅಂಗವಾಗಿರುವ ಕುಣಿತ. ತಂಡದಲ್ಲಿ ಕಲಾವಿದರು ಹನ್ನೊಂದು ಮಂದಿ ಇರುತ್ತಾರೆ (ಕೆಲವೊಮ್ಮೆ ಹೆಚ್ಚಾಗಿರುತ್ತಾರೆ). ಹಿಮ್ಮೇಳದಲ್ಲಿ ಹಾಡುಗಾರ ಮತ್ತು ವಾದ್ಯಗಾರರಿರುತ್ತಾರೆ. ಸನ್ಯಾಸಿ, ಪೂಜೆಭಟ್ಟ, ಪೂಜಾರಿ, ಗುರಿಕಾರ, ಕೊರಜಿ ಕೊರಪೊಳ್ಳು, ಕೊರಗ, ಸಾಹೇಬ ಮತ್ತು ಮಂಗ ಇತ್ಯಾದಿ ಪಾತ್ರಗಳು ಇರುತ್ತವೆ.

ತಂಡದ ನಾಯಕ ಮರಾಠಿ ಭಾಷೆಯ ಹಾಡನ್ನು ಹಾಡಿದಾಗ ಇತರರು "ಬಾಲ್ ಬಾಲೋ ಬಾಲೆ ಸಾಂತು" ಎಂಬ ಸೊಲ್ಲಿನೊಡನೆ ಕುಣಿಯುತ್ತಾರೆ. ವಿವಿಧ ರೀತಿಯಲ್ಲಿ ಕುಣಿಯುತ್ತಾ ಮನೆ ಮನೆಗೆ ರಾತ್ರಿ ಹೋಗುತ್ತಾರೆ. ಅಕ್ಕಿ ಭತ್ತ, ಹಣದ ರೂಪದಲ್ಲಿ ದಾನ ಮಾಡುತ್ತಾರೆ. ಹೀಗೆ ಎಂಟು ದಿನಗಳ ನಂತರ ಮಾಯಿ ಹುಣ್ಣಿಮೆಯಂದು ಮುಕ್ತಾಯವಾಗುತ್ತದೆ. ಕೊನೆಯ ದಿನ ಒಂದು ಗದ್ದೆಯಲ್ಲಿ ದೊರಕಿದ ಭತ್ತದಿಂದ ಅಕ್ಕಿ ಮಾಡಿ ರೊಟ್ಟಿ ತಯಾರಿಸುತ್ತಾರೆ. ಕಲ್ಲುಗಳಿಂದ ಅನೇಕ ಒಲೆಗಳನ್ನು ಮಾಡಿ ಅಡುಗೆ ಮಾಡುತ್ತಾರೆ. ನಂತರ ರೊಟ್ಟಿ, ಮೀನು, ಹುರುಳಿ ಪದಾರ್ಥಗಳನ್ನು ಎಡೆ ಬಡಿಸಲಾಗುತ್ತದೆ. ಮೂರು ಎಡೆಗಳನ್ನು ಕಾಸರಕನ ಮರದ ಬುಡದಲ್ಲಿಡಲಾಗುತ್ತದೆ. ನಂತರ ಎಲ್ಲರೂ ಊಟ ಮಾಡುತ್ತಾರೆ. ಊರಿನ ಮಾರಿಯನ್ನು ಹೊಡೆದೊಡಿಸುವ ಕೆಲಸವೇ ಬಾಲೆಸಾಂತು ಊರಿಗೆ ರೋಗರುಜಿನ ಪ್ರೇತಗಳ ದೃಷ್ಟಿಯನ್ನು ದೂರಮಾಡುತ್ತದೆ ಈ ಕುಣಿತ ಎಂಬುದಾಗಿ ಜನಪದರ ನಂಬಿಕೆ. ಕುಣಿತದ ದಿನಗಳಲ್ಲಿ ಕಲಾವಿದರು ವ್ರತವನ್ನು ಆಚರಿಸಲೇಬೇಕು ಎಂಬ ನಿಯಮಗಳಿವೆ. ಮದ್ಯಪಾನ ಮಾಂಸಾಹಾರ ಮಾಡುವುದಿಲ್ಲ. ಕುಣಿತವನ್ನು ಒಮ್ಮೆ ಪ್ರಾರಂಭಿಸಿದರೆ

ಮೂರು ವರ್ಷ ತನಕ ಮಾಡಬೇಕು ಇಲ್ಲವೆ ನಿರಂತರ ನಡೆಯಬೇಕು. ತಪ್ಪಿದರೆ ತೊಂದರೆಗಳು ಕಾಣಿಸಿಕೊಳ್ಳುತ್ತವೆ. ವರ್ಷದ ಕುಣಿತ ನಡೆಸಿದಾಗ ಶೃಂಗೇರಿ ಮಠಕ್ಕೆ ಕಾಣಿಕೆ ಕಳುಹಿಸಬೇಕು ಎಂಬ ಸಂಪ್ರದಾಯವಿದೆ. ಈ ಬಾಲೆಸಾಂತು ಕುಣಿತ ಗೌಡ ಸಮುದಾಯದವರು ಆಚರಿಸುವ 'ಸಿದ್ಧವೇಷ'ದಂತೆಯೇ ಹೋಲಿಕೆಗಳು ಕಂಡುಬರುತ್ತವೆ. ಕೆಲವೊಂದು ಪಾತ್ರಗಳು, ವೇಷಗಳಲ್ಲಿ ಹೋಲಿಕೆಗಳಿವೆ. 'ಬಾಲೆಸಾಂತು' ಕುಣಿತದಲ್ಲಿ ಮರಾಠಿ - ನಾಯ್ಕರು ಹಾಡುವ ಮರಾಠಿ ಹಾಡು ಶೃಂಗೇರಿಯ ವರ್ಣನೆಗಳೊಂದಿಗೆ ಕೂಡಿದೆ. ತುಳುನಾಡಿನ 'ಆಟಿಕಳೆಂಜ', 'ಬಾಲೆಸಾಂತು' ಮತ್ತು 'ಮಾರಿಗೋಂದೋಳು' ಇವೆಲ್ಲವುಗಳಲ್ಲಿ ಒಂದಕ್ಕೊಂದು ಸಾಮ್ಯತೆ ಹೋಲಿಕೆಗಳು ಕಂಡುಬರುತ್ತವೆ. ಆದರೆ ಉದ್ದೇಶಗಳು ಒಂದೇ ಆಗಿರುವುದನ್ನು ನಾವು ಕಾಣುತ್ತೇವೆ.

ಕಾಲಾವಧಿ 'ಕಲ್ಲುರ್ಟಿ ಅಗೆಲು' ಹಾಕುವ ಒಂದು ಆಚರಣೆಯನ್ನು ಮರಾಠಿ - ನಾಯ್ಕರ ಕುಟುಂಬದಲ್ಲಿ ಕಂಡುಬರುತ್ತದೆ. ನಿಗದಿತ ಒಂದು ದಿನ ಮಧ್ಯಾಹ್ನದ ನಂತರ ಪ್ರಾರಂಭವಾಗುತ್ತದೆ. ಹೆಣ್ಣು ಕೋಳಿಯಡುಗೆಯನ್ನು ಮಾಡಿ ಎಡೆ ಬಡಿಸುತ್ತಾರೆ. ನಾಲ್ಕು ಎಲೆಗಳಲ್ಲಿ ಎಡೆ ಬಡಿಸಲಾಗುತ್ತದೆ. ಪ್ರತಿಯೊಂದು ಎಲೆಯಲ್ಲಿ ದೀಪದ ಬತ್ತಿ ಇರಿಸುತ್ತಾರೆ ಮತ್ತು ಬಾಳೆ ಎಲೆಯ ದೊನ್ನೆಗಳಲ್ಲಿ ಕಲ್ಲು ಇದ್ದಿಲು, ಅಡಿಕೆಹೋಳು ಹಾಗೂ ವೀಳ್ಯದೆಲೆಗಳನ್ನು ಇಡುತ್ತಾರೆ. ನಂತರ ಪ್ರಾರ್ಥನೆ ನಡೆಯುತ್ತದೆ. ಕಲ್ಲು, ದೊನ್ನೆ, ಇದ್ದಿಲು, ಅಡಿಕೆಹೋಳು ಮತ್ತು ವೀಳ್ಯದೆಲೆಗಳನ್ನು ಒಟ್ಟು ಸೇರಿಸಿ ಮನೆಯಿಂದ ಸ್ವಲ್ಪ ದೂರ ಇಡಲಾಗುತ್ತದೆ. ಊಟದೊಂದಿಗೆ ಕಾರ್ಯಕ್ರಮ ಮುಗಿಯತ್ತದೆ. ಇದು ವಾರ್ಷಿಕವಾಗಿ ಒಮ್ಮೆ ನಡೆದರೆ ಹರಕೆಗಳಿದ್ದರೆ ಮತ್ತೊಮ್ಮೆ ಮಾಡುತ್ತಾರೆ. ಕಲ್ಲುರ್ಟಿಯು ತುಳುನಾಡಿನ ಪ್ರಾಚೀನ ಕಾಲದಿಂದಲೂ ಕಂಡುಬರುವ ದೈವವಾಗಿದೆ.[7] ದೈವಕ್ಕೆ ಸೇವೆ ಮಾಡಿ ಸದಾ ನಮಗೆ ರಕ್ಷಣೆ ನೀಡಬೇಕೆನ್ನುವುದೇ ಆಚರಣೆಯ ಉದ್ದೇಶವಾಗಿದೆ.

'ಮುಡಿಪು ಹಾಕುವುದು' ಒಂದು ವಾರ್ಷಿಕ ಆಚರಣೆಯಾಗಿ ಶ್ರೀ ತಿರುಪತಿ ವೆಂಕಟೇಶ್ವರನ ಹೆಸರಿನಲ್ಲಿ ವರ್ಷದಲ್ಲಿ ಒಂದು ಸಲ ಕುಟುಂಬದವರೆಲ್ಲರೂ ಸೇರಿ ತಮ್ಮ ಇಚ್ಛೆಯನುಸಾರ ಹಣ ಹಾಕುತ್ತಾರೆ. ಅಂದು ದೀಪ ಬೆಳಗಿಸಿ ಪ್ರಾರ್ಥನೆ ಸಲ್ಲಿಸಿ ಹಣವನ್ನು ಮುಡಿಪು ಪೆಟ್ಟಿಗೆಗೆ ಹಾಕುತ್ತಾರೆ. ಜತೆಗೆ ಕರಿಮೆಣಸನ್ನು ಹಾಕುವ ಸಂಪ್ರದಾಯವಿದೆ. ಅನೇಕ ವರ್ಷಗಳ ನಂತರ ಹಣವನ್ನು ಕುಟುಂಬದವರು ತಿರುಪತಿಗೆ ಹೋಗಿ ದೇವರಿಗೆ ಅರ್ಪಿಸುತ್ತಾರೆ. ಆ ದಿನ ಬಾಳೆಹಣ್ಣು, ಬೆಲ್ಲ, ಹಾಲು ಸೇರಿಸಿ 'ಪನಿಯಾರ' ಎಂಬ ವಿಶೇಷ ಪ್ರಸಾದ ತಯಾರಿಸುತ್ತಾರೆ. ಕರಿಮೆಣಸಿನ ಪಾನಕವೂ ಸಿದ್ಧವಾಗಿರುತ್ತದೆ. ಕೊನೆಗೆ ಎಲ್ಲರಿಗೂ ಪಾನಕ, ಪ್ರಸಾದ ಹಂಚಲಾಗುತ್ತದೆ. ಮರಾಠಿ - ನಾಯ್ಕರ ಪ್ರತಿಯೊಂದು ಕುಟುಂಬದಲ್ಲಿಯೂ ಈ ಆಚರಣೆ ರೂಢಿಯಲ್ಲಿದೆ.

ತಿರುಪತಿ ಕ್ಷೇತ್ರಕ್ಕೆ ಹೋಗುವಾಗ ಒಂದು ವೇಳೆ ಹಣದ ಕೊರತೆಯದರೆ ಈ 'ಮುಡಿಪು' ಹಣದಿಂದಲೇ ಬಳಸಬಹುದು. ಇತರ ಯಾವುದಕ್ಕೂ ಬಳಸಬಾರದೆಂಬ ನಿಯಮವಿದೆ. ಹಾಗೆಯೇ 'ಮುಡಿಪು ಪೆಟ್ಟಿಗೆಯಲ್ಲಿ ಹಾಕಿದ ಕರಿಮೆಣಸನ್ನು ಯಾವುದೇ ಕಾರಣಕ್ಕೂ ಬಿಡಬಾರದೆಂಬ ಸಂಪ್ರದಾಯವಿದೆ.

ಚಾಂದ್ರಮಾನ ಯುಗಾದಿಯನ್ನು ಸುಗ್ಗಿ (ಏಪ್ರಿಲ್) ತಿಂಗಳಲ್ಲಿ ಆಚರಿಸುತ್ತಾರೆ. ಹಿಂದಿನ ಕಾಲದಲ್ಲಿ ಹೆಚ್ಚಿನ ಕುಟುಂಬಗಳಲ್ಲಿ ಯುಗಾದಿ ಪೂಜೆ ನಡೆಯುತ್ತಿದ್ದರೆ ಇಂದು ಅವುಗಳ ಸಂಖ್ಯೆ ಕಡಿಮೆಯಾಗಿದೆ. ಯುಗಾದಿ ದಿನ ವಿಶೇಷ ದಿನವಾಗಿ ಕಾಣುವ ಸಂಪ್ರದಾಯವಿದೆ.

ಮರಾಠಿ ಸಮುದಾಯದಲ್ಲಿ ವಿಶು ಸಂಕ್ರಮಣ ಒಂದು ವಾರ್ಷಿಕ ಆಚರಣೆಯಾಗಿ ಕಾಣಬಹುದು. ಹೊಲ ಗದ್ದೆ ಇದ್ದವರಿಗಂತೂ ತುಂಬಾ ಮಹತ್ವದಿಂದ ಕೂಡಿದ ಆಚರಣೆ. ವಿಶು ಸಂಕ್ರಮಣವು ಸುಗ್ಗಿ (ಏಪ್ರಿಲ್) ತಿಂಗಳಲ್ಲಿ ಆಚರಿಸಲ್ಪಡುತ್ತದೆ. ಜನಪದರು ಅಂದರೆ ಹಿಂದಿನ ಕಾಲದ ಹೆಚ್ಚಿನ ಜನರು ಮುಖ್ಯ ಹೊಲಗದ್ದೆಯನ್ನೇ ಅವಲಂಬಿಸುತ್ತಿದ್ದರು. ಅನ್ನ ನೀಡುವ ಹೊಲಗದ್ದೆಗಳನ್ನು ಅತೀ ಭಕ್ತಿಯಿಂದ ಕಾಣುತ್ತಾರೆ. ಜನಪದರು ಯಾವುದೇ ಕಾರಣಕ್ಕೂ ಗದ್ದೆಗಳನ್ನು ಅಪವಿತ್ರಗೊಳಿಸುವುದನ್ನು ವಿರೋದಿಸುತ್ತಿದ್ದರು. ಚಪ್ಪಲು ಹಾಕಿಕೊಂಡು ಗದ್ದೆಯಲ್ಲಿ ನಡೆಯುವುದಕ್ಕೂ ಅವಕಾಶವಿರಲಿಲ್ಲ. ವಿಶು ಸಂಕ್ರಮಣದಂದು ಮನೆಯೊಳಗೆ ದೀಪ ಬೆಳಗಿಸಿ ಸೌತೆಕಾಯಿ, ಕುಂಬಳಕಾಯಿಯನ್ನು 'ಕಣಿ ಇಡು'ತ್ತಾರೆ. ಎತ್ತುಗಳನ್ನು ಗದ್ದೆಗೆ ಹೊಡೆದುಕೊಂಡು ಹೋಗಿ ಒಂದು ಸುತ್ತು ಉಳುಮೆ ಮಾಡುತ್ತಾರೆ. ಗದ್ದೆಯಲ್ಲಿ ಒಂದು ಬಾಳೆ ಎಲೆಯಲ್ಲಿ ಒಂದು ಸೇರು ಬೆಳ್ತಿಗೆ ಅಕ್ಕಿ, ಒಂದು ತೆಂಗಿನಕಾಯಿ, ಒಂದು ಅಡಿಕೆ, ಐದು ವೀಳ್ಯದೆಲೆ ಇಟ್ಟು ಗಣಪತಿಗೆ ದೀಪ ಬೆಳಗಿಸುತ್ತಾರೆ. ಹಾಗೆಯೇ ಸ್ವಲ್ಪ ಹಟ್ಟಿ ಗೊಬ್ಬರವನ್ನೂ ಗದ್ದೆಯಲ್ಲಿ ಹಾಕುತ್ತಾರೆ. ಅನ್ನ ನೀಡುವ ಹೊಲ, ಎತ್ತುಗಳು ಸುಖವಾಗಿದ್ದು ಒಳ್ಳೆಯ ಬೆಳೆ ಎಂದು ಭಕ್ತಿಯಿಂದ ದೇವರಲ್ಲಿ, ಪ್ರಕೃತಿ ಮಾತೆಯಲ್ಲಿ ಬೇಡುವುದೇ ಈ ಆಚರಣೆಯ ಮುಖ್ಯ ಉದ್ದೇಶವಾಗಿದೆ. ಈ ಆಚರಣೆಯಲ್ಲಿ ಕಂಡುಬರುವ ಮತ್ತೊಂದು ವಿಶೇಷವೆಂದರೆ, ಆ ದಿನ ಕುಟುಂಬದವರೆಲ್ಲರೂ ದೇವರಿಗೆ ವಂದಿಸುತ್ತಾರೆ. ನಂತರ ಕಿರಿಯವರೆಲ್ಲರೂ ಪ್ರತಿಯೊಬ್ಬ ಹಿರಿಯರ ಕಾಲು ಮುಟ್ಟಿ ಆಶೀರ್ವಾದ ಪಡೆದುಕೊಳ್ಳುತ್ತಾರೆ. ಪ್ರಸಕ್ತ ಕಾಲದಲ್ಲಿ ಹೊಲಗದ್ದೆಗಳ ಸಂಖ್ಯೆ, ಭೂಮಿ ಕಡಿಮೆಯಾದರೂ ಆಚರಣೆ ಪ್ರಚಲಿತದಲ್ಲಿದೆ.

'ಬೇಷ ಪತ್ತನಾಜೆ' ಹಬ್ಬವನ್ನು ಬೇಷ (ಮೇ) ತಿಂಗಳಲ್ಲಿ ಆಚರಿಸುತ್ತಾರೆ. ಅಂದು ಕೆಲವು ಕುಟುಂಬಗಳಲ್ಲಿ ಭೈರವನ ಪೂಜೆ (ಭೈರವನ ತಂಬಿಲ) ವಾರ್ಷಿಕ ಕಾಲಾವದಿಯಾಗಿ ಆಚರಿಸುತ್ತಾರೆ. ಹಿಂದಿನ

ಕಾಲದಲ್ಲಿ ಬೇಷ ಪತ್ತನಾಜೆಯನ್ನು ಸಡಗರದಿಂದ ಆಚರಿಸುತ್ತಿದ್ದರು. ಕ್ರಮೇಣ ಕಡಿಮೆಯಾಗಿದೆ. ತುಳುನಾಡಿನಲ್ಲಿ ಬೇಷ ಪತ್ತನಾಜೆಯಂದು ಹತ್ತು ಮಳೆಹನಿಯಾದರೂ ಬೀಳುತ್ತದೆ ಎಂಬ ಒಂದು ನಂಬಿಕೆಯಿದೆ.

ಸೋಣ (ಆಗಸ್ಟ್) ತಿಂಗಳಲ್ಲಿ ಬರುವ 'ಎಳ್ಳಮವಾಸ್ಯೆ'ಯು ಅತ್ಯಂತ ಮಹತ್ವದ ಅಮವಾಸ್ಯೆಯಾಗಿ ಮರಾಠಿ - ನಾಯ್ಕರ ಕುಟುಂಬಗಳಲ್ಲಿ ಆಚರಿಸುತ್ತಾರೆ. ಈ ಅಮವಾಸ್ಯೆಯನ್ನು ಬಿಡಬಾರದು. ಅಮವಾಸ್ಯೆ ಊಟವನ್ನು ಹೊಸದಾಗಿ ಪ್ರಾರಂಭಿಸುವವರು ಈ ಎಳ್ಳಮವಾಸ್ಯೆಯಿಂದ ಆರಂಭಿಸುತ್ತಾರೆ. ಎಳ್ಳಮವಾಸ್ಯೆಯಂದು ವಿಶೇಷವಾಗಿ ಗತಿಸಿದ ಹಿರಿಯರಿಗೆ ಎಳ್ಳು ನೀರು ಬಿಡುವ ಮೂಲಕ ಆಚರಿಸುತ್ತಾರೆ. ಈ ತಿಂಗಳ ಶನಿವಾರಗಳಂದು ಕುಟುಂಬದ ಸದಸ್ಯರು ದೇವಾಲಯಗಳಿಗೆ ಹೋಗಿ 'ಸೋಣ ಶನಿವಾರ'ದ ಊಟ ಸ್ವೀಕರಿಸುತ್ತಾರೆ.

ಶ್ರೀಕೃಷ್ಣ ಜನ್ಮಾಷ್ಟಮಿ ಹಬ್ಬವನ್ನು ಸೋಣ (ಆಗಸ್ಟ್) ತಿಂಗಳಲ್ಲಿ ಆಚರಿಸಲಾಗುತ್ತದೆ. ವಿಶೇಷ ಜನಪದ ಆಟವಾದ ಚೆನ್ನೆಮಣೆ ಆಟ ಆಡುವುದನ್ನು ಈ ದಿನ ಕೊನೆಗೊಳಿಸಬೇಕೆಂಬ ನಿಯಮವಿದೆ. ಅಂದು ಎಲ್ಲರೂ ಜಾಗರಣೆ ಮಾಡಬೇಕೆಂಬ ಸಂಪ್ರದಾಯವಿದೆ. ಶ್ರೀಕೃಷ್ಣನ ಜನ್ಮ ಕಾಲ ತುಂಬಾ ಕಷ್ಟಕರವಾಗಿತ್ತು. ಹಾಗೆಯೇ ನಾನು ನೆಮ್ಮದಿಯಿಂದ ನಿದ್ದೆಯಲ್ಲಿರುವುದು ಸರಿಯಲ್ಲ ಎಂದು ಜನಪದರ ನಂಬಿಕೆಯಾಗಿರಬಹುದು ಅಂದು ಚೆನ್ನೆಮಣೆಯನ್ನು ಅಟ್ಟಕ್ಕೆ ಹಾಕುತ್ತಾರೆ. ನಂತರ ಮುಂದಿನ ವರ್ಷವೇ ತೆಗೆಯಬೇಕೆಂಬ ಸಂಪ್ರದಾಯ ಕಂಡುಬರುತ್ತದೆ. ಈ ಜನಪದ ಆಟವನ್ನು ಶಿವಮೊಗ್ಗ ಜಿಲ್ಲೆಯಲ್ಲೂ ಕಾಣಬಹುದು.

ಸೋಣ (ಸೆಪ್ಟೆಂಬರ್) ತಿಂಗಳಲ್ಲಿ ಬರುವ ಗಣೇಶ ಚತುರ್ಥಿ ಹಬ್ಬವು ಮಹತ್ವದಿಂದ ಕೂಡಿದ ಆಚರಣೆಯಾಗಿದೆ. ಕೆಲವು ಮರಾಠಿ ಕುಟುಂಬಗಳಲ್ಲಿ ಗಣೇಶನ ಪೂಜೆ ನಡೆಯುತ್ತದೆ. ಹೆಚ್ಚಿನವರು ದೇವಾಲಯಗಳಿಗೆ ಹೋಗಿ ಪೂಜೆ ಸಲ್ಲಿಸುತ್ತಾರೆ. ಗಣೇಶ ಚತುರ್ಥಿಯಂದು ಮನೆ ತುಂಬಿಸುವುದು, ಹೊಸ ಅಕ್ಕಿ ಊಟ (ಪುದ್ವಾರ್)ದ ಆಚರಣೆಯೂ ಕಂಡುಬರುತ್ತದೆ. ಅಥವಾ ಒಂದು ನಿಗದಿತ ದಿನಗಳಲ್ಲಿ ಈ ಆಚರಣೆಯೂ ನಡೆಯುತ್ತದೆ.

'ಮನೆ ತುಂಬಿಸುವ' ಕಾರ್ಯವು ಅತೀ ಮಹತ್ವವನ್ನು ಪಡೆದಿದೆ ಎಂದು ಹೇಳಬೇಕು. ಈ ಜಾನಪದೀಯ ಆಚರಣೆಯು ಪ್ರಕೃತಿಯನ್ನು ಆರಾಧಿಸುವ ಮುಖ್ಯ ಅಂಶವನ್ನು ಹೊಂದಿದೆ. ತಾವು ಬೆಳೆಸುವ ತಮಗೆ ಜೀವನಾಧಾರವಾದ ಆಹಾರ ಕೊಡುವ ಮತ್ತು ಜೀವನ ಸುಗಮ ಹಾದಿಗಾಗಿ ಸಹಕರಿಸುವ ಎಲ್ಲವನ್ನೂ ಸೇರಿಸಿಕೊಂಡು ಮುಂದೆಯೂ ಹೀಗೆ ನಮ್ಮ ಮನೆ ತುಂಬಿ ಬರಲಿ ಎಂದು ಆಶಿಸುತ್ತಾರೆ ಜನಪದರು. ಮನೆ ತುಂಬಿಸುವ ಕಾರ್ಯಕ್ರಮದ ಮುನ್ನಾದಿನ ಗದ್ದೆಯಿಂದ ಭತ್ತದ ತೆನೆ, ಹಲಸಿನ, ಮಾವಿನ ಎಲೆ ಮತ್ತು ಆಲ (ದಡ್ಡಾಲ್)ದ ಮರದಿಂದ ಮಾಡಿದ ನಾರುಗಳನ್ನು ತಂದು ತುಳಸಿಕಟ್ಟೆಯ ಮೇಲಿಡುತ್ತಾರೆ. ಮರುದಿನ ಕುಟುಂಬದ ಯಜಮಾನ ಸ್ನಾನ ಮಾಡಿ ಬಂದು ಅವುಗಳನ್ನೆಲ್ಲಾ ತಲೆಯಲ್ಲಿ ಹೊತ್ತು ತುಳಸಿ ಕಟ್ಟೆಗೆ ಮೂರು ಸಲ ಪ್ರದಕ್ಷಿಣೆ ಹಾಕಿ ದೇವರ ಕೋಣೆಗೆ ತರುತ್ತಾನೆ. ಆ ವೇಳೆಗೆ ಅಲ್ಲಿ ದೀಪ ಬೆಳಗಿಸಲಾಗುತ್ತದೆ. ನಂತರ ಅವುಗಳೆನ್ನೆಲ್ಲಾ ಪ್ರಥಮವಾಗಿ ದೇವರಿಗೆ ಅರ್ಪಿಸಿ ಅನೇಕ ಕಟ್ಟುಗಳನ್ನು ಮಾಡಲಾಗುತ್ತದೆ. ಒಂದೊಂದು ಕಟ್ಟಿನಲ್ಲಿ ಒಂದು ಹಲಸಿನ, ಮಾವಿನ ಎಲೆಗಳು ಭತ್ತದ ತೆನೆ ಇತ್ಯಾದಿಗಳನ್ನು ಇಟ್ಟು ಆಲದ ನಾರಿನಿಂದ ಕಟ್ಟುತ್ತಾರೆ. ಅಡಿಕೆ ಮರ, ಹಲಸು, ಮಾವು, ತೆಂಗು, ಹೀಗೆ ಫಲ ಕೊಡುವ ಎಲ್ಲಾ ಮರಗಳಿಗೆ ಕಟ್ಟಲಾಗುತ್ತದೆ. ಮನೆಯಲ್ಲಿರುವ ಇತರ ಸಲಕರಣೆಗಳಿಗೂ ಕಟ್ಟುತ್ತಾರೆ. ನೊಗ, ನೇಗಿಲು, ಒನಕೆ, ಹಟ್ಟಿ, ಕೊಟ್ಟಿಗೆ, ವಾಹನಗಳಿಗೆ, ಇತರ ಯಂತ್ರಗಳಿಗೆ ಅಂಗಡಿಗಳಿದ್ದರೆ ಅಂಗಡಿಗಳಿಗೆ ಹೀಗೆ ಎಲ್ಲದಕ್ಕೂ ಕಟ್ಟುತ್ತಾರೆ. ಕುಟುಂಬದ ಇತರ ಮನೆಯವರು ಬಂದು ಅವರ ಮನೆಗೂ ಕೊಂಡು ಹೋಗುತ್ತಾನೆ. ಪ್ರಕೃತಿ ಪರಿಸರ ಯಾವುದೇ ರೀತಿಯಲ್ಲಿ ಮುನಿಯದೆ ಮುಂದೆಯೂ ಫಲಾಹಾರ ಇನ್ನಿತರ ಸಹಕಾರಗಳು ಲಭಿಸಿ ಮನೆ ತುಂಬಿರಲಿ, ಇಳುವರಿ ಹೆಚ್ಚು ಹೆಚ್ಚು ಬಂದು ಮನೆ ತುಂಬಿರಲಿ ಎಂಬುದೇ ಈ ಆಚರಣೆಯ ಆಶಯವಾಗಿದೆ. ಗದ್ದೆಗಳಿಲ್ಲದ ಕುಟುಂಬದವರು ಬೇರೆ ಹತ್ತಿರದ ಗದ್ದೆಗಳಿಂದ ಭತ್ತದ ತೆನೆಗಳನ್ನು ತರುತ್ತಾರೆ. ಅದು ಕೇಳಿ ತರದೆ ಕದ್ದು ತರಬೇಕು ಎನ್ನುವ ಸಂಪ್ರದಾಯವಿದೆ.

ಪುದ್ದಾರ್ (ಹೊಸ ಅಕ್ಕಿ ಊಟ) ಕೂಡ ಒಂದು ಮಹತ್ವದಿಂದ ಕೂಡಿದ ಆಚರಣೆಯಾಗಿ ತುಳುನಾಡಿನ ಮರಾಠಿ ಸಮುದಾಯದಲ್ಲಿ ಕಂಡುಬರುತ್ತದೆ. ಅಂದು ಮನೆಯ ಪಾತ್ರೆಗಳನ್ನು ಮನೆಯನ್ನು ಶುಚಿಗೊಳಿಸಿ ಶುದ್ಧೀಕರಿಸಿದ ನಂತರ ಕಾರ್ಯಕ್ರಮ ಮುಂದುವರಿಯುತ್ತದೆ. ಅಂದು ಮನೆಯಲ್ಲಿ ಬಂಧು ಮಿತ್ರರು ಆಮಂತ್ರಿತರಾಗಿ ಬಂದಿರುತ್ತಾರೆ. ಕುಟುಂಬದ ಹಿರಿಯರು ವ್ರತಾಚರಣೆಯನ್ನು ಪಾಲಿಸಬೇಕು. ಹೊಸ ಅಕ್ಕಿಯಿಂದ ನೈವೇದ್ಯವನ್ನು ತಯಾರಿಸಿ ದೇವರಿಗೆ ಅರ್ಪಿಸಲಾಗುತ್ತದೆ. ಮಧ್ಯಾಹ್ನ ೧೨ ಗಂಟೆಯೊಳಗೆ ಜೊಗಸೆ ಅಕ್ಕಿ ಇಟ್ಟು (ಪುಂಡಿ ಅರಿ) ಪ್ರಾರ್ಥನೆ ಸಲ್ಲಿಸಲಾಗುತ್ತದೆ. ತಾವು ಬೆಳೆಸಿದ ಹೊಸ ಅಕ್ಕಿಯನ್ನು

ಮೊದಲು ದೇವರಿಗೆ ಅರ್ಪಿಸಿ ನಂತರ ತಾವು ಪಡೆಯುವುದೇ ಆಚರಣೆಯ ಉದ್ದೇಶ. ಭೋಜನಕ್ಕೆ ಅನೇಕ ವಿಧದ ತರಕಾರಿಗಳನ್ನು ಸಾಂಬಾರು ತಯಾರಿಸುವುದು ವಿಶೇಷವಾಗಿ ಕಂಡುಬರುತ್ತದೆ. ನೈವೇದ್ಯವು ಉಪ್ಪು ರಹಿತವಾಗಿರುತ್ತದೆ. ಯಾಕೆಂದರೆ ಶಾಸ್ತ್ರೋಕ್ತವಾಗಿ ದೇವರಿಗೆ ಉಪ್ಪು ನಿಷೇಧವಾಗಿದೆ.

ನಿರ್ನಾಲ್ (ನವೆಂಬರ್) ತಿಂಗಳಲ್ಲಿ ಬರುವ ನವರಾತ್ರಿ ಹಬ್ಬವನ್ನೂ ಆಚರಿಸುತ್ತಾರೆ. ಅನೇಕ ಮರಾಠಿ ಕುಟುಂಬಗಳಲ್ಲಿ ನವರಾತ್ರಿ ಪೂಜೆಯು ಜರುಗುತ್ತದೆ. ದುರ್ಗಾದೇವಿಗೆ ಸಲ್ಲುವ ಈ ನವರಾತ್ರಿಯ ಏಳನೇ ಅಥವಾ ಕೊನೆಯ ಒಂಭತ್ತನೇ ಪೂಜೆಯನ್ನು ನೆರವೇರಿಸುವುದು ಕಂಡುಬರುತ್ತದೆ.

ಎಲ್ಲಾ ಸಮುದಾಯಗಳಂತೆ ಮರಾಠಿ - ನಾಯ್ಕರೂ ಕೂಡ ಬೊಂತೆಲ್ (ನವೆಂಬರ್) ತಿಂಗಳಲ್ಲಿ ಬರುವ ದೀಪಾವಳಿಯನ್ನು ಸಡಗರದಿಂದಲೇ ಆಚರಿಸುತ್ತಾರೆ. ಕಾಲಾವಧಿಯ 'ಪರ್ಬತಂಬಿಲ'ವೂ ಕೆಲವು ಕುಟುಂಬಗಳಲ್ಲಿ ನಡೆಯುತ್ತದೆ. 'ಪಂಜುರ್ಲಿ' ಮತ್ತು 'ಅಣ್ಣಪ್ಪ ಪಂಜುರ್ಲಿ' ಎಂಬ ಎರಡು ದೈವಗಳಿಗೆ 'ತಂಬಿಲ' ಕೊಡುವುದನ್ನು ಕಾಣಬಹುದು. ಅಣ್ಣಪ್ಪ ಪಂಜುರ್ಲಿಗೆ ಕೋಳಿಗಳನ್ನು ಬಲಿಕೊಡುವ ಸಂಪ್ರದಾಯವಿದೆ. ದೀಪಾವಳಿ ಅಮವಾಸ್ಯೆಯಂದು ಅಮವಾಸ್ಯೆ ಊಟದ ನಂತರ ಅಂಗಳದಲ್ಲಿ ತುಳಸಿ ಕಟ್ಟೆಯ ಬಲಭಾಗದಲ್ಲಿ 'ಬಲಿಯಂದ್ರ' (ಪಾಳೆ ಮರ) ಎನ್ನುವ ಹೆಸರಿನ ಮರದ ಎರಡು ಕೋಲುಗಳನ್ನು ನೆಡಲಾಗುತ್ತದೆ. ಅದರ ಮೇಲಿನ ತುದಿಯಲ್ಲಿ ಮೂರು ಕವಲುಗಳಿರಬೇಕೆಂಬ ನಿಯಮವಿದೆ. ನಂತರ ಅನೇಕ ರೀತಿಯ ಅಲಂಕಾರಗಳನ್ನು ಮಾಡಿ ನೋಡಲು ತುಂಬಾ ಆಕರ್ಷಕವಾಗಿರುತ್ತದೆ. ಇತರ ಸಣ್ಣ ಒಂದು ಬಲಿಯಂದ್ರ ಕೋಲನ್ನು ಹಟ್ಟಿಯಲ್ಲಿ ಮತ್ತು ಗದ್ದೆಯಲ್ಲಿ ನೆಡುತ್ತಾರೆ. ನರಕಚತುರ್ದಶಿಯಂದು ಎಲ್ಲಾ ಕಡೆ ದೀಪ ಉರಿಸಲಾಗುತ್ತದೆ. ತುಳಸಿ ಕಟ್ಟೆಯ ಹತ್ತಿರದ ಬಲಿಯಂದ್ರ ಮರದಲ್ಲಿ ಅಂತರ ಅಂತರದಲ್ಲಿ ದೀಪ ಬೆಳಗಿಸಲಾಗುತ್ತದೆ. ಅಂದು ರಾತ್ರಿ ಕುಟುಂಬದ ಯಜಮಾನ ಎಲ್ಲರ ಸಮ್ಮುಖದಲ್ಲಿ ದೀಪ ಬೆಳಗಿಸಿ ಎಲ್ಲರಿಗೂ ಕೈಯಲ್ಲಿ ಬೆಳ್ತಿಗೆ ಅಕ್ಕಿಯನ್ನು ಕೊಟ್ಟು ಬಲಿಯಂದ್ರ ನುಡಿ ಹೇಳುತ್ತಾರೆ.

ಬಲಿಯಂದ್ರ ಬಲಿಯಂದ್ರ

- - - - - - - - - -

- - - - - - - - - -

- - - - - - - - - - -ಕೂ- - - - -ಎಂದು ಕೂಗಿದಾಗ ಎಲ್ಲರೂ ಧ್ವನಿ ಗೂಡಿಸಿ ಅಕ್ಕಿಯನ್ನು ಬಲಿಯಂದ್ರ ಮರಕ್ಕೆ ಹಾಕುತ್ತಾರೆ. ಹೀಗೆ ಮೂರು ಸಲ ನಡೆದು ಪಟಾಕಿ ಸಿಡಿಸುವ ಅಬ್ಬರ ಪ್ರಾರಂಭವಾಗುತ್ತದೆ.

ಮನೆಯ ಹಿರಿಯರು ಗೋವು ಪೂಜೆಗೆ ಅಣಿಯಾಗುತ್ತಾರೆ. ಕುಂಕುಮ, ಬಾಳೆಹಣ್ಣು ಭತ್ತ ಇತರ ತಿನಿಸುಗಳೊಂದಿಗೆ ಹೋಗಿ ಹಟ್ಟಿಯಲ್ಲಿ ದನಕರುಗಳ ಹಣೆಗೆ ಕುಂಕುಮ ಹಚ್ಚಿ ಆರತಿ ಮಾಡುತ್ತಾರೆ. ಎಲ್ಲಾ ತಿನಿಸುಗಳನ್ನು ಕೊಡುತ್ತಾರೆ. ರಾತ್ರಿಯೂಟದೊಂದಿಗೆ ಆಚರಣೆ ಮುಗಿಯುತ್ತದೆ. ಮರುದಿನ ಬೆಳಿಗ್ಗೆ ಎಲ್ಲಾ ದನಕರು ಎತ್ತುಗಳಿಗೆ ಹೂವಿನ ಮಾಲೆ ಮಾಡಿ ಹಾಕಿ ತಲೆಗೆ ತೆಂಗಿನೆಣ್ಣೆ ಹಚ್ಚುತ್ತಾರೆ. ಅಂಗಳದಲ್ಲಿ ಅಲಂಕಾರದಲ್ಲಿರುವ ಬಲಿಯೇಂದ್ರ ಮರವನ್ನು ಮರುದಿನ ಹೊರಗಿಡುತ್ತಾರೆ.

ಹೀಗೆ ತುಳುನಾಡಿನಲ್ಲಿ ಭೌಗೋಳಿಕ ಮಹತ್ವಗಳಿಂದ ಕೂಡಿದ ಆಚರಣೆಗಳನ್ನೂ ಭಯಭಕ್ತಿ ಗೌರವಗಳೊಂದಿಗೆ ಮರಾಠಿ - ನಾಯ್ಕ ಸಮುದಾಯದವರು ಆಚರಿಸುತ್ತಾರೆ. ಎಲ್ಲಾ ಪ್ರತಿಯೊಂದು ವಾರ್ಷಿಕಾವರ್ತನ ಮತ್ತು ಜೀವನಾವರ್ತನ ಆಚರಣೆಗಳನ್ನು ಸಂಪ್ರದಾಯದಂತೆ ಕಟ್ಟುನಿಟ್ಟಾಗಿ ಆಚರಿಸಲಾಗುತ್ತದೆ. ಹೆಚ್ಚಿನ ಆಚರಣೆಗಳಲ್ಲಿ ಪ್ರಕೃತಿಯಾರಾಧನೆ ಪ್ರಮುಖ ಸ್ಥಾನವನ್ನು ಪಡೆದಿದೆ ಎಂದು ಹೇಳಬೇಕು. ಯಾಕೆಂದರೆ ಎಲ್ಲಾ ಕುಟುಂಬಗಳೂ ಕೃಷಿಯನ್ನು ಅವಲಂಬಿಸಿರುವುದು ಮತ್ತು ತುಳುನಾಡಿನ ಭೌಗೋಳಿಕ ಪರಿಸರವೂ ಕಾರಣೀಭೂತವಾಗಿದೆ ಎಂದು ಹೇಳಬಹುದು.

ಅಡಿ ಟಿಪ್ಪಣಿ

೧. ಕಲ್ಲುರ್ಟಿಯ ಇತಿಹಾಸದ ಬಗ್ಗೆ ಡಾ. ಸುಶೀಲಾ ಪಿ. ಉಪಾಧ್ಯಾಯರು ಪಾಡ್ದನದ ಕಥಾರೂಪವನ್ನು ಈ ರೀತಿ ನೀಡುತ್ತಾರೆ: ಕಲ್ಕುಡ - ಕಲ್ಲುರ್ಟಿ ಅಣ್ಣ ತಂಗಿಯರು. ಕಲ್ಕುಡ ಕಾರ್ಕಳದಲ್ಲಿ ಗೊಮ್ಮಟ ವಿಗ್ರಹವನ್ನು ಕೆತ್ತುವುದು. ಕಾರ್ಕಳದ ಭೈರರಸ ಇನ್ನೆಲ್ಲೂ ಈತ ಇಂಥ ಕಲಾಕೃತಿಯನ್ನು ಕೆತ್ತಬಾರದು ಎಂಬ ದುಷ್ಟ ವಿಚಾರದಿಂದ ಅವನ ಒಂದು ಕಾಲು ಮತ್ತು ಒಂದು ಕೈಯನ್ನು ಕಡಿದು ಹಾಕುವುದು, ಆದರೆ ಇಷ್ಟು ಚಿತ್ರಹಿಂಸೆಗೊಳಗಾದರೂ ಮಾನಸಿಕವಾಗಿ ಕುಂದದೆ ಮತ್ತೊಂದು ಗೊಮ್ಮಟ ವಿಗ್ರಹವನ್ನು ವೇಣೂರಿನಲ್ಲಿ ತಿಮ್ಮಣ್ಣ ಅಜಿಲನ ಆದೇಶದಂತೆ ಕೆತ್ತುವುದು. ಬೀರ ಕಲ್ಕುಡನ ಅವಳಿ ತಂಗಿ ಕಲ್ಲುರ್ಟಿ ಅಣ್ಣನಿಗೆ ದೊರೆತ ಚಿತ್ರಹಿಂಸೆಗೆ ಪ್ರತೀಕಾರ ತೋರಿಸುವುದು. ಇಬ್ಬರೂ ಭೂತಗಳಾಗುವುದು. ಭೈರರಸನಿಗೆ ಹಿಂಸೆ ಕೊಡುವುದು.
(ಡಾ. ಸುಶೀಲಾ ಪಿ. ಉಪಾಧ್ಯಾಯ, ೧೯೮೯, ಪುಟ ೬೧)

◆

ಅಧ್ಯಾಯ : ೫

ಸಮಾಪನ

ಅಧ್ಯಾಯ : ೫

ಸಮಾಪನ

ತುಳುನಾಡಿನ ಗೋಂದೋಳು ಪೂಜೆಯನ್ನು ಒಂದು ಜಾನಪದೀಯ ಧಾರ್ಮಿಕ ಆಚರಣೆಯಾಗಿ ಅಭ್ಯಸಿಸಲಾಗಿದ್ದು, ಅದು ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿದ್ದದ್ದು.

ಅದು ಕುಟುಂಬದ ಮತ್ತು ಊರಿನ ಅಭ್ಯುದಯಕ್ಕಾಗಿ ಕೇಂದ್ರೀಕೃತವಾದ ಆಚರಣೆಯಾಗಿದೆ. ಜೀವನದಲ್ಲಿ ಎದುರಾಗುವ ಕಷ್ಟಕಾರ್ಪಣ್ಯಗಳನ್ನು ದೂರಮಾಡುವ ಸಲುವಾಗಿ ಜನಪದರು ಕಲ್ಪಿಸಿಕೊಂಡ ಕಲ್ಪನೆಯ ರೂಪವೇ ಗೋಂದೋಳು ಪೂಜೆ.

ತುಳುನಾಡಿನ ಭೂತಾರಾಧನೆಯ ಜನಪ್ರಿಯತೆ ಗೋಂದೋಳು ಪೂಜೆ ನಡೆಸುವ ಮರಾಠಿಗರ ಮೇಲೆ ಪ್ರಭಾವ ಬೀರಿದೆ. ಈ ಭೌಗೋಳಿಕತೆ ಗೋಂದೋಳು ಪೂಜೆಗೆ ಪ್ರಶಸ್ತವಾದ ಒಂದು ವಾತಾವರಣವನ್ನು ನಿರ್ಮಾಣ ಮಾಡಿದೆ.

ಗೋಂದೋಳು ಪೂಜಾರಾಧನೆಯಲ್ಲಿ ಪ್ರಕೃತಿಯೂ ಪಾಲು ಪಡೆದಿದೆ. ಅದು ಕೃಷಿ ಪ್ರಧಾನ ಸಮುದಾಯದ ಕೊಡುಗೆಯಾಗಿದೆ. ಇಲ್ಲಿ ಮಹಿಳೆಗೆ ಪ್ರಥಮ ಪ್ರಾಸತ್ಯ ನೀಡುವುದನ್ನು ಕಾಣಬಹುದು.

ಮೂಲತಃ ಮರಾಠಿ - ನಾಯ್ಕ ಸಮುದಾಯದವರು ಮಾತ್ರ ಆಚರಿಸುತ್ತಿದ್ದ ಪೂಜೆ ಕಾಲ ಬದಲಾದಂತೆಯೇ ಇತರ ಸಮುದಾಯದ ಮೇಲೆ ಪ್ರಭಾವ ಬೀರಿದೆ. ಮತ್ತು ಅದರ ವ್ಯಾಪ್ತಿ ವಿಸ್ತಾರಗೊಳ್ಳುತ್ತಾ ಸಾಗುತ್ತಿದೆ. ಆಚರಣೆಯಲ್ಲಿ ಬಡವ - ಬಲ್ಲಿದನೆಂಬ ಅಂತರ ಎಲ್ಲಿಯೂ ಕಾಣಬರುವುದಿಲ್ಲ.

ಈ ಆಚರಣೆಯಲ್ಲಿ ನಡೆಯುವ ಕಾರ್ಯಗಳಿಗೆ ಸಂಪ್ರದಾಯವೇ ಸ್ಥಿರ ಪಠ್ಯವಾಗಿ ಕಂಡುಬರುತ್ತದೆ. ತುಳುನಾಡಿನಲ್ಲಿ ಪ್ರದೇಶದಿಂದ ಪ್ರದೇಶಕ್ಕೆ ಪಠ್ಯ ಸ್ವರೂಪದಲ್ಲಿ ಬದಲಾವಣೆಗಳನ್ನು ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

ಒಂದು ಆರೋಗ್ಯವಂತ ಸಮಾಜದ ನಿರ್ಮಾಣದಲ್ಲಿ ಧಾರ್ಮಿಕ ಕಲೆಗಳ ಆಚರಣೆಗಳು ಮಹತ್ವದ ಸ್ಥಾನವನ್ನು ಪಡೆದಿವೆ. ಜನರ ಮೇಲಿನ ವಿಶ್ವಾಸ, ನಂಬಿಕೆ, ಮಾನವೀಯತೆಯ ಕೊರತೆಯಿರುವ ಈ ಸಂದರ್ಭದಲ್ಲಿ ಗೋಂದೋಳು ಪೂಜೆಯಂತಹ ಆರಾಧನಾ ಕಲೆಗಳನ್ನು ಉಳಿಸಿ ಬೆಳೆಸುವುದು ಸಮಂಜಸವಾಗಿದೆ.

ಗೋಂದೋಳು ಪೂಜೆಯಲ್ಲಿ ಪ್ರಮುಖ ಪಾತ್ರ ವಹಿಸುವ ಮರಾಠಿ - ನಾಯ್ಕರ ಜೀವನದ ರೀತಿ - ನೀತಿ, ಆಚಾರ - ವಿಚಾರಗಳ ಮೇಲೆ ಈ ಅಧ್ಯಯನ ಬೆಳಕು ಚೆಲ್ಲುತ್ತದೆ. ಮರಾಠಿ - ನಾಯ್ಕರು ತಮ್ಮ ಧಾರ್ಮಿಕ ಅನನ್ಯತೆಯ ಸಂಕೇತವಾದ ಗೋಂದೋಳು ಪೂಜೆಯನ್ನು ಭಯ, ಭಕ್ತಿ, ಗೌರವಗಳೊಂದಿಗೆ ಉಳಿಸಿ ಬೆಳೆಸಿಕೊಂಡು ಬಂದಿದ್ದಾರೆ.

◆

ಅನುಬಂಧ

ತುಳುನಾಡಿನ ಮರಾಠಿಗರ ಜನಪದ ಸಾಹಿತ್ಯ

ಸಾಂಸ್ಕೃತಿಕ ಪದಕೋಶ

ವಕ್ತೃ ಮಾಹಿತಿ

ಪರಾಮರ್ಶನ ಗ್ರಂಥಗಳು

ನಕ್ಷೆ

ಛಾಯಾಚಿತ್ರಗಳು

ಅನುಬಂಧ

ತುಳುನಾಡಿನ ಮರಾಠಿಗರ ಜನಪದ ಸಾಹಿತ್ಯ

ಇಲ್ಲಿ 'ಗೋಂದೋಳು ಪೂಜೆ' ಆಚರಣೆಗೆ ಸಂಬಂಧಪಟ್ಟ ಸಾಹಿತ್ಯವನ್ನು ಮಾತ್ರ ತೆಗೆದುಕೊಳ್ಳಲಾಗಿದೆ. 'ಗೋಂದೋಳು ಕುಣಿತ'ದ ಹಾಡುಗಳು ಕಥನ ರೂಪದಲ್ಲಿರುವುದು ಕಂಡುಬರುತ್ತದೆ. ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸಗಳನ್ನು ಹೊಂದಿದೆ. ಆದರೂ ಮೂಲ ಮಹಾಮಾಯಿಯ (ಶ್ರೀದೇವಿಯ) ಮಹಿಮೆ, ಹುಟ್ಟು ಪ್ರಸಾರಗಳ ವರ್ಣನೆಯೇ ಮುಖ್ಯವಾಗಿರುತ್ತದೆ. ಬಂಟ್ವಾಳ ತಾಲೂಕಿನ ಮಲಾರ್ ಕೋಡಿ ಅಣ್ಣ ನಾಯ್ಕರು ಹಾಡಿನ ಬಗ್ಗೆ ಹೀಗೆ ವಿವರಿಸುತ್ತಾರೆ. "ಗೋಂದೋಳು ಕುಣಿತದ ಹಾಡು ಸುಮಾರು ೪೮ ಶ್ಲೋಕಗಳನ್ನು ಒಳಗೊಂಡಿದೆ. ಇಂದು ಯಾರಿಗೂ ಎಲ್ಲಾ ಶ್ಲೋಕಗಳು ತಿಳಿದಿಲ್ಲ. ಒಂದು ವೇಳೆ ಸರಿಯಾದ ರೀತಿಯಲ್ಲಿ ಕುಣಿಯುತ್ತಾ ನಲುವತ್ತೆಂಟು ಶ್ಲೋಕಗಳನ್ನು ಹಾಡಿದನೆಂದರೆ ಅಲ್ಲಿ ಶ್ರೀದೇವಿಯ ಆವಾಹನೆ ಆಗುತ್ತದೆ. (ಮಹಾಮಾಯಿ ಒಲಿದು ಬರುತ್ತಾಳೆ) ಮತ್ತು ಎಲ್ಲಾ ಶ್ಲೋಕಗಳೊಂದಿಗೆ ಕುಣಿತ ನಡೆಯಲು ಸುಮಾರು ಸಮಯವೂ ಹಿಡಿಯುವುದರಿಂದ ಕೇವಲ ಐದು, ಏಳು ಅಥವಾ ಒಂಭತ್ತು ಚರಣಗಳನ್ನು ಮಾತ್ರ ಇಂದು ಕಾಣಬಹುದು."

೧

ಕಲ್ಲಿನ ಕೋಟೆ ಕಟ್ಟಿದಳಂತೆ ತಾಯೇ !

ಕಲ್ಲಿನ ಕೋಟೆ ಮುರಿದಾಳಂತೇ !! (ಮುಖ್ಯ ಗಾಯಕರು)

ಲಾಗೆಲೋ ಪನಿ ಲಾಗೆಲಾಲೋ !! (ಕುಣಿತಗಾರರು)

ಮಣ್ಣಿನ ಕೋಟೆ ಕಟ್ಟಿದಳಂತೆ ತಾಯೇ !

ಮಣ್ಣಿನ ಕೋಟೆ ಮುರಿದಾಳಂತೇ !

ಲಾಗೆಲೋ ಪನಿ ಲಾಗೆಲಾಲೋ !!

ಕಬ್ಬಿಣ ಕೋಟೆ ಕಟ್ಟಿದಳಂತೆ ತಾಯೇ !

ಕಬ್ಬಿಣ ಕೋಟೆ ಮುರಿದಾಳಂತೇ !

ಲಾಗೆಲೋ ಪನಿ ಲಾಗೆಲಾಲೋ !

ಬೆಳ್ಳಿಯ ಕೋಟೆ ಕಟ್ಟಿದಳಂತೆ ತಾಯೇ !

ಬೆಳ್ಳಿಯ ಕೋಟೆ ಮುರಿದಾಳಂತೇ !

ಲಾಗೆಲೋ ಪನಿ ಲಾಗೆಲಾಲೋ !

ಚಿನ್ನದ ಕೋಟೆ ಕಟ್ಟಿದಳಂತೆ ತಾಯೇ !

ಚಿನ್ನದ ಕೋಟೆ ಮುರಿದಾಳಂತೇ !

ಲಾಗೆಲೋ ಪನಿ ಲಾಗೆಲಾಲೋ !

ವಜ್ರದ ಕೋಟೆ ಕಟ್ಟಿದಳಂತೆ ತಾಯೇ !

ವಜ್ರದ ಕೋಟೆ ಮುರಿದಾಳಂತೇ !

ಲಾಗೆಲೋ ಪನಿ ಲಾಗೆಲಾಲೋ !

ನಾಲ್ಕು ದೇಶವ ನೋಡುತ್ತಾಳೆ ತಾಯೇ

ನಾಲ್ಕು ದೇಶವ ನೋಡುತ್ತಾಳೆ !

ಲಾಗೆಲೋ ಪನಿ ಲಾಗೆಲಾಲೋ !!

(ಹಾಡು ಹೇಳಿದವರು : ನಾರಾಯಣ ನಾಯ್ಕ, ಕೂರ್ಲಿಗಯ, ಕಾಸರಗೋಡು)

ಹುಟ್ಟು

ಮಹಾಮಾಯಿ ಮಹಾದೇವಿ ಹುಟ್ಯಾಳೋ !

ಮಾಯ ರಾಜ್ಯದಲಿ ಹುಟ್ಟಿದಲೋ !!ಸೊ!!

ಲಾಗೆಲೋ ಪನಿ ಲಾಗೆಲಾಲೋ

- - - - - - - - - - -

- - - - - - - - - - -

- - - - - - - - - - -

- - - - - - - - - - -

ಜಪತಪ

ಸೂರ್ಯನ ಜಪವ ಮಾಡ್ಯಾಳೋ ತಾಯಿ !

ಸೂರ್ಯನ ಜಪವ ಮಾಡ್ಯಾಳೋ !!ಸೊ!!

ಚಂದ್ರನ ಜಪವ ಮಾಡ್ಯಾಳೋ ತಾಯಿ

ಚಂದ್ರನ ಜಪವ ಮಾಡ್ಯಾಳೋ !!ಸೊ!!

- - - - - - - -

- - - - - - - -

ರೋಗ ಸೃಷ್ಟಿ

ಒಂದೊಂದು ಜಪಕೆ ಒಂದೊಂದು ರೋಗವ ಮಾಡ್ಯಾಳೋ ದೇವಿ !

ಒಂದೊಂದು ರೋಗವ ಮಾಡ್ಯಾಳೋ !!ಸೊ!!

- - - - - - - - -

- - - - - - - - -

ಪ್ರಸರಣ

ಅಂಬರ ಮಾರ್ಗವ ನೋಡ್ಯಾಳೋ ದೇವಿ !

ಅಂಬರ ಮಾರ್ಗವ ನೋಡ್ಯಾಳೋ !!ಸೊ!!

ಒಂದೊಂದು ಮನೆಗೆ ಒಂದೊಂದು ರೋಗವ ಹಾಕ್ಯಾಳೋ ದೇವಿ !

ಒಂದೊಂದು ರೋಗವ ಹಾಕ್ಯಾಳೋ !! ಸೊ!!

- - - - - - - - -

- - - - - - - - -

ನಿವಾರಣೆ

ರಾಶಿ ಪೂಜೆಯ ಮಾಡ್ಯಾರಂತೆ ದೇವಿಗೆ !

ರಾಶಿ ಪೂಜೆಯ ಮಾಡ್ಯಾರಂತೆ !! ಸೊ!!

- - - - - - - -

- - - - - - - -

ಸಾವಿರ ಮನೆಯ ಸಾವಿರ ರೋಗವ ತೆಗೆದಾಳೋ ದೇವಿ !

ಸಾವಿರ ರೋಗವ ತೆಗೆದಾಳೋ !!ಸೊ!!

[ಹಾಡು : ಪೂವಪ್ಪ ಕಣಿಯೂರು, ೧೯೯೫, 'ಶಕ್ತ್ಯಾರಾಧನೆಯಾಗಿ ಗೋಂದೋಳು ಪೂಜೆ' (ಸಿರಿ), ಅಮೃತ ಸೋಮೇಶ್ವರ ಅಭಿನಂದನಾ ಗ್ರಂಥ]

◆

ಸಾಂಸ್ಕೃತಿಕ ಪದಕೋಶ

೧.	ಅಗೆಲು	ಭೂತಕ್ಕೆ (ದೈವ) ಒಪ್ಪಿಸುವ ಮಾಂಸದ ಅಡುಗೆಯ ಎಡೆ.
೨.	ಅಗೆಲ್ ಬಳಸುನಿ	ದೈವಗಳಿಗೆ ಮತ್ತು ಗತಿಸಿದ ಹಿರಿಯರಿಗೆ ಬಾಳೆ ಎಲೆಯಲ್ಲಿ ಆಹಾರವನ್ನು ಬಡಿಸಿ ಪ್ರಾರ್ಥಿಸುವುದು.
೩.	ಅಮ್ಮೊರು	ಅಮ್ಮನವರು, ಮಾತೃದೇವತೆ.
೪.	ಅಮೆ	(ತುಳು) ಮಗುವಿನ ಜನಪದ ಹನ್ನೊಂದನೇ ದಿನದ ಕ್ರಿಯೆಗಳು
೫.	ಅಣ್ಣಪ್ಪ ಪಂಜುರ್ಲಿ	ಪಂಜುರ್ಲಿ ದೈವದ ಒಂದು ಅವತಾರ.
೬.	ಅಸುರ ಕ್ರಿಯೆ	ದೈವಗಳಿಗೆ ಮಾಂಸಹಾರ ಅರ್ಪಿಸಿ ಮಾಡುವ ಆರಾಧನೆ.
೭.	ಆಟಿ ಕಳಂಜ	ಊರಿನ ಅನಿಷ್ಟ ನಿವಾರಣೆ ಮಾಡುವ ತುಳುನಾಡಿನ ಒಂದು ಆಚರಣೆ.
೮.	ಈಡು ಬಿಡುವುದು	ದೈವಕ್ಕೆ ಬಲಿಕೊಡುವ ಹಂದಿ, ಕೋಳಿ, ಕುರಿಗಳನ್ನು ಮೊದಲೇ ಹರಕೆ ಬಿಡುವುದು.
೯.	ಕಣಿ ಇಡುವುದು	ವಿಶು ಸಂಕ್ರಮಣದಂದು ದೇವರಿಗೆ ಜ್ಯೋತಿ ಬೆಳಗಿಸಿ ಅಕ್ಕಿ, ತೆಂಗಿನಕಾಯಿ, ಸೌತೆಕಾಯಿ ಕುಂಬಳಕಾಯಿಗಳನ್ನು ಅರ್ಪಿಸಿ ಪ್ರಾರ್ಥಿಸುವುದು.
೧೦.	ಕಲಶಪಾತ್ರೆ	ಮಣ್ಣಿನ ಸಣ್ಣ ಮಡಕೆ.
೧೧.	ಕಲ್ಲುರ್ಟಿ	ಕಾರ್ಕಳದ ಗೊಮ್ಮಟ ವಿಗ್ರಹವನ್ನು ನಿರ್ಮಿಸಿದನೆಂದು ಹೇಳಲಾಗುವ ಶಿಲ್ಪಿ ಕಲ್ಕುಡನ ತಂಗಿ ಕಲ್ಕುರ್ಟಿ.
೧೨.	ಕಾಲಾಧಿ	ವರ್ಷವರ್ಷಕ್ಕೆ ದೈವಗಳಿಗೆ ಮಾಡುವ ಆರಾಧನೆ.

೧೩. ಕುರ್ದಿ — ಸುಣ್ಣ ಮತ್ತು ಅರಸಿನ ಬೆರಸಿದ ಓಕುಳಿ ನೀರು.

೧೪. ಕುಲೆ — ಪ್ರೇತ.

೧೫. ಕೋಲ — ಭೂತಾರಾಧನೆಯ ಒಂದು ಪ್ರಭೇದ.

೧೬. ಕೋಳ್ತಿರಿ — ಎಳೆಯ ತೆಂಗಿನ ಗರಿ ಮತ್ತು ಬಾಳೆಯ ಹಿಂಡಿನಿಂದ ರಚಿಸಿದ ತ್ರಿಕೋನಾಕಾರದ ಬುಟ್ಟಿ.

೧೭. ಗದ್ದಿಗೆ — ಮಹಾಮಾಯಿಯನ್ನು (ಮೂರ್ತಿಯನ್ನು) ಕುಳ್ಳಿರಿಸಿದ ಸ್ಥಳ.

೧೮. ಗದ್ದುಗೆ — ಉಡುಪಿ ಜಿಲ್ಲೆಯಲ್ಲಿನ ಗ್ರಾಮಗಳಲ್ಲಿರುವ ಮಹಾಮಾಯಿಯ ಮೂರ್ತಿ ಇರುವ ಗುಡಿ.

೧೯. ಗರ್ನಾಲ್ — ಒಂದು ಬಗೆಯ ಸಿಡಿಮದ್ದು.

೨೦. ಗುಮ್ಮಟೆ — ಒಂದು ವಾದ್ಯ ವಿಶೇಷ.

೨೧. ಗುಳಿಗ — ರುದ್ರಾಂಶ ಸಂಭೂತವಾದ ಕ್ರೂರದೈವ.

೨೨. ಗೇಟ್ — (ಮರಾಠಿ) ಕಲಶಪಾತ್ರೆ.

೨೩. ಚೆನ್ನಮಣೆ — ಎರಡು ಸಾಲುಗಳಲ್ಲಿ ಏಳೇಳು ಕುಳಿಗಳಿರುವ ಮಣೆ. ಕುಳಿಗಳಲ್ಲಿ ಕಾಯಿಗಳನ್ನು ಹಾಕಿ ವಿಧ ವಿಧವಾದ ಆಟಗಳನ್ನು ಆಡುತ್ತಾರೆ.

೨೪. ಚೌಡಿಕೆ — ಕಂಚಿನ ಲೋಹದಿಂದ ಮಾಡಿದ ಶೃತಿವಾದ್ಯ.

೨೫. ಜಾಗಟೆ — ಪಂಚಲೋಹದಿಂದ ಮಾಡಿದ ಬಟ್ಟಲಿನಾಕಾರದ ಗಂಟೆ.

೨೬. ತಂಬಿಲ — ಸರಳ ಸಾತ್ವಿಕ ರೂಪದ ಭೂತ ನೈವೇದ್ಯ.

೨೭. ದರ್ಶನ (ಪಾತ್ರಿ) — ಮೈಮೇಲೆ ದೇವರ ಅಥವಾ ಭೂತದ ಆವೇಶ ಬರುವಿಕೆ.

೨೮. ದೇವರ ಮನಿ — ಪೂಜೆ ಮಾಡಲು 'ಗುರುಪದೇಶ' ಪಡೆದ ವ್ಯಕ್ತಿ.

೨೯. ದೊನ್ನೆ — ಬಾಳೆ ಎಲೆಯಿಂದ ನಿರ್ಮಿಸಿದ ಸಣ್ಣ ಪಾತ್ರದಂತಹ ರಚನೆ.

೩೦. ನುಡಿಗಟ್ಟು — ಹತ್ತು ಸಮಸ್ತರು ಸೇರಿ ಪ್ರಾರ್ಥಿಸುವ ನುಡಿಗಳು.

೩೧. ನೇಮ — ಗ್ರಾಮದೇವತೆಗಳಿಗೆ ಕೊಡುವ ಭೋಗರೂಪದ ಆರಾಧನೆ.

೩೨. ಪಂಜುರ್ಲಿ — ಕಾಡುಹಂದಿಯ ಪ್ರತಿರೂಪವಾದ ದೈವ.

೩೩. ಪರ್ಬ ತಂಬಿಲ — ದೀಪಾವಳಿಯಂದು ದೈವಕ್ಕೆ ನೀಡು ನೈವೇದ್ಯ. ಆರಾಧನೆ.

೩೪.	ಪನಿಯಾರ	ದೈವಗಳಿಗೆ ನೈವೇದ್ಯವಾಗಿ ಬಡಿಸಿಟ್ಟ ಅರಳು. ಕಜ್ಜಾಯ ತೆಂಗಿನಕಾಯಿ ಮುಂತಾದ ಸಾಧನಗಳು.
೩೫.	ಪುದ್ವಾರ್	ವಾರ್ಷಿಕ ಮೊದಲ ಫಲ ಪೈರುಗಳನ್ನು ದೇವರಿಗೆ ಅರ್ಪಣೆ (ಹೊಸ ಅಕ್ಕಿ ಊಟ).
೩೬.	ಪುಂಡಿ ಅರಿ	ಬೊಗಸೆ ಅಕ್ಕಿಯನ್ನು ಮೂರು ಸಾರಿ ಎಲೆಯಲ್ಲಿ ಇರಿಸುವುದು. (ದೇವರಿಗೆ)
೩೭.	ಪ್ರಬಲ್ಯ	ಹೂಗಳಿಂದ ಅಲಂಕರಿಸಿ ಕಮಾನಿನಾಕಾರದ ತೆಂಗಿನ ಸಾರು.
೩೮.	ಬಂಡಾರ ಮಡಕೆ	ಕಳ್ಳು (ಶೇಂದಿ) ತುಂಬಿಸಿದ ಮಡಕೆ (ಭೈರವನಿಗಾಗಿ).
೩೯.	ಬಂಟ	ಒಂದು ಸೇವಕ ಭೂತ.
೪೦.	ಬನೊ	ಬನ.
೪೧.	ಬಲಿ ಪದ್ಧತಿ	ಪ್ರಾಣಿಗಳ ಬಲಿಕೊಟ್ಟು ಮಾಡುವ ಆಚರಣೆ.
೪೨.	ಭೈರವ	ತುಳುನಾಡಿನ ಒಂದು ದೈವ.
೪೩.	ಮಂಡಲ	ಸ್ವಸ್ತಿಕೆ ಇಡುವುದಕ್ಕೆ ಮೊದಲು ನೆಲದಲ್ಲಿ ಬರೆದ (ಬಿಡಿಸುವ) ರಂಗವಲ್ಲಿ.
೪೪.	ಮುಡಿಪು	ದೇವರ ಹೆಸರಲ್ಲಿ ಇಡುವ ಹಣ.
೪೫.	ಮೂಲ್ಯ	ಕುಂಬಾರ.
೪೬.	ವಂತಿಗೆ	ಕೋಲ, ನೇಮ, ಪೂಜೆಗಳಿಗೆ ಕೊಡುವ ದೇಣಿಗೆ.
೪೭.	ಸತ್ತಿಗೆ	ಮಹಾಮಾಯಿಯನ್ನು ಪ್ರತಿನಿಧಿಸುವ ಬೆಳ್ಳಿ ಬಂಗಾರದ ಪರಿಕರ.
೪೮.	ಸೂಟೆ	ತೆಂಗಿನ ಒಣ ಸೋಗೆಗಳಿಂದ ಮಾಡಿದ ಪಂಜು.
೪೯.	ಹಿಂಗಾರ	ಅಡಿಕೆ ಮರದ ಎಳೆಯ ಹೊಂಬಾಳೆ.

◆

ವಕ್ತೃಮಾಹಿತಿ

೧. ದೇಜು ನಾಯ್ಕ (೧೦೬ವರ್ಷ) ನೇರಳಕಜೆ, ಇಡ್ಕಿದು ಗ್ರಾಮ. ಬಂಟ್ವಾಳ ತಾಲೂಕು.

೨. ಸೋಮ ನಾಯ್ಕ (೬೦ವರ್ಷ) ಶಿವಪುರ ಅಂಚೆ ಕಾರ್ಕಳ ತಾ. ಉಡುಪಿ ಜಿಲ್ಲೆ.

೩. ಸುಬ್ಬಯ್ಯ ಶೆಟ್ಟಿ (೬೦ವರ್ಷ) ಅಂಬಾಗಿಲು, ಪೆರ್ಡೂರು ಉಡುಪಿ ತಾ. ಉಡುಪಿ ಜಿಲ್ಲೆ.

೪. ಕರುಂಬಿಲ್ ನಾಯ್ಕ (೭೦ವರ್ಷ) ಎಡಂಬಳ್ಳಿ, ಶಿವಪುರ ತಾ. ಮತು ಜಿಲ್ಲೆ.

೫. ರಮೇಶ ನಾಯ್ಕ (೭೦ವರ್ಷ) ಎಡಂಬಳ್ಳಿ. ಶಿವಪುರ ಉಡುಪಿ ತಾ. ಮತ್ತು ಜಿ.

೬. ಕೆ. ರಂಗನಾಥ ನಾಯ್ಕ (೭೦ವರ್ಷ) ಕಾಸರಮೂಲೆ. ಪಾಲ್ತಾಡು ಅಂಚೆ, ಪುತ್ತೂರು ತಾ. ದಕ್ಷಿಣ ಕನ್ನಡ ಜಿಲ್ಲೆ.

೭. ಕಿಟ್ಟಣ್ಣ ನಾಯ್ಕ (೩೮ವರ್ಷ) ಶಾಂತಿಗೋಡು. ಪುತ್ತೂರು ತಾಲೂಕು.

೮. ಚೋಮ ನಾಯ್ಕ (೭೦ವರ್ಷ) ಶಾಂತಿಗೋಡು. ಪುತ್ತೂರು ತಾಲೂಕು.

೯. ವೆಂಕಪ್ಪ ನಾಯ್ಕ (೬೫ವರ್ಷ) ಪುಣಚಪ್ಪಾಡಿ, ಸವಣೂರು ಪುತ್ತೂರು ತಾಲೂಕು.

೧೦. ತಿಮ್ಮಪ್ಪ ಗೌಡ (೫೫ವರ್ಷ) ಪಾಲೆಪ್ಪಾಡಿ, ಐವರ್ನಾಡು ಸುಳ್ಯ ತಾಲೂಕು.

೧೧. ನಾರಾಯಣ ನಾಯ್ಕ (೫೩ವರ್ಷ) ಕೂರ್ಲಿಗಯ, ಎಣ್ಮಕಜೆ ಗ್ರಾಮ. ಕಾಸರಗೋಡು ತಾ. ಮತ್ತು ಜಿಲ್ಲೆ. (ಕೇರಳ)

೧೨. ರಾಮ ನಾಯ್ಕ (೪೮ವರ್ಷ) ಕೂರ್ಲಿಗಯ, ಎಣ್ಮಕಜೆ ಗ್ರಾಮ. ಕಾಸರಗೋಡು ತಾಲೂಕು.

೧೩. ಪುಟ್ಟಣ್ಣ ನಾಯ್ಕ (೬೧ವರ್ಷ) ಪುಣಚಪ್ಪಾಡಿ ಸವಣೂರು ಅಂಚೆ ಪುತ್ತೂರು ತಾಲೂಕು.

೧೪. ವೆಂಕಪ್ಪ ನಾಯ್ಕ (೬೫ವರ್ಷ) ಕೋಡಿಂಬಾಡಿ ಅಂಚೆ. ಪುತ್ತೂರು ತಾಲೂಕು.

೧೫. ಶಾರದಾ ಬಿ. (೫೫ವರ್ಷ) ಬಾಬುಮೂಲೆ ಅಡ್ಯನಡ್ಕ ಅಂಚೆ ಬಂಟ್ವಾಳ ತಾಲೂಕು.

೧೬. ಪೂವಪ್ಪ ನಾಯ್ಕ (೨೮ವರ್ಷ) ಅಡ್ಯನಡ್ಕ ಅಂಚೆ ಬಂಟ್ವಾಳ ತಾಲೂಕು.

೧೭. ಪುರುಷೋತ್ತಮ ನಾಯ್ಕ (೩೦ವರ್ಷ) ಬರಮೇಲು ಸವಣೂರು ಅಂಚೆ ಪುತ್ತೂರು ತಾಲೂಕು.

೧೮. ಎ.ಕೃಷ್ಣ ನಾಯ್ಕ (೬೫ವರ್ಷ) ಅಮ್ಮೆ, ಅಡ್ಯನಡ್ಕ ಅಂಚೆ ಬಂಟ್ವಾಳ ತಾಲೂಕು.

೧೯. ಸೀತಾ ಕೆ. (೪೦ವರ್ಷ) ಕೂರ್ಲಿಗಯ, ಎಣ್ಮಕಜೆ ಗ್ರಾಮ ಕಾಸರಗೋಡು.

೨೦. ಲಿಂಗಪ್ಪ ನಾಯ್ಕ (೪೦ವರ್ಷ) ಅಡ್ಯನಡ್ಕ ಬಂಟ್ವಾಳ ತಾಲೂಕು.

೨೧. ಮಲಾರ್ ಕೋಡಿ ಅಣ್ಣುನಾಯ್ಕ (೬೫ವರ್ಷ) ಸಾಲೆತ್ತೂರು ಅಂಚೆ. ಬಂಟ್ವಾಳ ತಾಲೂಕು.

೨೨. ಪದ್ಮಯ್ಯ ನಾಯ್ಕ (೪೮ವರ್ಷ) ಸರ್ವೆ, ದರ್ಬಾಸ್ತು ಪುತ್ತೂರು ತಾಲೂಕು.

೨೩. ವೀರಪ್ಪ ನಾಯ್ಕ (೪೦ವರ್ಷ) ಕೋಡಿಂಬಾಡಿ ಪುತ್ತೂರು ತಾಲೂಕು.

೨೪. ಲಿಂಗಪ್ಪ ಕೆ. (೩೫ವರ್ಷ) ಕಣಿಯೂರು, ಕನ್ಯಾನ ಬಂಟ್ವಾಳ ತಾಲೂಕು.

೨೫. ಬಾನು ನಾಯ್ಕ ಬಿ. (೮೫ವರ್ಷ) ಬಾಬು ಮೂಲೆ, ಅಡ್ಯನಡ್ಕ ಬಂಟ್ವಾಳ ತಾಲೂಕು.

೨೬. ದೇವಣ್ಣ ನಾಯ್ಕ (೨೭ವರ್ಷ) ಕೂರ್ಲಿಗಯ ಅಡ್ಯನಡ್ಕ ಕಾಸರಗೋಡು.

೨೭. ನಾರಾಯಣ ನಾಯ್ಕ (೫೩ವರ್ಷ) ಸಾಲೆತ್ತೂರು ಬಂಟ್ವಾಳ ತಾಲೂಕು.

೨೮. ನಾರ್ಣಪ್ಪ ನಾಯ್ಕ (೫೦ವರ್ಷ) ಸರ್ವೆ ಪುತ್ತೂರು ತಾಲೂಕು.

೨೯. ಕೃಷ್ಣ ನಾಯ್ಕ (೪೦ವರ್ಷ) ಚಂದ್ರಗಿರಿ, ಪಾಣಾಜೆ ಪುತ್ತೂರು ತಾಲೂಕು.

೩೦. ಈಶ್ವರ ನಾಯ್ಕ (೫೫ವರ್ಷ) ಮಂಜಿಮೂಲೆ, ಸಜಂಕಿಲ ಕಾಸರಗೋಡು ತಾ. ಮತ್ತು ಜಿಲ್ಲೆ.

೩೧. ನಾರಾಯಣ (೫೦ವರ್ಷ) ಕೈಕಾರ ಬೆಟ್ಟಂಪಾಡಿ ಪುತ್ತೂರು ತಾಲೂಕು. ದಕ್ಷಿಣ ಕನ್ನಡ ಜಿಲ್ಲೆ.

◆

ಪರಾಮರ್ಶನ ಗ್ರಂಥಗಳು

೧. ಡಾ. ಅಂಬಳಿಕೆ ಹಿರಿಯಣ್ಣ, ೧೯೮೬, "ಜಾನಪದ ವಿವಕ್ಷೆ", ಪ್ರಜ್ವಲ ಪ್ರಕಾಶನ, ಮೈಸೂರು.

೨. ಡಾ. ಅಂಬಳಿಕೆ ಹಿರಿಯಣ್ಣ, ೧೯೯೨, "ಸೈದ್ಧಾಂತಿಕ ಜಾನಪದ", ಪ್ರಜ್ವಲ ಪ್ರಕಾಶನ, ಮೈಸೂರು.

೩. ಅಮೃತ ಸೋಮೇಶ್ವರ (ಸಂ) , ೧೯೯೭ , "ತುಳು ಪಾಡ್ದನ ಸಂಪುಟ" , ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪. ಆಶೀಶ್ ನಂದಿ ೧೯೯೫ , "ಆಶೀಶ್ ನಂದಿ ವಿಚಾರ" , ಅಕ್ಷರ ಪ್ರಕಾಶನ, ಹೆಗ್ಗೋಡು.

೫. ಡಾ. ಬೋರಲಿಂಗಯ್ಯ ಹಿ.ಚಿ. (ಸಂ) , ೧೯೯೬ , "ಕರ್ನಾಟಕ ಜನಪದ ಕಲೆಗಳ ಕೋಶ" , ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬. ಡಾ. ಬೋರಲಿಂಗಯ್ಯ ಹಿ.ಚಿ , ೨೦೦೦ , "ಬುಡಕಟ್ಟು ದೈವಾರಾಧನೆ" , ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭. ಡಾ. ಬಿ.ಎಸ್. ಸ್ವಾಮಿ , ೧೯೯೩ , "ಮಲೆಯ ಮಾದೇಶ್ವರ : ಒಂದು ಅಧ್ಯಯನ" , ನವೀನ ಪ್ರಕಾಶನ, ಬೆಂಗಳೂರು.

೮. ಡಾ.ಎಂ. ಚಿದಾನಂದಮೂರ್ತಿ, ೧೯೯೬, "ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ" (ಕ್ರಿ.ಶ. ೪೫೦ - ೧೧೫೦), ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

೯. ಡಾ. ಚಂದ್ರಶೇಖರ ಕಂಬಾರ (ಸಂ), ೧೯೮೫ "ಕನ್ನಡ ಜಾನಪದ ವಿಶ್ವಕೋಶ", ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೦. ಡಾ. ಚಂದ್ರಶೇಖರ ದಾಮ್ಲೆ ೧೯೯೧ "ಗತಿಬಿಂಬ ಸುಳ್ಯ ೧೯೯೧" ಸಮಾಜಶಾಸ್ತ್ರ ಸಂಘ, ಎನ್.ಎಂ.ಸಿ. ಸುಳ್ಯ.

೧೧. ಚನ್ನಬಸಪ್ಪ ಗೊ.ರೂ, ೧೯೭೭, "ಕರ್ನಾಟಕ ಜನಪದ ಕಲೆಗಳು", ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೨. ಚಕ್ಕೆರೆ ಶಿವಶಂಕರ್, ೧೯೮೦, "ಜಾನಪದ ಚಿಂತನ", ಕಲ್ಯಾಣಿ ಪ್ರಕಾಶನ, ಬೆಂಗಳೂರು.

೧೩. ಡಾ. ಚಿನ್ನಪ್ಪ ಗೌಡ, ೧೯೮೫, "ಜಾಲಾಟ", ಚಿಂತನೆ ವೇದಿಕೆ, ಉಜಿರೆ, ದಕ್ಷಿಣಕನ್ನಡ.

೧೪. ಡಿ.ವಿ.ಡಿ. (ಜಿ.ವಿ.ದಾಸೇಗೌಡ), ೧೯೭೮, "ಕನ್ನಡ ಐತಿಹ್ಯಗಳು", ತೇಜಸ್ವಿನಿ ಪ್ರಕಾಶನ,

೧೫. ಡಾ. ಗೋವಿಂದರಾಜು ಟಿ, ೨೦೦೦, "ಜಾನಪದೀಯ", ಪುಸ್ತಕ ಜೇನು ಪ್ರಕಾಶನ, ಚೆನ್ನದೇವಿ ಅಗ್ರಹಾರ ಕಾಡನೂರು, ದೊಡ್ಡ ಬಳ್ಳಾಪುರ.

೧೬. ಡಾ. ಗೋವಿಂದರಾಜು ಟಿ, ೧೯೯೩, "ಚನ್ನಾದೇವಿ ಅಗ್ರಹಾರ ಒಂದು ಜಾನಪದೀಯ ಅಧ್ಯಯನ" ಪುಸ್ತಕ ಜೇನು ಪ್ರಕಾಶನ, ಚೆನ್ನದೇವಿ ಅಗ್ರಹಾರ ಕಾಡನೂರು, ದೊಡ್ಡಬಳ್ಳಾಪುರ.

೧೭. ಡಾ. ಗೋವಿಂದರಾಜು ಟಿ, ೧೯೯೩, "ಗೊಂಬೆ ರಾಮರ ಸಂಸ್ಕೃತಿ", ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೮. ಕೃಷ್ಣಭಟ್ ಹೇರಂಜೆ ಮತ್ತು ಮುರಳೀಧರ ಉಪಾಧ್ಯಾಯ ಹಿರಿಯಡಕ (ಸಂ), ೧೯೯೫, "ಗೋವಿಂದ ಪೈ ಸಂಶೋಧನಾ ಸಂಪುಟ", ಆರ್ ಆರ್ ಸಿ. ಉಡುಪಿ.

೧೯. ಡಾ. ಗಾಯತ್ರಿ ನಾವಡ, ೧೯೯೯, "ಕರಾವಳಿ ಜನಪದ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು", ಆರ್ ಆರ್ ಸಿ. ಉಡುಪಿ ಮತ್ತು ಸಿರಿ ಪ್ರಕಾಶನ, ಹೊಸಪೇಟೆ.

೨೦. ಹಿರೇಮಠ ಎಸ್ .ಎಸ್, ೧೯೯೩, "ಜಾತ್ರೆಗಳು", ಸಮತಾ ಪ್ರಕಾಶನ, ಹೊಸಪೇಟೆ.

೨೧. ಕಿಶೋರ್ ಕುಮಾರ್ ರೈ. ಶೇಣಿ, "ತುಳುನಾಡಿನ ಕೋಳಿ ಅಂಕ (ಅಪ್ರ), ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೨. ಡಾ. ಕಲಬುರ್ಗಿ ಎಂ.ಎಂ. (ಸಂ), ೧೯೯೪, "ಕರ್ನಾಟಕ ಕೈಫಿಯತ್ತುಗಳು", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೩. ಕೃ.ಭ. ಪೆರ್ಲ, ೧೯೯೦, "ಕಾಸರಗೋಡಿನ ಕರ್ಹಾಡ ಬ್ರಾಹ್ಮಣರು", (ಗಡಿನಾಡ ಕಿಡಿ) ಲಲಿತ ಸದನ ಕಾಸರಗೋಡು.

೨೪. ಕಮಲಾಕ್ಷ ಪಿ, ೧೯೯೪, "ದಕ್ಷಿಣಕನ್ನಡ ಜಿಲ್ಲೆಯ ಹರಿಜನ ಮತ್ತು ಗಿರಿಜನರ ಸಾಮಾಜಿಕ ಇತಿಹಾಸ", ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೨೫. ಡಾ. ಎಲ್ .ಆರ್ .ಹೆಗಡೆ (ಲೇ), ವಿ.ಸೀತಾರಾಮಯ್ಯ (ಸಂ), ೧೯೭೮, "ಜನಪದ ಸಾಹಿತ್ಯ", ಐಬಿಎಚ್ ಪ್ರಕಾಶನ, ಬೆಂಗಳೂರು.

೨೬. ಮುದ್ದು ಮೂಡುಬೆಳ್ಳಿ, ೧೯೯೮, "ಕಾಂತಬಾರೆ ಬೂದಬಾರೆ", ಗೆಳೆಯರ ಬಳಗ ಪ್ರಕಾಶನ, ಮಂಗಳೂರು.

೨೭. ಮುದೇನೂರು ಸಂಗಣ್ಣ, ೧೯೯೩, "ಗೊಂದಲಿಗರ ದೇವೇಂದ್ರಪ್ಪನವರ ಆಟಗಳು", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೮. ಮಾಧವ ಪೆರಾಜೆ, ೧೯೯೪, "ಹೊಸಪೇಟೆ ತಾಲೂಕಿನ ಗಂಡು ಜೋಗಮ್ಮರ ಅಧ್ಯಯನ", ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ಅಪ್ರಕಟಿತ ಪ್ರೌಢ ಪ್ರಬಂಧ.

೨೯. ಡಾ. ಮುದ್ದಾಚಾರಿ ಬಿ. ೧೯೭೫ "ಮೈಸೂರು ಮರಾಠ ಭಾಂದವ್ಯ" ಕ.ಅ.ಸಂಸ್ಥೆ ಮೈಸೂರು ವಿ.ವಿ.

೩೦. ನಾವಡ ಎ.ವಿ, ಶುಬಾಶ್ಚಂದ್ರ (ಅನು), ಪೀಟರ್ ಜೆ. ಕ್ಲಾಸ್(ಮೂಲ), ೧೯೮೭, "ತುಳುವ ದರ್ಶನ", ಕುಂದಾಪುರ ಪ್ರಾದೇಶಿಕ ವ್ಯಾಸಂಗ ಕೇಂದ್ರ.

೩೧. ನಾವಡ ಎ.ವಿ, ೧೯೯೩, "ಜಾನಪದ ಸಮಾಲೋಚನೆ", ಕನ್ನಡ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೩೨. ನರಸಿಂಹ ಭಟ್ಟ ಕೈತಂಜೆ, ೧೯೭೭, "ಸುದರ್ಶನ", (ಡಾ.ಟಿ.ಎಂ.ಎ.ಪೈ. ಅಭಿನಂದನ ಗ್ರಂಥ), ವಿಜಯಾ ಕಾಲೇಜ್ ಟ್ರಸ್ಟ್, ಮೂಲ್ಕಿ, ದಕ್ಷಿಣಕನ್ನಡ.

೩೩. ಡಾ. ಪುರುಷೋತ್ತಮ ಬಿಳಿಮಲೆ, ೧೯೯೦, "ಕರಾವಳಿ ಜಾನಪದ", ಮಂಗಳ ಗಂಗೋತ್ರಿ, ದ.ಕ.

೩೪. ಡಾ.ಪುರುಷೋತ್ತಮ ಬಿಳಿಮಲೆ, ೧೯೯೨, "ಶಿಷ್ಟ ಪರಿಶಿಷ್ಟ", ಮದಿಪು ಪ್ರಕಾಶನ, ಮಂಗಳ ಗಂಗೋತ್ರಿ.

೩೫. ಡಾ. ಪುರುಷೋತ್ತಮ ಬಿಳಿಮಲೆ, ೧೯೯೬, "ಹಂಪಿ ಜಾನಪದ", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,ಹಂಪಿ.

೩೬. ಡಾ. ಪರಮಶಿವಯ್ಯ ಜೀ.ಶಂ, ೧೯೭೯, "ದಕ್ಷಿಣ ಕರ್ನಾಟಕದ ಜನಪದ ಕಾವ್ಯಪ್ರಕಾರಗಳು", ಪ್ರಸಾರಾಂಗ, ಮೈಸೂರು ವಿ.ವಿ.

೩೭. ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್, ೧೯೯೯, "ತುಳುನಾಡು ನುಡಿ", ಕರ್ನಾಟಕ ಸಂಘ, ಪುತ್ತೂರು, ದ.ಕ.

೩೮. ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್, ೧೯೯೮, ''ಕಲ್ಕುಡ ಕಲ್ಲುರ್ಟಿ ಸಂಸ್ಕೃತಿ ಶೋಧ'', ಸುಪ್ರಿಯಾ ಪ್ರಕಾಶನ, ಪುತ್ತೂರು, ದ.ಕ.

೩೯. ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್, ೧೯೯೭, ''ಜಾನಪದ ಮಿನದನ'', ಸುಪ್ರಿಯಾ ಪ್ರಕಾಶನ, ಪುತ್ತೂರು ದ.ಕ.

೪೦. ಪೂವಪ್ಪ ಕಣಿಯೂರು (ಲೇ), ೧೯೯೫, ''ಸಿರಿ'' ಅಮೃತ ಸೋಮೇಶ್ವರ ಅಭಿನಂದನಾ ಸಂಪುಟ'',

೪೧. ರಾಮಣ್ಣ ಕ್ಯಾತನಹಳ್ಳಿ (ಸಂ) ೧೯೭೨, ''ಗೊಂದಲಿಗರ ಕಥೆಗಳು'', ಕ.ಅ.ಸ. ಮೈಸೂರುವಿ.ವಿ.

೪೨. ರಾಮಣ್ಣ ಕ್ಯಾತನಹಳ್ಳಿ, ೧೯೮೨, ''ಗೊಂದಲಿಗರ ಒಂದು ಅಧ್ಯಯನ'', ಕ.ಅ.ಸಂಸ್ಥೆ, ಮೈಸೂರು ವಿ.ವಿ.

೪೩. ರೋಹಿಣಿ ಬಿ.ಎಂ, ೨೦೦೦, ''ಸ್ತ್ರೀ ಸಂಸ್ಕೃತಿ ಶಿಕ್ಷಣ'', ಹೇಮಾಂಶು ಪ್ರಕಾಶನ ಮಂಗಳೂರು ದ.ಕ.

೪೪. ರಮೇಶ ಸ.ಚಿ, ೧೯೯೪, ''ಉಪ್ಪಾರದ ಮದುವೆ ಸಂಪ್ರದಾಯಗಳು'', ಕನ್ನಡ ವಿಶ್ವವಿದ್ಯಾಲಯ, ಹಂಪಿ.

(ಅಪ್ರಕಟಿತ ಎಂ.ಫಿಲ್. ಪ್ರೌಢ ಪ್ರಬಂಧ)

೪೫. ರಮೇಶ್ ಸ.ಚಿ, ೧೯೯೪, ''ಬಳ್ಳಾರಿಯ ದುರ್ಗಮ್ಮ'', ಪ್ರಸಾರಾಂಗ, ಮೈಸೂರು ವಿ.ವಿ.

೪೬. ರಮೇಶ್ ಕೆ.ವಿ, ೧೯೬೮, ''ತುಳುನಾಡಿನ ಇತಿಹಾಸ'', ಗೀತಾ ಬುಕ್ ಹೌಸ್ , ಮೈಸೂರು.

೪೭. ಡಾ. ರಾಮಭಟ್ಟ ಉಪ್ಪಂಗಳ, ೧೯೯೪, ''ಗಡಿನಾಡು ಕಾಸರಗೋಡು'', ಅಕಲಂಕ ಪ್ರಕಾಶನ, ಉಡುಪಿ.

೪೮. ಡಾ. ಎಸ್. ಎಸ್. ಬ್ಯಾತನಾಳ (ಅನು), ೧೯೮೧, ''ಮರಾಠಿ ಲೋಕ ಸಾಹಿತ್ಯ'', ಕ.ಸಾ.ಪರಿಷತ್ತು, (ಮೂಲ: ಡಾ.ಸದಾ.ಕರಾಡೆ) ಬೆಂಗಳೂರು.

೪೯. ಶಿವಾನಂದ ಬೇಕಲ್, ೧೯೯೯, ''ಬೇಕಲಕೋಟೆ - ಒಂದು ಚಾರಿತ್ರಿಕ ಅಧ್ಯಯನ'', ಕನ್ನಡ ಸಾಹಿತ್ಯ ಪರಿಷತ್ತು, ಮತ್ತು ಕೇರಳ ಗಡಿನಾಡು ಕಾಸರಗೋಡು.

೫೦. ಡಾ.ಸುಶೀಲಾ ಪಿ.ಉಪಾಧ್ಯಾಯ, ೧೯೮೯, ''ಜನಪದ ಆರಾಧನೆ ಮತ್ತು ರಂಗಕಲೆ'', ಆರ್ ಆರ್ ಸಿ, ಉಡುಪಿ.

೫೧. ಡಾ.ಸುಬ್ಬಣ್ಣ ರೈ ಎ, ''ದ.ಕ.ಜಿಲ್ಲೆಯ ಐತಿಹ್ಯಗಳು'', ಜೂನಿಯರ್ ಛೇಂಬರ್ , ಮಾಣಿ ಉಡುಪಿ.

೫೨. ಡಾ. ಸುಶೀಲಾ ಪಿ. ಉಪಾಧ್ಯಾಯ, ೧೯೯೮, ''ದಕ್ಷಿಣ ಭಾರತ ಜಾನಪದ'' ಆರ್ ಆರ್ ಸಿ, ಉಡುಪಿ.

೫೩. ಡಾ. ಶಿರೂರ್ ಬಿ.ವಿ, ೧೯೯೨, ''ಸಂಶೋಧನಾ ಸ್ವರೂಪ'', ಅನ್ನಪೂರ್ಣ ಪ್ರಕಾಶನ ಹುಬ್ಬಳ್ಳಿ.

೫೪. ಸತ್ಯನಾಥ ಟಿ.ಎಸ್, ೧೯೯೬, ''ಕನ್ನಡ ಜಾನಪದ ಕೆಲವು ಮುಖಗಳು'', ಶಾರದಾ ಪ್ರಕಾಶನ, ಬೆಂಗಳೂರು.

೫೫. ಡಾ. ಸಿದ್ದಲಿಂಗಯ್ಯ, ೧೯೯೭, ''ಗ್ರಾಮದೇವತೆಗಳು'', ಮೂಲಭಾರತಿ ಪ್ರಕಾಶನ, ಬೆಂಗಳೂರು.

೫೬. ಸಿ.ಸಿ.ಎ.ಪೈ. ೧೯೭೮, ''ಜಾನಪದ ವೈಜ್ಞಾನಿಕ ಕ್ಷೇತ್ರಕಾರ್ಯ'', ಕರ್ನಾಟಕ ವಿ.ವಿ. ಧಾರವಾಡ.

೫೭. ಡಾ. ಉಪಾಧ್ಯಾಯ ಯು.ವಿ, ೧೯೯೫, ''ತುಳು ನಿಘಂಟು'', ಆರ್ ಆರ್ ಸಿ, ಉಡುಪಿ.

೫೮. ಉದಯ ವರ್ಮರಾಜ, ೧೯೯೮, ''ತುಳುನಾಡಿನ ಗತವೈಭವ'', ಕನ್ನಡ ಸಾಹಿತ್ಯ ಪರಿಷತ್ತು, ಕೇರಳ ವಿಶೇಷ ಘಟಕ, ಕಾಸರಗೋಡು.

೫೯. ವಿಶ್ವನಾಥ ಬದಿಕಾನ, ೧೯೯೪, ''ಗೌಡ ಕನ್ನಡದ ಜನಪದ ಕತೆಗಳು'', ಮದಿಪು ಪ್ರಕಾಶನ, ಮಂಗಳೂರು.

೬೦. ಡಾ. ವಿವೇಕ ರೈ ಬಿ.ಎ, ೧೯೮೫, ''ಅನ್ವಯಿಕ ಜಾನಪದ'', ಮಂಗಳೂರು ವಿ.ವಿ.

೬೧. ಡಾ. ವಿವೇಕ ರೈ ಬಿ.ಎ, ೧೯೮೫, ''ತುಳು ಜನಪದ ಸಾಹಿತ್ಯ'', ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೬೨. ಡಾ. ವಾಮನ ನಂದಾವರ, ೨೦೦೧, ''ಕೋಟಿ ಚೆನ್ನಯ ಜಾನಪದೀಯ ಅಧ್ಯಯನ'', ಹೇಮಾಂಶು ಪ್ರಕಾಶನ, ಮಂಗಳೂರು.

೬೩. ವೀರೇಶ್ ಶೇ. ಬಡಿಗೇರ್ , ೧೯೯೯, ''ಉತ್ತರ ಕರ್ನಾಟಕದ ಗೀತ ಮೇಳಗಳು ಒಂದು ಸಾಂಸ್ಕೃತಿಕ ಅಧ್ಯಯನ'', ವಿಮೋಚನಾ ಪ್ರಕಾಶನ, ಅಥಣಿ.

೬೪. ಶೇಷ ನವರತ್ನ (ಅನು), ೧೯೯೮, ''ಮನು ಸ್ಮೃತಿ'', ಸಮಾಜ ಪುಸ್ತಕಾಲಯ, ಧಾರವಾಡ.

೬೫. ''ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾರಿಹಬ್ಬ'', ಜಾನಪದ ಜಗತ್ತು. ವಿ.ಸ.

೬೬. ''ಮರಾಟಿ ಸಂಪದ ೨೦೦೧ ಸ್ಮರಣ ಸಂಚಿಕೆ'', ಶ್ರೀ ಮಹಾಮ್ಮಾಯಿ ಮರಾಟಿ ಸಂಘ ರಿ., ಅಡ್ಯನಡ್ಕ, ಬಂಟ್ವಾಳ ತಾಲೂಕು, ದ.ಕ.

೬೭. Edgar Thursten & Rangachari 1987 ''Cates and Tribes of Southern India'' A.E.S. New Delhi.

೬೮. Tirumaleshwara Bhat (Tramo) 2000 ''OLASARI'' RRC Udupi.

◆

ಕ್ಷೇತ್ರ ಕಾರ್ಯ ಪ್ರದೇಶ

ಉಡುಪಿ ದಕ್ಷಿಣ ಕನ್ನಡ ಮತ್ತು ಕಾಸರಗೋಡು ಜಿಲ್ಲೆಗಳು





ಶ್ರೀ ಮಹಾಮ್ಮಾಯಿ ಗದ್ದುಗೆ, ಶಿವಪುರ, ಉಡುಪಿ ಜಿಲ್ಲೆ



ಪ್ರತಿದಿನ ಪೂಜೆ ನಡೆಯುವ ಗದ್ದುಗೆಯ ಒಳನೋಟ



ಮಾರಿಗೋಂದೋಳು ಪೂಜೆಯಲ್ಲಿ ಅಲಂಕೃತಗೊಂಡ ಶ್ರೀ ಮಹಮ್ಮಾಯಿ

ಅಂಬಾಗಿಲು, ಪೆರ್ಡೂರು, ಉಡುಪಿ ಜಿಲ್ಲೆ



ಗೋಂದೋಳು ಕುಣಿತದ ಸಂದರ್ಭದಲ್ಲಿ ದರ್ಶನ ಪಾತ್ರಿ



ಪಂಚದೀವಟಿಗೆಗಳೊಂದಿಗೆ ದರ್ಶನ ಪಾತ್ರಿ



ದರ್ಶನ ಪಾತ್ರಿಯು ಬತ್ತಿಸೇವೆಯ ಸಂದರ್ಭದಲ್ಲಿ



ಕೋಳಿಗಳನ್ನು ಬಲಿಕೊಡುತ್ತಿರುವುದು



ಹಂದಿಗಳ ಬಲಿಕೊಡಲು ಆರಂಭ



ಹಂದಿಗಳನ್ನು ಬಲಿಕೊಡುತ್ತಿರುವುದು



ಸರ್ವಾಲಂಕಾರಗೊಂಡಿರುವ ಶ್ರೀದೇವಿಯ ಗದ್ದಿಗೆ



ಗುರುಪದೇಶ ನೀಡುತ್ತಿರುವುದು

ಬಿಳಿವಸ್ತ್ರದೊಳಗೆ ಗುರು - ಶಿಷ್ಯ